
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಕ್ಯಾಸ್ಟ್ರೋ ಕಥೆ

ಸಂಪುಟ 10 ಸಂಚಿಕೆ 5 | ಜನವರಿ 31, 2016 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



'ರೋಹಿತ್'ರುಗಳ ಕೊಲೆಗಡುಕರಿಗೆ ಶಿಕ್ಷೆ ಆಗಲಿ

ನಾಲಾಯಕ್ ಪ್ಯಾರಿಸ್ ಒಪ್ಪಂದ



ಹುಷಾರ್! ಎಸ್ಮಾ ಬಳಕೆ ಬೇಡ !!

ಕೈಗಾರಿಕೆ ಮತ್ತು ಉದ್ಯೋಗಕ್ಕಾಗಿ ಪ.ಬಂಗಾಳ ಜಾಥಾ

ಜಾತ್ಯಾತೀತ, ಭ್ರಷ್ಟಾಚಾರ ಮುಕ್ತ ನವ ಕೇರಳಕ್ಕಾಗಿಜಾಥಾ



‘ಕೇರಳ ಮಾದರಿ’ಯ ನವೀಕರಣ:
4ನೇ ಕೇರಳ ಅಧ್ಯಯನ ಮಹಾಧಿವೇಶನದ ನಿರ್ಧಾರ

ಭಾರತದ ರಾಜ್ಯಗಳು ಸಂವಿಧಾನ ನಿರೂಪಿಸಿರುವ ಒಕ್ಕೂಟ ತತ್ವವನ್ನು ಕಾಪಾಡಿಕೊಳ್ಳುವ ದೃಢ ಪ್ರಯತ್ನದ ಅಗತ್ಯವಿದೆ. ಮೋದಿ ಸರಕಾರ ಇದರ ಮೇಲೆ ಬಲವಾದ ದಾಳಿ ಮಾಡುತ್ತಿದೆ. ಯೋಜನಾ ಆಯೋಗವನ್ನು ರದ್ದು ಮಾಡಿದ ಮೇಲೆ ಈಗ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನೂ ರದ್ದು ಮಾಡಿ ಅಧಿಕಾರಗಳ ಮತ್ತು ಹಣಕಾಸಿನ ಕೇಂದ್ರೀಕರಣವನ್ನು ತೀವ್ರಗೊಳಿಸುತ್ತಿದೆ. ಇದುವರೆಗೆ ಪರ್ಯಾಯ ಆರ್ಥಿಕ ಧೋರಣೆಗಳನ್ನು ಅನುಸರಿಸಲು ತುಸುವಾದರೂ ಸ್ವಾಯತ್ತತೆ ರಾಜ್ಯಗಳಿಗಿತ್ತು. ಈಗ ಕೇಂದ್ರ ಸರಕಾರದ ಕಾರ್ಪೊರೇಟ್-ಪರ ಧೋರಣೆಗಳಿಗಿಂತ ಭಿನ್ನವಾದ ಧೋರಣೆಗಳನ್ನು ಯಾವ ಸರಕಾರವೂ ಅನುಸರಿಸಲಾಗದಂತೆ ಮಾಡಲಾಗುತ್ತಿದೆ. ಇಂತಹ ಕೇಂದ್ರೀಕರಣವೇ ನವ-ಉದಾರವಾದಕ್ಕೆ ಬೇಕಾಗಿದೆ- ಇದು ಸೀತಾರಾಮ್ ಯೆಚೂರಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ, ತಿರುವನಂತಪುರದ ‘ಎ.ಕೆ.ಜಿ. ಪಡಣ ಗವೇಶಣ ಕೇಂದ್ರಮ್’(ಅಧ್ಯಯನ ಸಂಶೋಧನಾ ಕೇಂದ್ರ)ನ ನಾಲ್ಕನೇ ಕೇರಳ ಅಂತರ್ರಾಷ್ಟ್ರೀಯ ಅಧ್ಯಯನ ಮಹಾಧಿವೇಶನವನ್ನು ಉದ್ಘಾಟಿಸುತ್ತ ಹೇಳಿರುವ ಮಾತು.

ಈ ನಾಲ್ಕನೇ ಮಹಾಧಿವೇಶನ ಜನವರಿ 9 ಮತ್ತು 10ರಂದು ನಡೆಯಿತು. ತಿರುವನಂತಪುರದ ಏಳು ಸ್ಥಳಗಳಲ್ಲಿ ನಡೆದ ಈ ಮಹಾಧಿವೇಶನದ ವಿವಿಧ ಅಧಿವೇಶನಗಳಲ್ಲಿ ಹೊಸದೊಂದು ಕೇರಳದ ಮಾಸ್ಟರ್ ಪ್ಲಾನ್ ಮೂಡಿ ಬಂದಿದೆ ಎನ್ನಲಾಗಿದೆ. ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಉನ್ನತ ಮುಖಂಡರು ಮತ್ತು ವಿವಿಧ ವಿಷಯಗಳ ಪರಿಣಿತರು ಮತ್ತು ಕೇರಳದ ಎಲ್ಲೆಡೆಗಳಿಂದ ಬಂದ ಮೂರು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ ಈ ಅಧ್ಯಯನ ಮಹಾಧಿವೇಶನ ಕೇರಳಕ್ಕೆ ಒಂದು ವಿಶಿಷ್ಟ ಸ್ಥಾನಮಾನ ನೀಡಿದ ‘ಕೇರಳ ಮಾದರಿ ಅಭಿವೃದ್ಧಿ’ಯನ್ನು ಪುನರುಜ್ಜೀವನಗೊಳಿಸುವ ನಿರೀಕ್ಷೆ ಮೂಡಿಸಿದೆ.

1994ರಲ್ಲಿ ಕೇರಳದ ಮೊದಲ ಮುಖ್ಯಮಂತ್ರಿ ಹಾಗೂ ಮಹಾನ್ ಚಿಂತಕ ಇಎಂಎಸ್ ನಂಬೂದರಿಪ್ಪಾಡ್‌ರವರ ಸ್ಫೂರ್ತಿದಾಯಕ ಮುತುವರ್ಜಿಯಿಂದ ಕೇರಳ ಅಂತರ್ರಾಷ್ಟ್ರೀಯ ಅಧ್ಯಯನ ಮಹಾಧಿವೇಶನಗಳನ್ನು ಕಾಲಕಾಲಕ್ಕೆ ನಡೆಸುವ ಪ್ರಕ್ರಿಯೆ ಆರಂಭವಾಯಿತು. ಇದರ ಉದ್ದೇಶ ರಾಜ್ಯದಲ್ಲಿ ಅಭಿವೃದ್ಧಿ ಪ್ರಕ್ರಿಯೆಗಳನ್ನು ಮತ್ತು ಧೋರಣೆಗಳನ್ನು ಜಾಗತಿಕ, ಭಾರತೀಯ ಮತ್ತು ಸ್ಥಳೀಯ ಪರಿಸ್ಥಿತಿಗಳಲ್ಲಿ ಸಂಭವಿಸುವ ಬದಲಾವಣೆಗಳ ಹಿನ್ನೆಲೆಯಲ್ಲಿ ವಿಮರ್ಶಿಸಿ ಅವಕ್ಕೆ ಹೊಸ ದಿಕ್ಕು ನೀಡುವುದು. 1996-2001ರ ಎಡ ಪ್ರಜಾಪ್ರಭುತ್ವ ರಂಗ ಸರಕಾರ ಜಾರಿಗೊಳಿಸಿದ ‘ಜನತಾ ಯೋಜನೆ ಪ್ರಚಾರಾಂದೋಲನ’ 1994ರಲ್ಲಿ ಇಎಂಎಸ್‌ರವರ ನೇತೃತ್ವದಲ್ಲಿ ನಡೆದ ಮೊದಲ ಮಹಾಧಿವೇಶನದಲ್ಲಿ ಮೂಡಿಬಂದ ಪರಿಕಲ್ಪನೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ನಾಲ್ಕನೇ ಅಧ್ಯಯನ ಮಹಾಧಿವೇಶನ ಎಪ್ರಿಲ್ 2016ರಲ್ಲಿ ನಡೆಯಲಿರುವ ಕೇರಳ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಈಗ ಅನುಸರಿಸಬೇಕಾದ ಅಭಿವೃದ್ಧಿಯ ದಿಕ್ಕಿನ ಬಗ್ಗೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಜರುಗಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಕೇರಳದ ಯಶೋಗಾಥೆ ಭಾರತದಲ್ಲಿ ಎಡ ಪರ್ಯಾಯವನ್ನು ಚರ್ಚಿಸುವಾಗ ಬಹಳ ಮಹತ್ವದ್ದಾಗುತ್ತದೆ ಎನ್ನುತ್ತ ಎರಡು ಅಂಶಗಳತ್ತ ಗಮನ ಹರಿಸಬೇಕಾಗಿದೆ ಎಂದರು. ಒಂದು, ಪ್ರಸಕ್ತ ಯುಡಿಎಫ್ ಸರಕಾರದ ಅಡಿಯಲ್ಲಿ ಕಾಣುತ್ತಿರುವ ಆರ್ಥಿಕ ಸ್ಥಗಿತತೆ. ಇದರಿಂದಾಗಿ ಅಭಿವೃದ್ಧಿ ಕಾರ್ಯತಂತ್ರಕ್ಕೆ ಹೊಸ ದಿಕ್ಕು ನೀಡಬೇಕಾಗಿದೆ. ಅದಕ್ಕೆ ಒಂದು ಸಂಪೂರ್ಣ ಭಿನ್ನವಾದ ರಾಜಕೀಯ ನಾಯಕತ್ವ ಬೇಕಾಗುತ್ತದೆ, ಅದು ಎಲ್‌ಡಿಎಫ್ ವಿಜಯದಿಂದ ಮಾತ್ರ ಬರಲು ಸಾಧ್ಯ. ಎರಡು, ಈ ವರದಿಯ ಆರಂಭದಲ್ಲಿ ಹೇಳಿದಂತೆ, ಸಂವಿಧಾನದ ಒಕ್ಕೂಟ ತತ್ವದ ಮೇಲೆ ದಾಳಿ. ಕೇರಳಕ್ಕೆ ಇಂತಹ ಅಪಾಯವನ್ನೂ ಪ್ರತಿರೋಧಿಸಬಲ್ಲ ಒಂದು ಸರಕಾರ ಬೇಕಾಗಿದೆ ಎಂದು ಯೆಚೂರಿ ಹೇಳಿದರು.

ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಕೇರಳದ ಹಿರಿಯ ಸಿಪಿಐ(ಎಂ) ಮುಖಂಡರೂ, ಪೊಲಿಟ್‌ಬ್ಯುರೊ ಸದಸ್ಯರೂ ಆದ ಪಿಣರಾಯಿ ವಿಜಯನ್ ಒಂದು ನವಕೇರಳದ ಹೊಸ ಕಣ್ಣೋಟವನ್ನು ಮುಂದಿಡುತ್ತ ಹೊಸದೊಂದು ಅಭಿವೃದ್ಧಿ ಅಜೆಂಡಾವನ್ನು ರೂಪಿಸಬೇಕು ಎಂದರು. ಪರಿಸರ ಸ್ನೇಹಿಯಾದ ಉದ್ದಿಮೆಗಳನ್ನು ರಾಜ್ಯಕ್ಕೆ ಆಕರ್ಷಿಸುವ ವಾತಾವರಣವನ್ನು ಸೃಷ್ಟಿಸಬೇಕಾಗಿದೆ, ಅದರೊಂದಿಗೇ ಸಾಮಾಜಿಕ ಭದ್ರತಾ ಕ್ರಮಗಳನ್ನು ಬಲಪಡಿಸಿ ಸಮಾನ ಅವಕಾಶದ ವಾತಾವರಣವನ್ನೂ ಸೃಷ್ಟಿಸಬೇಕಾಗಿದೆ, ವಿವಿಧ ಸೇವಾವಲಯಗಳನ್ನು ಜನಸಾಮಾನ್ಯರ ಪರವಾಗಿ ದುರಸ್ತಿ ಮಾಡಬೇಕಾಗಿದೆ ಎಂದರು.

ಕೇರಳ ವಿಧಾನಸಭೆಯಲ್ಲಿ ಪ್ರತಿಪಕ್ಷದ ಮುಖಂಡ ವಿ.ಎಸ್.ಅಚ್ಯುತಾನಂದನ್ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಮತ್ತು ಎಕೆಜಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಟಿ.ಎಂ.ಥಾಮಸ್ ಐಸಾಕ್ ಮತ್ತು ಪ್ರಸಿದ್ಧ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಅಧಿವೇಶನದಲ್ಲಿ ಮಾತಾಡಿದರು. ಸಿಪಿಐ(ಎಂ)ನ ಇತರ ಹಿರಿಯ ಮುಖಂಡರಲ್ಲದೆ ಕ್ಯೂಬಾದ ರಾಯಭಾರಿಯಾಗಿ ನೇಮಕರಾಗಿರುವ ಆಸ್ಕರ್ ಜೆ ಮಾರ್ಟಿನೆಕ್ಸ್, ಪ್ರಸಿದ್ಧ ಚರಿತ್ರೆಕಾರ ಪ್ರೊ.ಕೆ.ಎಂ.ಪಣಿಕ್ಕರ್, ಆರ್ಥಿಕ ತಜ್ಞರಾದ ಪ್ರೊ. ಜಯತಿ ಘೋಷ್, ಪ್ರೊ.ವೆಂಕಟೇಶ ಆತ್ರೇಯ ಹಾಜರಿದ್ದರು.

ಉದ್ಘಾಟನಾ ಅಧಿವೇಶನವನ್ನು ಸಮಾರೋಪಗೊಳಿಸಿದ ಪ್ರಕಾಶ ಕಾರಟ್ ಅವರು ತಮ್ಮ ಭಾಷಣದಲ್ಲಿ ಜಾಗತಿಕ ಮತ್ತು ರಾಷ್ಟ್ರೀಯ ಪರಿಸ್ಥಿತಿಗಳು ಹಾಕಿರುವ ಮಿತಿಗಳ ಅಧ್ಯಯನ ನಡೆಸಿ ಪರ್ಯಾಯ ಧೋರಣೆಗಳನ್ನು ರೂಪಿಸಬೇಕು ಎಂದರು. ರಾಜ್ಯ ಸರಕಾರಗಳು ಅಭಿವೃದ್ಧಿ ಉದ್ದೇಶಗಳಿಗೆ ಬೇಕಾದ ಬಂಡವಾಳಕ್ಕಾಗಿ ಪರಸ್ಪರ ಸ್ಪರ್ಧೆ ಮಾಡುವಂತಾಗಿದೆ. ಕೇರಳದಂತಹ ಎಡ ಶಕ್ತಿಗಳು ಬಲಿಷ್ಟವಾಗಿರುವ ರಾಜ್ಯಗಳು ಇದಕ್ಕಾಗಿ ಕಾರ್ಪೊರೇಟ್‌ಗಳ ಮುಂದೆ ತಲೆಬಾಗುವಂತಿಲ್ಲ. ಕೇರಳ ರಾಜ್ಯಕ್ಕೆ ಜನಗಳನ್ನೇ ಗಮನದಲ್ಲಿಟ್ಟುಕೊಡ ಒಮದು ಅಭಿವೃದ್ಧಿ ಮಾರ್ಗ ಬಹಳ ಸೂಕ್ತ. ಇದುವರೆಗಿನ ಸಾಧನೆಗಳನ್ನು ಸಮಕಾಲಿಕಗೊಳಿಸಬೇಕು, ರಾಜ್ಯದ ಹಣಕಾಸು, ನೈಸರ್ಗಿಕ ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲಗಳನ್ನು ಗರಿಷ್ಟವಾಗಿ ಕ್ರೋಡೀಕರಿಸಿ ಹೊಸ ದಿಗಂತಗಳನ್ನು ತೆರೆಯಬೇಕು, ಸಾಮಾಜಿಕ ವಲಯದಲ್ಲಿನ ಸಾಧನೆಗಳನ್ನು ಮುಂದೊಯ್ಯಬೇಕು ಎಂದು ಕಾರಟ್ ಹೇಳಿದರು.

‘ಸರಕುಗಳ ಉತ್ಪಾದನೆಯನ್ನು ವಿಸ್ತರಿಸುವ ಮೂಲಕ ಮಾತ್ರವೇ ಕೇರಳ ಪ್ರಗತಿ ಪಥದಲ್ಲಿ ಸಲಗಲು ಸಆಧ್ಯ’ಎಂಬ ಮೊದಲ ಅದ್ಯಯನ ಮಹಾಧಿವೇಶನದ ಮೌಲ್ಯಮಾಪನ ಈಗಲೂ ಪ್ರಸ್ತುತ ಎಂದ ಅವರು ಕೇರಳದಲ್ಲಿ ಭಾರೀ ಉದ್ದಿಮೆಗಳಿಗೆ ಅವಕಾಶವಿಲ್ಲ, ಮಾಹಿತಿ ತಂತ್ರಜ್ಞಾನ ಮತ್ತು ಬಯೋಟೆಕ್ನಾಲಜಿ ಉದ್ದಿಮೆಗಳಿಗೆ ಉತ್ತೇಜನೆ ನೀಡಬೇಕು, ಸಣ್ಣ ಮತ್ತು ಪಾರಂಪರಿಕ ಉದ್ದಿಮೆಗಳನ್ನು ಮೇಲ್ದರ್ಜೆಗೆ ಏರಿಸಬೇಕು, ಅಲ್ಲಿಯ ಕಾರ್ಮಿಕರ ಮತ್ತು ಪ್ರಾಯೋಜ-ಕರ ಹಿತಗಳನ್ನು ರಕ್ಷಿಸುವ ರೀತಿಯಲ್ಲಿ ಉತ್ತೇಜನೆ ನೀಡಬೇಕು ಎಂದು ಸೂಚಿಸಿದರು. ಸಾರ್ವಜನಿಕ ವಲಯವನ್ನು ರಕ್ಷಿಸಿ ಮೇಲ್ದರ್ಜೆಗೆ ಏರಿಸಬೇಕು, ಶಿಕ್ಷಣದ, ಅದರಲ್ಲೂ ವೃತ್ತಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಬೇಕು, ಕೃಷಿ ಉತ್ಪನ್ನಗಳ ಬೆಲೆ ಇಳಿಕೆಯಿಂದ ಆಗಿರುವ ಬಿಕ್ಕಟ್ಟನ್ನು ಪರಿಹರಿಸಲು ಸೂಕ್ರ ಕಾಯ್ಕ್ರಮವನ್ನು ರೂಪಿಸಬೇಕು ಎಂದು ಪ್ರಕಾಶ ಕಾರಟ್ ಸಲಹೆ ನೀಡಿದರು.

ಎಡ ಪರ್ಯಾಯ, ಜಾತ್ಯಾತೀತ ಕೇರಳ-ಒಂದು ಚಾರಿತ್ರಿಕ ನೋಟ, ಜಾತ್ಯಾತೀತತೆ ಮತ್ತು ಅಭುವೃದ್ಧಿ ಮತ್ತು ಜಾಗತೀಕರಣಗೊಳ್ಳುತ್ತಿರುವ ವ್ಯವಸ್ಥೆಯಲ್ಲಿ ಕಾರ್ಮಿಕ ಸಂಬಂಧಗಳು ಎಂಬ ನಾಲ್ಕು ವಿಷಯಗಳ ಮೇಲೆ ಚರ್ಚೆಗಳು ನಡೆದವು.

ವಿವಿಧ ಅಧಿವೇಶನಗಳಲ್ಲಿ ನಡೆದ ಕಲಾಪಗಳಲ್ಲಿ ಕೇರಳದ ಅಭಿವೃದ್ಧಿಗೆ 50,000 ಕೋಟಿ ರೂ.ಗಳ ಸಾರ್ವಜನಿಕ ಹೂಡಿಕೆ ಬೇಕಾಗಿದೆ ಮತ್ತು ಸರಕಾರದ ಆದಾಯಗಳು ಸೋರಿ ಹೊಗದಂತೆ ತಡೆಯಬೇಕಾಗಿದೆ ಎಂಬುದರ ಮೇಲೆ ಒತ್ತು ಬಂದಿತು.

ಈ ಚರ್ಚೆಗಳಲ್ಲಿ ಮೂಡಿಬಂದ ಇನ್ನೊಂದು ಮಹತ್ವದ ಸಲಹೆ ಎಂದರೆ ರಾಜ್ಯದಲ್ಲಿರುವ ಎಲ್ಲ ಸಹಕಾರಿ ಬ್ಯಾಂಕುಗಳನ್ನು ಸಂಯೋಜಿಸಿ ಕೇರಳದ ಒಂದು ಸವಂತ ಬ್ಯಾಂಕನ್ನು ಸ್ಥಾಪಿಸಬೇಕು ಎಂಬುದು. ಮೂಲರಚನೆಯ ಸೌಲಭ್ಯಗಳನ್ನು ನಿರ್ಮಿಸಲು ಹಣಕಾಸು ಲಭ್ಯತೆ ಒಂದು ಸಮಸ್ಯೆಯಾಗಬಾರದು ಎಂದು ಅಭಿಪ್ರಾಯ ಪಡಲಾಯಿತು.

ರಾಜ್ಯದ ಎಲ್ಲ 140 ವಿಧಾನಸಭಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ವಿಚಾರ ಸಂಕಿರಣಗಳನ್ನು ನಡೆಸಲು ಕೂಡ ನಿರ್ಧರಿಸಲಾಯಿತು. ಈ ಮೂಲಕ ಜನಗಳಿಂದ ಸೂಚನೆಗಳನ್ನು ಸಂಗ್ರಹಿಸಿ ಎಡಪ್ರಜಾಪ್ರಭುತ್ವ ರಂಗದ ಚುನಾವಣಾ ಪಣಾಳಿಕೆಯನ್ನು ರೂಪಿಸುವಲ್ಲಿಯೂ ಜನತೆಯ ಭಾಗವಹಿಸುವಿಕೆ ಇರುವಂತೆ ಮಾಡಬೇಕು ಎಂದು ನಿರ್ಧರಿಸಲಾಯಿತು. ಜನತಾ ಯೋಜನೆಯ ಕಾರ್ಯಕ್ರಮದ ಎರಡನೇ ಘಟ್ಟ, ಸಾವಯವ ಕೃಷಿ ಮತ್ತು ಕುಡುಂಬಶ್ರೀ ಘಟಕಗಳು ಪಾತ್ರವಹಿಸುವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಬಗ್ಗೆಯೂ ಚರ್ಚಿಸಲಾಯಿತು.

ಕೇರಳದ ನಾಲ್ಕನೇ ಅಧ್ಯಯನ ಮಹಾಧಿವೇಶನ ಕೇರಳ ಮಾದರಿಯನ್ನು ಬದಲಾದ ಜಗತ್ತಿನ ಅಗತ್ಯಗಳಿಗೆ ಅನುಗುಣವಾಗಿ ಪುನರುಜ್ಜೀವನಗೊಳಿಸಲು ಮತ್ತು ಕೇಂದ್ರೀಕರಣದ ನೀತಿಗಳ ವಿರುದ್ಧ ಒಂದು ಬೃಹತ್ ಹೋರಾಟವನ್ನು ನಡೆಸಲು ನಿರ್ಧರಿಸಿತು.

ªAiÀvÉAzÀgÉ EzÀÄ

ತಿಲಕರು ಅಸ್ಪೃಶ್ಯ ಕುಟುಂಬದಲ್ಲಿ ಹುಟ್ಟಿದ್ದರೆ, ಅವರು ‘ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು’ ಎಂಬ ಘೋಷಣೆ ಮಾಡುತ್ತಿರಲಿಲ್ಲ. ಬದಲಾಗಿ, ‘ಅಸ್ಪೃಶ್ಯತೆಯ ವಿನಾಶ ನನ್ನ ಜನ್ಮಸಿದ್ಧ ಹಕ್ಕು’ ಎಂಬ ಘೋಷಣೆ ಮಾಡುತ್ತಿದ್ದರು.



-ಡಾ. ಬಿ.ಆರ್. ಅಂಬೇಡ್ಕರ್

ಈಗ ಆಹಾರ ಭದ್ರತೆಯನ್ನಲ್ಲ, ಆಹಾರ ಸಮಾನತೆಯನ್ನು ಕೇಳಬೇಕಾಗಿದೆ-ಪಿ.ಸಾಯಿನಾಥ್

ಅಖಿಲ ಭಾರತ ಅಂಗನವಾಡಿ ನೌಕರರ ಮತ್ತು ಸಹಾಯಕಿಯರ ಒಕ್ಕೂಟ 25 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ‘ಅಪೌಷ್ಟಿಕತೆ, ಸರಕಾರದ ಧೋರಣೆಗಳು ಮತ್ತು ಐಸಿಡಿಎಸ್’ ಎಂಬ ವಿಷಯದ ಮೇಲೆ ಒಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಇದರಲ್ಲಿ ಮಾತಾಡುತ್ತ ಪ್ರಖ್ಯಾತ ಪತ್ರಕರ್ತ ಪಿ.ಸಾಯಿನಾಥ್ ದೇಶದಲ್ಲೀಗ ಆಹಾರ ಭದ್ರತೆ-ಗಿಂತ ಹೆಚ್ಚಾಗಿ ಆಹಾರ ಸಮಾನತೆ ಬೇಕಾಗಿದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಯಾವುದೇ ಅಧಿಕಾರಿಗಿಂತಲೂ ಹೆಚ್ಚು ಮಹತ್ವದ ಕೆಲಸವನ್ನು ಮಾಡುತ್ತಿದ್ದಾರೆ ಎಂದರು.

ದೇಶದಲ್ಲೀಗ ಅಸಮಾನತೆ ಅಸಹನೀಯ ಮಟ್ಟ ತಲುಪುತ್ತಿದೆ. ದೇಶದ 1 ಶೇಕಡಾ ಜನ ದೇಶದಲ್ಲಿನ ಕುಟುಂಬ ಸಂಪತ್ತುಗಳಲ್ಲಿ 49 ಶೇಕಡಾದ ಮೇಲೆ ಒಡೆತನ ಪಡೆದಿದ್ದಾರೆ, ಕೇವಲ 15 ಬಿಲಿಯಾಧಿಪತಿಗಳು 50ಶೇಕಡಾ ಜನಗಳಿಗಿಂತ ಹೆಚ್ಚಿನ ಸಂಪತ್ತು ಹೊಂದಿದ್ದಾರೆ. 70ಶೇಕಡಾ ಕುಟುಂಬಗಳ ವಾರ್ಷಿಕ ಆದಾಯ 5000ರೂ.ಗಿಂತ ಕಡಿಮೆಯಿದೆ.

ಇದು ಸಾಲದ್ದಕ್ಕೆ ಈಗ ನೀರಿನ ಖಾಸಗೀಕರಣದತ್ತವೂ ಹೆಜ್ಜೆಯಿಟ್ಟಿದ್ದು, ನೀರಿನ ಅಸಮಾನತೆಯೂ ಧಾವಿಸಿ ಬರುತ್ತಿದೆ. ಶಿಕ್ಷಣದ ಖಾಸಗೀಕರಣದಿಂದ 40ಕೋಟಿ ಭಾರತೀಯರು ಯಾವುದೇ ಶಿಕ್ಷಣ ಸಂಸ್ಥೆಯ ಮೆಟ್ಟಿಲು ತುಳಿಯದಂತಾಗಿದೆ. ಯಾವ ಸಮಾಜವೂ ಇಂತಹ ಅಸಮಾನತೆಯನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಮಾತಾಡುತ್ತ ಅಂಗನವಾಡಿ ಒಕ್ಕೂಟದ ಉಪಾಧ್ಯಕ್ಷರೂ, ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿಯೂ ಆದ ಕೆ.ಹೇಮಲತಾ ತಮ್ಮ ಒಕ್ಕೂಟ ಐಸಿಡಿಎಸ್‌ನ ಫಲಾನುಭವಿಗಳು, ರೈತರು, ಕೃಷಿಕೂಲಿಕಾರರು, ಮಹಿಳೆಯರು ಮತ್ತು ಕಾರ್ಮಿಕರ ಸಂಘಟನೆಗಳೊಂದಿಗೆ ಶೆರಿಕೊಮಡು ಐಸಿಡಿಎಸ್ ಉಳಿಸುವ ಒಂದು ಪ್ರಚಾರಾಂದೋಲನವನ್ನು ಆರಂಭಿಸಿದೆ ಎಂದರು.

108 ನೌಕರರ ಮೇಲೆ 'ಎಸ್ಮಾ' ಬೆದರಿಕೆ ನಿಲ್ಲಿಸಿ!

ಸಂಪಾದಕೀಯ

ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಹೋರಾಟಕ್ಕೆ ಮುಂದಾಗಿರುವ '108' ಅಂಬುಲೆನ್ಸ್ ಸಿಬ್ಬಂದಿಗಳ ವಿರುದ್ದ 'ಎಸ್ಮಾ' ಜಾರಿಗೊಳಿಸುವ ಬೆದರಿಕೆಯನ್ನು ಆರೋಗ್ಯ ಸಚಿವ ಯು.ಟಿ. ಖಾದರ್ ಬೆದರಿಕೆ ಹಾಕಿದ್ದಾರೆ. ಈ ನೌಕರ ವಿರೋಧಿ ಕಾಯ್ದೆಯು ರಾಜ್ಯದಲ್ಲಿ ಸುಮಾರು 10 ವರ್ಷಗಳ ಕಾಲ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿತ್ತು. 2008 ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರ ಇದನ್ನು ಕಾರ್ಮಿಕ ಹಾಗೂ ನೌಕರ ವರ್ಗದ ವಿರೋಧದ ನಡುವೆಯೂ ವಿಧಾನ ಮಂಡಲದಲ್ಲಿ ಅಂಗೀಕರಿಸಿ ರಾಷ್ಟ್ರಪತಿ ಒಪ್ಪಿಗೆಗೆ ಕಳಿಸಿತ್ತು. ಆದರೆ ಬಿಜೆಪಿಯೊಳಗೆ ಭುಗಿಲೆದ್ದ ಅಧಿಕಾರದ ಕಚ್ಚಾಟ ಮತ್ತು ಆಂತರಿಕ ಒಳಜಗಳದಿಂದಾಗಿಯೇ ಕೊನೆಗೆ ಅಧಿಕಾರದ ಅವಧಿಯೇ ಕೊನೆಗೊಂಡು ವಿಧಾನಸಭೆ ವಿಸರ್ಜನೆಯಾಯಿತು. ಇದರಿಂದ ಸಹಜವಾಗಿಯೇ ರಾಷ್ಟ್ರಪತಿಗೆ ಕಳಿಸಲಾದ ಆ ಮಸೂದೆ ತನ್ನ ಅಸ್ತಿತ್ವ ಕಳೆದುಕೊಂಡಿತ್ತು.

ಆದರೆ ಬಿಜೆಪಿ ದುರಾಡಳಿತದ ಲಾಭಪಡೆದು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಬಂಡವಾಳಿಗರು ಹಾಗೂ ಉದ್ಯಮಪತಿಗಳನ್ನು ಒಲೈಸಲು ಮತ್ತೆ 'ಎಸ್ಮಾ' ಕಾನೂನನ್ನು ಜಾರಿಗೊಳಿಸಿತು. ಈ ಸಂದರ್ಭದಲ್ಲಿ ಸಿಐಟಿಯು ವಿಶೇಷವಾಗಿ ಎಸ್. ಪ್ರಸನ್ನಕುಮಾರ್ ಅವರ ಮುತುವರ್ಜಿಯಿಂದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಹಾಗೂ ನೌಕರರ ಸಂಘಗಳನ್ನು ಒಂದೆಡೆ ಸೇರಿಸಿ ದುಂಡು ಮೇಜಿನ ಸಭೆಯನ್ನು ನಡೆಸಿ ಈ ಕರಾಳ ಮಸೂದೆಯ ವಿರುದ್ದ ಪ್ರಬಲ ವಿರೋಧ ವ್ಯಕ್ತಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಕಾರ್ಮಿಕ ಸಂಘಗಳು ಮತ್ತು ನೌಕರರ ವರ್ಗ ಒಟ್ಟಾರೆಯಾಗಿ ಹೇಳಿದ್ದೇನೆಂದರೆ 'ರಾಜ್ಯದಲ್ಲಿ ಈ ಹಿಂದೆ ಹತ್ತು ವರ್ಷಗಳ ಕಾಲ 'ಎಸ್ಮಾ' ಕಾನೂನು ಜಾರಿ ಇಲ್ಲದಿದ್ದಾಗ್ಯೂ ಆ ಅವಧಿಯಲ್ಲಿ ನಡೆದ ಸಾರಿಗೆ, ಆರೋಗ್ಯ ಹಾಗೂ ಇತರೆ ಬಹುರಾಷ್ಟ್ರೀಯ ಕಂಪನಿಗಳಲ್ಲಿಯೂ ಕಾರ್ಮಿಕರು ಮತ್ತು ನೌಕರರು ನಡೆಸಲಾದ ಮುಷ್ಕರಗಳು ದ್ವಿಪಕ್ಷೀಯ ಹಾಗೂ ತ್ರಿಪಕ್ಷೀಯ ಸಂಧಾನಗಳ ಮೂಲಕ ಯಶಸ್ವಿಯಾಗಿ ಇತ್ಯರ್ಥಗೊಂಡಿವೆ. ಇಂತಹ ಸನ್ನಿವೇಶದಲ್ಲಿ ಯಾವುದೇ ಅಹಿತಕರ ಘಟನೆಗಳಿಗೂ ಆಸ್ಪದವಾಗಿಲ್ಲ. ಹೀಗಿರುವಾಗ ಈ 'ಎಸ್ಮಾ' ಕಾನೂನಿನ ಅವಶ್ಯಕತೆ ಏನಿದೆ ಎಂದು ಪ್ರಶ್ನಿಸಿದ್ದವು. ಅಂದಿನ ಆ ಸಭೆಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್ ಮಾತನಾಡಿ ಸಾಧ್ಯವಾದರೆ ಈ ಮಸೂದೆ ಜಾರಿಯ ವಿರುದ್ದ ಇಡೀ ಕರ್ನಾಟಕವನ್ನೇ ಬಂದ್ ಮಾಡಿದರೂ ತಪ್ಪಿಲ್ಲ ಎನ್ನುವ ಅವರ ಹೇಳಿಕೆಯಿಂದ ಈ ಕಾನೂನು ಎಂತಹ ಭೀಕರತೆಯಿಂದ ಕೂಡಿದ್ದು ಎನ್ನುವುದು ಅರಿವಾಗುತ್ತದೆ. ಆದರೆ ಅದನ್ನು ಸರಕಾರ ಕಿವಿಗೆ ಹಾಕಿಕೊಳ್ಳದೇ ಅದಕ್ಕೆ ರಾಷ್ಟ್ರಪತಿ ಒಪ್ಪಿಗೆಯನ್ನು ತನ್ನ ಕಾರ್ಮಿಕ ವಿರೋಧಿತನವನ್ನು ಪ್ರದರ್ಶಿಸಿತು.

ಕಳೆದ ಹತ್ತಾರು ವರ್ಷಗಳಿಂದಲೂ ಬಂಡವಾಳಗರನ್ನು ಆಕರ್ಷಿಸಲು ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರಗಳು ಹಲವು ಕಸರತ್ತುಗಳನ್ನು ನಡೆಸುತ್ತಿವೆ. ಆದರೆ ಬಂಡವಾಳ ಹರಿದು ಬಂದಿದ್ದು ಅಷ್ಟಕಷ್ಟೇ. ಇದೀಗ ಮತ್ತೆ ಕಾಂಗ್ರೆಸ್ ಸರಕಾರ ರಾಜ್ಯಕ್ಕೆ ವಿದೇಶಿ ಬಂಡವಾಳ ಆಕರ್ಷಿಸುವ ಸಲುವಾಗಿ ಬಂಡವಾಳಿಗರ ಸಮಾವೇಶ ನಡೆಸಲು ಮುಂದಾಗಿದೆ. ಬಂಡವಾಳಿಗರ ಹೂಡಿಕೆಗೆ ಉತ್ತಮವಾದ ವಾತವರಣವಿದೆ ಎಂದು ಬಿಂಬಿಸುವ ಸಲುವಾಗಿ ಕಾರ್ಮಿಕ ಕಾನೂನುಗಳನ್ನು ಸುಧಾರಣೆಯ ಹೆಸರಲ್ಲಿ ಉದ್ಯಮಪತಿಗಳ ಪರವಾಗಿ ತಿದ್ದುಪಡಿ ಮಾಡಲು ಮುಂದಾಗಿದೆ. ಸಾಲದೆಂಬಂತೆ ಅನಗತ್ಯವಾಗಿ ಕಾರ್ಮಿಕ ವರ್ಗದ ಧರಣಿ, ಪ್ರತಿಭಟನೆ ಹಾಗೂ ಮೆರವಣಿಗೆಗಳಿಗೆ ಈಗಾಗಲೇ ಹಲವು ಅಡ್ಡಿಗಳನ್ನು ಮಾಡುತ್ತಿದೆ. ಅದರ ಭಾಗವಾಗಿ ಮತ್ತೆ ಭುಸುಗುಡುತ್ತಿರುವುದೇ ಈ 'ಎಸ್ಮಾ' ಎನ್ನುವ ಕಾನೂನಿನ ಭೂತ.

ಆಂಧ್ರ ಮೂಲದ ಜಿ.ವಿ.ಕೆ.ಇ.ಎಂ.ಆರ್.ಐ. ಖಾಸಗೀ ಕಂಪನಿ ಈ 108 ಅಂಬುಲೆನ್ಸ್ ಸೇವೆಯನ್ನು ನೀಡಲು ಹಲವು ವರ್ಷಗಳಿಂದ ರಾಜ್ಯ ಸರಕಾರದಿಂದ ಗುತ್ತಿಗೆ ಪಡೆದಿದೆ. ರಾಜ್ಯದಲ್ಲಿ ಸುಮಾರು ನಾಲ್ಕು ಸಾವಿರ 108 ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ನಿಗದಿತ ಕೆಲಸದ ಅವಧಿ ಇಲ್ಲ, ಯಾವುದೇ ಕೆಲಸದ ಹಾಗೂ ಸೇವಾ ಭದ್ರತೆ ಇಲ್ಲ. ಈ ಬೇಡಿಕೆಗಳಿಗಾಗಿ ಈ ಹಿಂದೆಯೂ ಹಲವು ಬಾರಿ ಹೋರಾಟಗಳನ್ನು ಅವರು ನಡೆಸಿದ್ದಾರೆ. ಸಿಐಟಿಯು ರಾಜ್ಯ ಸಮಿತಿ ಅವರ ಹೋರಾಟಕ್ಕೆ ಸ್ವತಃ ಭಾಗವಹಿಸಿ ಬೆಂಬಲ ನೀಡಿತ್ತು. ಆದರೆ ಮುಷ್ಕರ ನಡೆಸಿದಾಗಲೆಲ್ಲಾ ಸುಳ್ಳು ಭರವಸೆಗಳನ್ನು ನೀಡಿ ಅವರ ಮುಷ್ಕರ ನಿಲ್ಲಿಸಲು ಯಶಸ್ವಿಯಾಗಿದ್ದರು. ಆದರೆ ಭರವಸೆಗಳು ಮಾತ್ರ ಹಾಗೆ ಉಳಿದವು. ಈ ಹಿನ್ನಲೆಯಲ್ಲಿ ಪುನಃ ಅವರು ಇದೇ ಜನವರಿ 24 ರಿಂದ ಮುಷ್ಕರಕ್ಕೆ ಹೋಗುವ ಎಚ್ಚರಿಕೆಯನ್ನು ನೀಡಿದ್ದಾರೆ. ಆದರೆ ಹಲವು ಸಂಕಷ್ಟಗಳ ನಡುವೆಯೂ ಅನಾರೋಗ್ಯ ಪೀಡಿತ ಹಾಗೂ ಅಪಘಾತಕ್ಕೊಳಗಾಗುವ ಜನರಿಗೆ ತುರ್ತು ಚಿಕಿತ್ಸೆ ನೀಡಲು ಶ್ರಮಿಸುವ ಈ ನೌಕರರಿಗೆ ಮಾತ್ರ ಜೀವನ ಭದ್ರತೆ ಎಂಬುದಿಲ್ಲ. ಇದನ್ನು ಖಾತ್ರಿಗೊಳಿಸಬೇಕಾದ ಕಂಪನಿಯ ಆಡಳಿತ ಮತ್ತು ಸರಕಾರಗಳನ್ನು 'ಎಸ್ಮಾ' ಕಾನೂನನ್ನು ಮುಂದು ಮಾಡಿ ಅವರ ನ್ಯಾಯಬದ್ಧ ಹಕ್ಕುಗಳನ್ನು ದಮನಿಸಲು ಹೊರಟಿವೆ. ಆದ್ದರಿಂದ ಸರಕಾರದ ಈ ನಡೆ ಖಂಡನಾರ್ಹ. 108 ಸಿಬ್ಬಂದಿ ಮುಷ್ಕರ ಹೂಡಿದರೆ ಕಂಪನಿಯ ಕಾಂಟ್ರಾಕ್ಟನು ರದ್ದು ಮಾಡುವುದಾಗಿಯೂ ಸಚಿವರು ಬೆದರಿಸಿದ್ದಾರೆ ಎಂದು ವರದಿಯಾಗಿದೆ. ಇದು ಸ್ವತಃ ಕಾರ್ಮಿಕರ ಹಿತಾಸಕ್ತಿ ಕಾಪಾಡಬೇಕಾದ ಸರಕಾರ ಖಾಸಗಿ ಕಂಪನಿಯೊಂದನ್ನು ಕಾರ್ಮಿಕ–ವಿರೋಧಿ ಕ್ರಮ ಕೈಗೊಳ್ಳಲು ಒತ್ತಡ ಹೇರುತ್ತಿರುವುದು ವಿಪರ್ಯಾಸ. ಸರಕಾರ ಕಾರ್ಮಿಕರಿಗೆ ಮತ್ತು ಕಂಪನಿಗೆ ಬೆದರಿಕೆ ಹಾಕುವುದನ್ನು ಬಿಟ್ಟು ಕಾರ್ಮಿಕರ ಸಮಸ್ಯೆ ಬಗೆಹರಿಸಲು ಮಧ್ಯಪ್ರವೇಶ ಮಾಡಬೇಕು.



ಇದು ಬರಿಯ 108 ಸೇವಾ ಕಾರ್ಮಿಕರ ಪ್ರಶ್ನೆ ಮಾತ್ರವಲ್ಲ. ಎಲ್ಲ ಕಾರ್ಮಿಕ ಸಂಘಗಳು ಒಗ್ಗಟ್ಟಾಗಿ 'ಎಸ್ಮಾ' ಕ್ರಮದ ಬಳಕೆಯನ್ನು ವಿರೋಧಿಸಬೇಕಿದೆ. ಒಂದು ವೇಳೆ ಯಾವುದೇ ನೌಕರರ ಚಳವಳಿಗಳ ಮೇಲೆ ರಾಜ್ಯ ಸರಕಾರ 'ಎಸ್ಮಾ'ವನ್ನು ಕಾನೂನನ್ನು ಪ್ರಯೋಗಿಸಲು ಮುಂದಾದರೆ ತೀವ್ರ ಪ್ರತಿರೋಧವನ್ನು ತೋರಬೇಕಿದೆ.

60 ವರ್ಷಗಳ ಹಿಂದೆ

"50 ಸಾವಿರಕ್ಕೆ ಮೇಯರ್ ಸ್ಥಾನ"

ಇದು 1957 ಜನವರಿ 3ನೇ ವಾರದ ಸಂಚಿಕೆಯಲ್ಲಿ ಗಮನ ಸೆಳೆದ ಬರಹ. ಬೆಂಗಳೂರು ಮೇಯರ್ ಸ್ಥಾನಕ್ಕೆ, ಮಿಲ್ ಬಟ್ಟೆಗಳ ದೊಡ್ಡ ವಿತರಕ ಮತ್ತು ಶ್ರೀಮಂತ ವ್ಯಾಪಾರಸ್ಥ ಜಿನಭಾಯ್ ದೇವಿದಾಸ್ ಅವರ ಆಯ್ಕೆಯ ಹಿಂದಿನ ಹುನ್ನಾರವನ್ನು ಈ ವರದಿ ಬಯಲು ಮಾಡುತ್ತದೆ. ಕಾಂಗ್ರೆಸ್ ಚುನಾವಣೆಗೆ 50 ಸಾವಿರ ರೂ. ಕೊಡಬೇಕೆಂಬ ಶರತ್ತಿನ ಮೇಲೆ ಅವರನ್ನು ಮೇಯರ್ ಆಗಿ ಆಯ್ಕೆ ಮಾಡಲಾಗಿದೆ. 30 ಸಾವಿರ ರೂ. ಅಡ್ವಾನ್ಸ್ ತೆಗೆದುಕೊಳ್ಳಲಾಗಿದೆ. ದೊಡ್ಡ ವ್ಯಾಪಾರಸ್ಥರು, ಉದ್ಯಮಪತಿಗಳಿಗೆ ರಾಜಕೀಯ ಸ್ಥಾನಮಾನವನ್ನು ದುಡ್ಡಿಗೆ ಮಾರಿಕೊಳ್ಳುವುದು, ಆ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭ್ರಷ್ಟಗೊಳಿಸುವುದು ಕಾಂಗ್ರೆಸ್ ಪಕ್ಷ 60 ವರ್ಷಗಳಷ್ಟು ಹಳೆಯ ಸಂಪ್ರದಾಯ!

ಇದೇ ಸಂಚಿಕೆಯಲ್ಲಿ 1957ರ ಚುನಾವಣೆಗೆ ಬಿಜಾಪುರ, ಕೊಡಗು, ಕೋಲಾರ ಮುಂತಾದ ಕಡೆ ಕಾಂಗ್ರೆಸ್ಸೇತರ ಸಂಯುಕ್ತ ರಂಗ ರಚಿಸುವ ಮಾತುಕತೆಗಳು, ರಾಷ್ಟ್ರೀಯ ಮತ್ತು ಪ್ರಾಂತೀಯ ಮಟ್ಟದಲ್ಲೂ ತೀವ್ರವಾದ ಕಾಂಗ್ರೆಸ್ ಗುಂಪುಗಾರಿಕೆ, ಕೋಲಾರದ ಕಾಂಗ್ರೆಸ್ ಗೂಂಡಾಗಿರಿ ಇತ್ಯಾದಿ ಆಸಕ್ತಿಕಾರಕ ಅಂಶಗಳು ಸಹ ಇವೆ.

ಜನಶಕ್ತಿ ಕನ್ನಡ ವಾರಪತ್ರಿಕೆ

janashakthi.co.in

ವೆಬ್ ಸೈಟಿನಲ್ಲಿ ಏನಿದೆ?

ಜನಶಕ್ತಿ ವೆಬ್‌ಸೈಟ್‌ನಲ್ಲಿ ಈ ಕೆಳಗಿನ ವರದಿಗಳನ್ನು ಹಾಕಲಾಗಿದೆ. ಇವು ಪ್ರಿಂಟ್ ಆವೃತ್ತಿಯಲ್ಲಿ ಇಲ್ಲ:

- ದಾಂಡೇಲಿಯಲ್ಲಿ ಯಾವುದೇ ಸುರಕ್ಷತೆಯಿಲ್ಲದೆ "ಪೌರ ಕಾರ್ಮಿಕರನ್ನು ಕೆಲಸಕ್ಕೆ ಇಳಿಸಿದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ"
- ಹುಬ್ಬಳ್ಳಿ : ಹೆಸ್ಕಾಂ ಕಛೇರಿ ಎದುರು ಗುತ್ತಿಗೆ ಕಾರ್ಮಿಕರ ಪ್ರತಿಭಟನೆ
- ತುಮಕೂರು: ಬೀದಿಗೆ ಬಂದ ಕರುತೂರಿ ಫುಡ್ಸ್ ಕಾರ್ಮಿಕರ ಬದುಕು
- ರಾಮದುರ್ಗ: ಬೆಳೆ ಪರಿಹಾರ ಪಾವತಿಗಾಗಿ ರೈತ ಸಭೆಯಲ್ಲಿ ಆಗ್ರಹ
- ವಿಜಯಪುರ : ಮಣ್ಣು ಸಾಗಿಸುವ ಡಂಬರ್ ಲಾರಿಗಳ ಹಾವಳಿಯಿಂದ ರೈತರಿಗೆ ಹಾನಿ
- ಬೆಳ್ತಂಗಡಿ: ರೈತರ ಕುಮ್ಕಿ ಹಕ್ಕಿನ ರಕ್ಷಣೆಗಾಗಿ ತಾಲೂಕು ಕಚೇರಿ ಎದುರು ಪ್ರತಿಬಟನೆ
- ವಿವಿಧ ಜಿಲ್ಲೆಗಳಲ್ಲಿ ಕಾಂ.ಎಸ್.ಪ್ರಸನ್ನಕುಮಾರ್‌ರವರಿಗೆ ಶ್ರದ್ಧಾಂಜಲಿ ನಡೆದ ವರದಿಗಳು
- ಕೊರಟಗೆರೆ ಸರ್ಕಾರಿ ಕಾಲೇಜಿನಲ್ಲಿ ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರತಿಭಟನೆ
- ಗಂಗಾವತಿ ಹಾಸ್ಟಲ್ ವಿದ್ಯಾರ್ಥಿಗಳ ಪ್ರತಿಭಟನೆ
- ಕೇರಳದಲ್ಲಿ ಉಸ್ತಾದ್ ಗುಲಾಂ ಅಲಿಗೆ ಮನತುಂಬಿದ ಸ್ವಾಗತ

ನಮ್ಮ ಮರು-ಟ್ವೀಟ್

@salimdotcomrade ಜನವರಿ 20

ನಮಗೆ ಹರಿದು ಬರುತ್ತಿರುವ ಭಾರೀ ಬೆಂಬಲದಿಂದ ಅವರು ಭೀತರಾಗಿದ್ದಾರೆ. ಅವರು ಜನರ ವಿಶ್ವಾಸ ಕಳೆದುಕೊಂಡಿದ್ದಾರೆ. ನಾವು ತೃಣಮೂಲದ ಜಂಗಲ್ ರಾಜ್ ಕೊನೆಗೊಳಿಸುತ್ತೇವೆ. ಪ್ರಜಾಪ್ರಭುತ್ವಕ್ಕೇ ಜಯ. ತೃಣಮೂಲ ಹಟಾವೋ ಬಾಂಗ್ಲಾ ಬಚಾವೋ !

– ಮಹಮ್ಮದ್ ಸಲೀಂ, ಸಿಪಿಐ(ಎಂ) ಪಿ ಬಿ ಸದಸ್ಯ, ಲೋಕಸಭಾ ಸದಸ್ಯ

ಸಂಸದರ ಕಚೇರಿ ಮುಂದೆ ಬಿ.ಎಸ್.ಎನ್.ಎಲ್. ಗುತ್ತಿಗೆ ಕಾರ್ಮಿಕರ ಪ್ರತಿಭಟನೆ



ಬಿಎಸ್‌ಎನ್‌ಎಲ್ ಸಂಸ್ಥೆಯ ಕರ್ನಾಟಕ ವೃತ್ತದಲ್ಲಿ ಸಾವಿರಾರು ಕಾರ್ಮಿಕರನ್ನು ಗುತ್ತಿಗೆ ಹಂಗಾಮಿ ಕಾರ್ಮಿಕರೆಂದು ದುಡಿಸಿಕೊಳ್ಳಲಾಗುತ್ತಿದೆ. ಕಾಯಂ ಸ್ವರೂಪದ ಕೆಲಸಗಳನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆಗೆ ನೀಡಬಾರದು ಎಂಬ ಕಾನೂನು ಇದ್ದಾಗ್ಯೂ ಭಾರತ ಸಂಚಾರ ನಿಗಮ(ಬಿಎಸ್‌ಎನ್‌ಎಲ್) ಒಂದು ಸರಕಾರಿ ನಿಗಮವಾಗಿ ಅದನ್ನು ಉಲ್ಲಂಘಿಸಿ ಈ ಕೆಲಸ ಮಾಡುತ್ತಿದೆ. ಅಲ್ಲದೆ ಅಲ್ಲಿ ದುಡಿಯುತ್ತಿರುವ ಕಾರ್ಮಿಕರು ಕಾಯಂ ನೌಕರರು ಮಾಡುವ ಕೆಲಸಗಳನ್ನೇ ನಿರ್ವಹಿಸುತ್ತಿದ್ದರೂ ಅವರಿಗೆ 'ಸಮಾನ ಕೆಲಸಕ್ಕೆ ಸಮಾನ ವೇತನ' ನೀಡದೇ ಶೋಷಿಸಲಾಗುತ್ತಿದೆ. ಇಂತಹ ಹಲವು ಪ್ರಶ್ನೆಗಳನ್ನು ಹತ್ತಾರು ವರ್ಷಗಳಿಂದ ದುಡಿಯುತ್ತಿರುವ ಕಾರ್ಮಿಕರು ಎದುರಿಸುತ್ತಿದ್ದಾರೆ. ಈ ಬಗ್ಗೆ ಸಂಸತ್ತಿನ ಕಾರ್ಮಿಕ ಸ್ಥಾಯಿ ಸಮಿತಿ ಮುಂದೆಯೂ ಈ ಪ್ರಶ್ನೆಗಳನ್ನು ನಮ್ಮ ಅಖಿಲ ಭಾರತ ಸಮಿತಿ ಕೊಂಡೊಯ್ದು ಪ್ರಸ್ತಾಪಿಸಿದೆ. ಸ್ಥಾಯಿ ಸಮಿತಿಯು ಭಾರತ ಸಂಚಾರ ನಿಗಮ(ಬಿಎಸ್‌ಎನ್‌ಎಲ್) ಹಿರಿಯ ಅಧಿಕಾರಿಗಳನ್ನು ತನ್ನ ಮುಂದೆ ಕರೆಸಿ ಈ ಕಾರ್ಮಿಕರ ನ್ಯಾಯಬದ್ಧ ಹಕ್ಕುಗಳನ್ನು ಖಾತ್ರಿಗೊಳಿಸಬೇಕೆಂದು ತಾಕೀತು ಮಾಡಿದೆ. ಇದರ ಪರಿಣಾಮವಾಗಿ ಪ್ರಧಾನ ಕಚೇರಿಯಿಂದ ಸುತ್ತೋಲೆಗಳು ಬಂದಿವೆ. ಆದರೆ ಕೆಳಹಂತದ ಜಿಲ್ಲೆಗಳಲ್ಲಿ ಈಗಲೂ ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ಸಂಬಳ ನೀಡದೇ, ವಾರದ ರಜೆ, ತಿಂಗಳ ರಜೆ, ಭವಿಷ್ಯನಿಧಿ, ವಿಮಾ ಸೌಲಭ್ಯ ನೀಡದೆ ಮತ್ತು ಕಾರ್ಮಿಕರನ್ನು ಕಾನೂನು ವಿರುದ್ಧವಾಗಿ ಯಾವುದೇ ಹೆಚ್ಚುವರಿ ಭತ್ಯೆ ನೀಡದೇ 10/12 ಹಾಗೂ 24 ಗಂಟೆಗಳ ಕಾಲ ಅಮಾನವೀಯವಾಗಿ ದುಡಿಸಿಕೊಳ್ಳಲಾಗುತ್ತಿದೆ.

ಈ ಹಿನ್ನಲೆಯಲ್ಲಿ ಸಂಸದರು ತಮ್ಮ ಕ್ಷೇತ್ರದ ವ್ಯಾಪಿಯಲ್ಲಿ ಬರುವ ಬಿ.ಎಸ್.ಎನ್.ಎಲ್ ಗಳ ಅಧಿಕಾರಿಗಳಿಗೆ ಕಾರ್ಮಿಕ ಕಾನೂನು ಜಾರಿ ಹಾಗೂ ಕಾನೂನುಬದ್ಧ ಸೌಲಭ್ಯಗಳ ಜಾರಿಗೆ ಒತ್ತಾಯ ತರಬೇಕು ಹಾಗೂ ಮುಂದಿನ ಸಂಸತ್ತಿನ ಅಧಿವೇಶನದಲ್ಲಿ ತಾವೂ ಈ ಕುರಿತಾದ ಪ್ರಶ್ನೆಗಳನ್ನು ಎತ್ತಿ ಈ ನೊಂದ ಕಾರ್ಮಿಕರ ಪರವಾಗಿ ಕೆಲಸ ಮಾಡಬೇಕೆಂದು ಕೋರಿ ಸಂಸದರ ಕಚೇರಿ ಮುಂದೆ ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಬಿಎಸ್‌ಎನ್‌ಎಲ್ ನಾನ್–ಪರ್ಮನೆಂಟ್ ಕಾರ್ಮಿಕರ ಸಂಘದಿಂದ ಪ್ರತಿಭಟನೆಗೆ ಕರೆ ನೀಡಲಾಗಿತ್ತು. ಧಾರವಾಡ ಮತ್ತು ಬೆಂಗಳೂರಿನಲ್ಲಿ ಸಂಸದರ ಕಚೇರಿ ಮುಂದೆ ಪ್ರತಿಭಟನೆ ನಡೆದ ವರದಿಗಳು ಬಂದಿವೆ.

ರೂ. 18,000 ರೂ. ಸಾವಿರ ಕನಿಷ್ಟ ವೇತನ : ಸಿಐಟಿಯು ಆಗ್ರಹ

ರಾಜ್ಯ ಕಾರ್ಮಿಕ ಇಲಾಖೆಯು ದಿನಾಂಕ 20.11.2015 ರಂದು 23 ವಿವಿಧ ಉದ್ಯಮ ಕ್ಷೇತ್ರಗಳಿಗೆ ನೀಡಬೇಕಾದ ಕನಿಷ್ಠವೇತನ ಕರಡು ಅಧಿಸೂಚನೆಗಳಿಗೆ ಸಲಹೆ/ಆಕ್ಷೇಪಣೆಗಳು ಸಲ್ಲಿಸಲು ಎರಡು ತಿಂಗಳ ಕಾಲವಕಾಶ ಕೋರಿತ್ತು. ಈ 23 ಉದ್ಯಮ ಕ್ಷೇತ್ರಗಳಲ್ಲಿ ಪಬ್ಲಿಕ್ ಮೋಟಾರ್ ಟ್ರಾನ್ಸ್ ಪೋರ್ಟ್, ಮದ್ಯ ತಯಾರಿಕೆ, ರಸ್ತೆ/ಕಟ್ಟಡ ನಿರ್ಮಾಣ, ಪ್ಲಾಸ್ಟಿಕ್ ವಸ್ತು/ಪೈಪ್/ಸ್ಯಾನಿಟರಿ ವಸ್ತು ತಯಾರಿಕೆ, ಗ್ಲಾಸ್/ಗ್ಲಾಸ್‌ವೇರ್, ಹೊಟೇಲ್, ಲಾಂಡ್ರಿ, ಇಲೆಕ್ಟ್ರಾನಿಕ್ಸ್, ಗೃಹಕೃತ್ಯ, ಸಿನಿಮಾ, ಔಷಧಿ ತಯಾರಿಕೆ, ಆಸ್ಪತ್ರೆ/ನರ್ಸಿಂಗ್ ಹೋಮ್, ಆಹಾರ ಸಂಸ್ಕರಣೆ, ಟಿಂಬರ್, ಇಲೆಕ್ಟ್ರೋಪ್ಲೇಟಿಂಗ್, ಕ್ಲಬ್ ಮುಂತಾದವು ಸೇರಿವೆ.

ಸಿಐಟಿಯು ರಾಜ್ಯ ಸಮಿತಿ ಮತ್ತು ಸಿಐಟಿಯು ನೇತೃತ್ವದ ಕಾರ್ಮಿಕ ಸಂಘಟನೆಗಳ ಪರವಾಗಿ ಈ ಅಧಿಸೂಚನೆಯನ್ನು ಅಧ್ಯಯನ ಮಾಡಿ ಈ ಕೆಳಕಂಡ ಸಲಹೆ/ಆಕ್ಷೇಪಣೆಗಳನ್ನು ಜನವರಿ 19 ರಂದು ಕಾರ್ಮಿಕ ಆಯುಕ್ತರಿಗೆ ಸಲ್ಲಿಸಿದೆ.

1. ಎಲ್ಲಾ ಕೈಗಾರಿಕೆಗಳಿಗೂ ಸಮಾನ ವೇತನ ನಿಗದಿ ಪಡಿಸುವ ಸರ್ಕಾರದ ಕ್ರಮವನ್ನು ನಮ್ಮ ಸಂಘವು ಸ್ವಾಗತಿಸುತ್ತದೆ. ಆದರೆ, ಪ್ರತಿ ಕೈಗಾರಿ–ಕೆಗೂ ಪ್ರತ್ಯೇಕ ಅಧಿಸೂಚನೆಗಳನ್ನು ಹೊರಡಿಸುವ ಬದಲು ಎಲ್ಲಾ ಕೈಗಾರಿಕೆಗಳಿಗೂ ಕುಶಲತೆ ಹಾಗು ಹಿಂದಿನ ಸೇವೆಗೆ ಮಾನ್ಯತೆ ನೀಡುವ ಹೆಚ್ಚುವರಿ ವೇತನವನ್ನು ಸೇರಿದಂತೆ ಒಂದೇ ಅಧಿಸೂಚನೆಯನ್ನು ಹೊರಡಿಸಿ ಏಕಕಾಲಕ್ಕೆ ಕನಿಷ್ಠ ವೇತನ ಪುನರ್ ವಿಮರ್ಶೆ ಆಗುವಂತೆ ಕ್ರಮ ವಹಿಸಬೇಕು.
2. ಸಿಐಟಿಯು ಸಂಘಟನೆ "ಜೀವನಾವಶ್ಯಕತೆಯ ಆಧಾರದಲ್ಲಿ ಕನಿಷ್ಠ ವೇತನ' (ನೀಡ್ ಬೇಸ್ಡ್ ಮಿನಿಮಮ್ ವೇಜಸ್) ನಿಗದಿ ಪಡಿಸಲು ಒತ್ತಾಯಿಸುತ್ತಿದೆ. ಈ ಆಧಾರದಲ್ಲಿ 2006ರ ರಾಜ್ಯದ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕವು 2967(1960=100) ಇದ್ದು, ಅದು 2014ರಲ್ಲಿ 6205 ಅಂಶಗಳಿಗೆ ಹೆಚ್ಚಿದೆ. 2015ರ ಹೆಚ್ಚಳ ಅಂದಾಜು ಶೇ.10 ರಷ್ಟು ಅಂದು ಕೊಂಡರೂ ಅದು ಸುಮಾರು 6800 ಅಂಶಗಳನ್ನು ಮೀರಬಹುದಾಗಿದೆ. ಸುಮಾರು ಶೇ. 130ರಷ್ಟು ಹೆಚ್ಚಳವಾಗಿರುತ್ತದೆ. ಜೀವನಾವಶ್ಯಕ ಕನಿಷ್ಠ ವೇತನವನ್ನು ನಿಗದಿ ಪಡಿಸುವ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯದ ರ್‍ಯಾಪ್ಟಕೋಸ್ ಬ್ರೆಟ್ ವಿವಾದದಲ್ಲಿ ನೀಡಿದ ತೀರ್ಪಿನ ಆಧಾರದಲ್ಲಿ ಮನೆ ಬಾಡಿಗೆ ವೆಚ್ಚವನ್ನು ಇವತ್ತಿನ ದರದಲ್ಲಿ ಒಳಗೊಂಡು ನಿಗದಿಪಡಿಸಬೇಕು.

ಈ ಆಧಾರದಲ್ಲಿ ಅಕುಶಲ ಕಾರ್ಮಿಕರಿಗೆ ವಲಯ 3 ರಲ್ಲಿ ಕನಿಷ್ಠ ಒಂದು ದಿನಕ್ಕೆ ರೂ. 692.30ಪೈಸೆ ಎಂಟು ಗಂಟೆಗಳ ಕೆಲಸಕ್ಕೆ ನಿಗದಿಯಾಗಬೇಕು. ಅಂದರೆ 26 ದಿನಗಳ ಕೆಲಸಕ್ಕೆ ರೂ. 18,000/– ಕನಿಷ್ಠ ವೇತನವನ್ನು ನಿಗದಿಪಡಿಸಬೇಕು. ಗ್ರಾಹಕ ಸೂಚ್ಯಾಂಕದ 6205 ಅಂಶಗಳಿಗೆ ಹೆಚ್ಚಾಗುವ ಪ್ರತಿ ಅಂಶಕ್ಕೂ ಪ್ರತಿ ದಿನಕ್ಕೆ 5 ಪೈಸೆ ತುಟ್ಟಿ ಭತ್ಯೆ ಹೆಚ್ಚಳವನ್ನು ನೀಡುವಂತೆ ಕನಿಷ್ಠ ವೇತನ ನಿಗದಿಪಡಿಸಬೇಕು.

ಈಗಾಗಲೇ ಕೇಂದ್ರ ಸರ್ಕಾರಕ್ಕೆ ಏಳನೇ ವೇತನ ಆಯೋಗವು ಈ ಮಟ್ಟದ ವೇತನವನ್ನು ಶಿಫಾರಸ್ಸು ಮಾಡಿದೆ. ದೇಶಾದ್ಯಂತ ಸಮಾನ ಕನಿಷ್ಠ ವೇತನ ನಿಗದಿ ಪಡಿಸುವ ಕ್ರಮಗಳ ಬಗ್ಗೆ ಕೇಂದ್ರ ಈಗಾಗಲೇ ಚರ್ಚೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಸಲಹೆಯನ್ನು ಪರಿಗಣಿಸಬೇಕೆಂದು ಸಿಐಟಿಯು ಒತ್ತಾಯಿಸುತ್ತದೆ.

ಅಲ್ಲದೆ ಈಗಾಗಲೆ ನಮ್ಮ ಸಂಘವು ಒತ್ತಾಯಿಸುತ್ತಿರುವ ರೀತಿಯಲ್ಲಿ ಹೆಚ್ಚಿದ ಪ್ರತಿ ಕುಶಲತೆಯ ಹಂತಕ್ಕೂ ಶೇ. 15ರಷ್ಟು ಹೆಚ್ಚುವರಿ ವೇತನವನ್ನು ಕನಿಷ್ಠ ವೇತನವಾಗಿ ನಿಗದಿಪಡಿಸಬೇಕು.

ಈಗಾಗಲೇ ಗುತ್ತಿಗೆ ಕಾರ್ಮಿಕರಿಗೆ ನಿಗದಿ ಪಡಿಸಿರುವ ರೀತಿಯಲ್ಲಿ ಎಲ್ಲಾ ಕೈಗಾರಿಕೆಯಲ್ಲಿ ದುಡಿಯುವ ಕಾರ್ಮಿಕರಿಗೆ ಅವರ ಸೇವಾವಧಿಗೆ ಮಾನ್ಯತೆ ನೀಡುವ ಸಲುವಾಗಿ ಪ್ರತಿ ವರ್ಷದ ಸೇವೆಗೆ ಮೂಲ ವೇತನದ ಶೇ. 2 ರಷ್ಟನ್ನು ಸೇವಾ ಭತ್ಯೆಯನ್ನಾಗಿ (ಸರ್ವೀಸ್ ವೈಟೇಜ್)ಮೂಲ ವೇತನಕ್ಕೆ ಸೇರಿಸಿ ನೀಡುವಂತೆ ವೇತನ ನಿಗದಿ ಪಡಿಸಬೇಕು.

ಕರ್ನಾಟಕದ ಕೌಶಲ್ಯ ಹೆಚ್ಚಳಕ್ಕೆ ಹಾಗು ಕಾರ್ಮಿಕರ ಕೌಶಲ್ಯದ ಪ್ರತಿಫಲವನ್ನು ಉತ್ಪಾದನಾ ಹಾಗು ಸೇವಾ ರಂಗದಲ್ಲಿನ ಉದ್ದಿಮೆಗಳು ಉಳಿಸಿಕೊಳ್ಳಲು ಜೀವನಾವಶ್ಯಕ ಕನಿಷ್ಠ ವೇತನವು ಸಹಕಾರಿಯಾಗುತ್ತದೆ. ಗುತ್ತಿಗೆ ಹಾಗು ಹಂಗಾಮಿ ಕೆಲಸದ ಆಧಾರದಲ್ಲಿ ದುಡಿಮೆಯನ್ನು ಕಡಿಮೆ ಕೂಲಿಗಾಗಿ ಶೋಷಿಸುವುದನ್ನು ತಡೆಯಲು ಸಾಧ್ಯವಾಗುತ್ತದೆ.

ಆದ್ದರಿಂದ ಈ ಮೇಲ್ಕಂಡ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಿ ಕನಿಷ್ಠ ವೇತನ ನಿಗದಿಪಡಿಸಲು ಸಿಐಟಿಯು ಪರವಾಗಿ ಕಾರ್ಮಿಕ ಇಲಾಖೆಯನ್ನು ಒತ್ತಾಯಿಸಿದೆ.

ಈ ವಾರ ಚರಿತ್ರೆಯಲ್ಲಿ ಜನವರಿ 19 2009

ಕಾ. ಇ. ಬಾಲಾನಂದನ್ ನಿಧನರಾದ ದಿನ

ಭಾರತದ ಹಿರಿಯ ಟ್ರೇಡ್ ಯೂನಿಯನ್ ಮತ್ತು ಕಮ್ಯುನಿಸ್ಟ್ ನಾಯಕ. ಅವರು 1940ರ ದಶಕದಲ್ಲೇ ಕಾರ್ಮಿಕರ ಸಂಘಟನೆ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡವರು. 5 ವರ್ಷಗಳ ಕಾಲ ಜೈಲು ಮತ್ತು 4.5 ವರ್ಷ ಕಾಲ ಭೂಗತ ಜೀವನ ಕಂಡವರು. ಸಿಐಟಿಯು ನ ಸ್ಥಾಪಕ ಸದಸ್ಯರಾಗಿದ್ದು, 1990ರಿಂದ 2002ರ ವರೆಗೆ ಅದರ ಅಧ್ಯಕ್ಷರಾಗಿದ್ದರು. 1943ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿ 1972 ರಿಂದ ಕೇಂದ್ರ ಸಮಿತಿ ಸದಸ್ಯರಾಗಿ, 1978–2005 ಅವಧಿಯಲ್ಲಿ ಪೊಲಿಟ್ ಬ್ಯುರೊ ಸದಸ್ಯರಾಗಿ ಚಳುವಳಿಯನ್ನು ಮುನ್ನಡೆಸಿದವರು. ಅವರು ಕೇರಳದ ವಿಧಾನಸಭೆ, ಲೋಕಸಭಾ (1980–84) ಹಾಗೂ ರಾಜ್ಯ ಸಭಾ (1988–2000) ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.



ಕೆ. ಮಹಂತೇಶ್

ಮಹದಾಯಿ ನ್ಯಾಯಾಧೀಕರಣಕ್ಕೆ ಸಾರ್ವಜನಿಕರಿಂದ ಸಾಮೂಹಿಕ ಅರ್ಜಿ ಚಳುವಳಿ

"ಕೃಷಿ ಉಳಿಸಿ, ಕೃಷಿಕನನ್ನು ಸಂರಕ್ಷಿಸಿ" ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ

ಚಿಕ್ಕ ದೊಡ್ಡ ರೈತರೆಂದು ಭೇದ ಭಾವ ಮಾಡದೇ ಎಲ್ಲ ರೈತರ ಎಲ್ಲ ಕೃಷಿ ಸಾಲವನ್ನು ಒಂದು ಬಾರಿ ಮನ್ನಾ ಮಾಡಿ ರೈತರನ್ನು ಋಣಮುಕ್ತಗೊಳಿಸಬೇಕು. ರೈತರ ಆತ್ಮಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ರೈತರ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಮಾಡಲು ಡಾ॥ ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿಮಾಡಬೇಕು. ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಿ ದುಡಿಯುವ ಕೈಗಳಿಗೆ ಕೆಲಸ ನೀಡಬೇಕೆಂಬ ಬೇಡಿಕೆಗಳ ಆಧಾರದಲ್ಲಿ ಸಿಪಿಐ(ಎಂ) ಹಾಗೂ ರೈತ–ಕಾರ್ಮಿಕ ಸಂಘಟನೆಗಳಿಂದ "ಕೃಷಿ ಉಳಿಸಿ, ಕೃಷಿಕನನ್ನು ಸಂರಕ್ಷಿಸಿ" ಸಹಿ ಸಂಗ್ರಹ ಅಭಿಯಾನ ಹಾಗೂ ಬೇಗ ನ್ಯಾಯವನ್ನು ನೀಡುವಂತೆ ಮಹದಾಯಿ ನ್ಯಾಯಾಧೀಕರಣಕ್ಕೆ ಸಾರ್ವನಿಕರಿಂದ ಅರ್ಜಿ ಸಲ್ಲಿಸುವ ಕಾರ್ಯಕ್ರಮಕ್ಕೆ ಕಿತ್ತೂರ ಚೆನ್ನಮ್ಮ ವೃತ್ತದಲ್ಲಿ ಚಾಲನೆ ನೀಡಲಾಯಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ವ್ಹಿ.ಬಿ.ಮಾಗನೂರ ಸಹಿ ಮಾಡುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನ ಮಾತನಾಡಿ ಫೆಬ್ರವರಿ 20ರ ವರೆಗೆ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ 10 ಸಾವಿರ ಸಹಿ ಸಂಗ್ರಹಿಸಿ ಮುಂಬರುವ ಲೋಕಸಭಾ ಅಧಿವೇಶನದ ವೇಳೆ ಸರಕಾರಕ್ಕೆ ರೈತರ ಹಕ್ಕೊತ್ತಾಯವನ್ನು ಸಲ್ಲಿಸಲಾಗುವುದು. ಈ ಭಾಗದ ನೀರಿನ ಗಂಭೀರತೆಯನ್ನು ಪರಿಗಣಿಸಿ ವಿಳಂಬ ಮಾಡದೇ ನ್ಯಾಯವನ್ನು ನೀಡುವಂತೆ ಮಹದಾಯಿ ನ್ಯಾಯಾಧೀಕರಣಕ್ಕೆ ಸಾರ್ವನಿಕರಿಂದ ಸಾಮೂಹಿಕವಾಗಿ ಸಾವಿರಾರು ಅರ್ಜಿ ಹಾಕಿಸಲಾಗುವುದು ಈ ಕಾರ್ಯದಲ್ಲಿ ರೈತ–ಕಾರ್ಮಿಕ ಸಂಘಟನೆಗಳು ಬೆಂಬಲಿಸಲಿವೆ ಎಂದರು.

ಮುಖಂಡರಾದ ಜಿ.ಎಸ್.ಮಾದಾಪೂರ, ವಿ.ಎಸ್.ಕೆಂಚನಗೌಡ, ಆರ್.ಎಚ್. ಆಯಿ, ಬಿ.ಐ.ಈಳಿಗೇರ, ಮಹೇಶ ಪತ್ತಾರ, ಗಂಗಾಧರ ಗಾಡದ, ಗೂಳಪ್ಪ ಯಡ್ರಾವಿ, ಮಲ್ಲಪ್ಪ ತಟ್ಟಿ, ಜಗದೀಶ ಪಾಟೀಲ, ವಿನಾಯಕ ಕುರುಬರ, ಮಾರುತಿ ಅಂಬಿಗೇರ ಮುಂತಾದವರು ಉಪಸ್ಥಿತರಿದ್ದರು.

ಕಾರ್ಮಿಕ-ರೈತ-ಕೃಷಿ ಕೂಲಿಕಾರರ ಜಂಟಿ ಪ್ರತಿಭಟನೆ


ಕಲಬುರಗಿ

ಕೇಂದ್ರದ ಬಿಜೆಪಿಯ ನರೇಂದ್ರಮೋದಿ ನೇತೃತ್ವದ ಸರ್ಕಾರರೈತರು, ಕೂಲಿಕಾರರು ಮತ್ತು ಕಾರ್ಮಿಕರ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸದೆ ಉಡಾಫೆಯಿಂದ ವರ್ತಿಸುತ್ತಿದೆ. ಕೃಷಿ ಮತ್ತು ಕೈಗಾರಿಕಾ ಬಿಕ್ಕಟ್ಟನ್ನು ಇನ್ನಷ್ಟು ಆಳಗೊಳಿಸುವ ಸಾಮ್ರಾಜ್ಯವಾದಿ ಜಾಗತೀಕರಣದ ನೀತಿಗಳನ್ನು ಜಾರಿಗೆತರಲು ಹೊರಟಿರುವ ಸರ್ಕಾರದ ವಿರುದ್ಧರಾಜ್ಯ ವಿವಿಧ ಜಿಲ್ಲೆಗಳ ತಾಲ್ಲೂಕು ಕೇಂದ್ರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್ಎಸ್), ಅಖಿಲ ಭಾರತ ಕೃಷಿ ಕೂಲಿಕಾರ ಸಂಘಟನೆ (ಎಐಎಡಬ್ಲ್ಯೂಯು) ಮತ್ತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು)ನ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರು ಜಂಟಿ ರಾಜ್ಯಾದ್ಯಂತ ಜನವರಿ 19 ರಂದು ಪ್ರತಿಭಟನೆ ನಡೆಸಿದರು.

ಸರಕಾರಗಳು ಶ್ರೀಮಂತ ಪರವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಕೈ ಬಿಟ್ಟು ಕೃಷಿ ಹಾಗೂ ಕೈಗಾರಿಕೆಗಳು ಬಿಕ್ಕಟ್ಟಿನಿಂದ ಹೊರಬರಲು ಮತ್ತು ರೈತರು, ಕೂಲಿಕಾರರು ಮತ್ತು ಕಾರ್ಮಿಕರ ಆದಾಯವನ್ನು ಗಣನೀಯವಾಗಿ ಹೆಚ್ಚಿಸಲು ಕ್ರಮ ವಹಿಸಬೇಕೆಂದು ಪ್ರತಿಭಟನೆಯಲ್ಲಿ ಆಗ್ರಹಿಸಲಾಗಿದೆ.

ಅಸಂಘಟಿತ ಕಾರ್ಮಿಕರಿಗೆ ರೂ.15,000/- ಮಾಸಿಕ ರಾಷ್ಟ್ರ ವ್ಯಾಪ್ತಿ ಸಮಾನ ಕನಿಷ್ಟ ವೇತನವನ್ನು ಜಾರಿಮಾಡಬೇಕು, ಬೆಲೆ ಏರಿಕೆ ನಿಯಂತ್ರಣಕ್ಕಾಗಿ ಮತ್ತು ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಜಾರಿಗೆ ತರಬೇಕು ಸಮಾನ ಕೆಲಸಕ್ಕೆ – ಸಮಾನ ವೇತನಕ್ಕಾಗಿ ಮತ್ತು ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದತಿಗಾಗಿ ಹಾಗು ಗುತ್ತಿಗೆ ಕಾರ್ಮಿಕರ ಖಾಯಂಗೆ ಶಾಸನವನ್ನು ಜಾರಿಗೆ ತರಬೇಕು, ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಿಗೆ ಜಾರಿ ಮಾಡಬೇಕು, ಸಾರ್ವಜನಿಕ ಉದ್ದಿಮೆಗಳ ಶೇರು ವಿಕ್ರಯ ವಿರುದ್ಧ ಹಾಗೂ ವಿಮಾ ಮತ್ತು ರಕ್ಷಣಾ ವಲಯದಲ್ಲಿ ವಿದೇಶಿ ನೇರ ಬಂಡವಾಳ ಕೈಬೀಡಬೇಕು, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ನಿಧಿ ಸ್ಥಾಪನೆಗಾಗಿ ಮತ್ತು ಅದಕ್ಕೆ ಅಗತ್ಯ ಬಜೆಟ್ ಹಣವನ್ನು ಮಿಸಲಿಡಬೇಕು ಸೇರಿದಂತೆ ವಿವಿಧ ಅಂಶಗಳನ್ನು ಸರ್ಕರ ಜಾರಿಗೆ ತರಬೇಕು ಎಂದು ಆಗ್ರಹಿಸಲಾಗಿದೆ.

20 ಅಂಶಗಳ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ತಾಲ್ಲೂಕು ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಕಲಬುರಗಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಕೆಪಿಆರ್ಎಸ್ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದರು.

ತುಮಕೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್, ಜಿಲ್ಲಾ ಕಾರ್ಯದರ್ಶಿ ಎನ್. ಕೆ.ಸುಬ್ರಮಣ್ಯ, ಕೆಪಿಆರ್ಎಸ್ ಜಿಲ್ಲಾ ಸಂಚಾಲಕ ಸಿ.ಅಂಜಪ್ಪ, ಸಂಘಟನೆಗಳ ಮುಖಂಡರಾದ ಪು-ಟ್ಟೇಗೌಡ, ಇಬ್ರಾಹಿಂ, ಲಕ್ಷ್ಮಮ್ಮ, ನಾಗರಾಜು, ವಿನಾಯಕ, ಗಿರೀಶ್ ರಾಮಚಂದ್ರು, ತಿಮ್ಮೇಗೌಡ, ರಾಮು, ರಮೇಶ್, ಜಗದೀಶ್ ಸೇರಿದಂತೆ ಮುಂತಾದವರು ನೇತೃತ್ವ ವಹಿಸಿದ್ದರು.

ಉತ್ತರಕನ್ನಡದಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾದಿಕಾರಿಗಳ ಮೂಲಕ ಕೇಂದ್ರ ಸರ್ಕಾರ-ಕ್ಕೆ ಮನವಿ ಸಲ್ಲಿಸಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ್, ಕೆಪಿಆರ್ಎಸ್ ತಾ. ಅಧ್ಯಕ್ಷರಾದ ವಿಷ್ಣು ನಾಯ್ಕ ಮಾಸ್ತರ, ಕಾರ್ಯದರ್ಶಿ ಶ್ಯಾಮನಾಥ ನಾಯ್ಕ, ಸಿಐಟಿಯು ಮುಖಂಡರಾದ ಹರೀಶ್ ನಾಯ್ಕ, ರಮೇಶ್ ಬಾಬು, ಹನುಮಂತ ಹರಿಜನ, ದಾಂಡೇಲಿ ನಗರಸಭೆ ಸದಸ್ಯರಾದ ಡಿ.ಸ್ಯಾಮ್ಸನ್, ಸೇರಿದಂತೆ ಹಲವರು ಭಾಗವಹಿಸಿದರು.

ವಿಜಯಪುರದಲ್ಲಿ ನಡೆದ ಪ್ರತಿಭಟನೆಯಲ್ಲಿ ಕೆಪಿಆರ್ಎಸ್ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ, ಅಣ್ಣಾರಾಯ ಈಳಿಗೇರ, ಸುನಂದ ನಾಯಕ, ಮಳಸಿದ್ದ ನಾಯ್ಕೋಡಿ, ಕಾಳಮ್ಮ ಬಡಿಗೇರ, ಪರಶುರಾಮ ಮಂಟೂರ, ಭೀಮಾ ಭೀಮಾ ಬಿಜಾಪುರ, ಯಂಕಪ್ಪ ಗೊಲ್ಲರ, ಸಲೀಂ ನಾಯ್ಕೋಡಿ, ಮಲಿಕ್ ಸಾಬ ಬಾಗಲಕೋಟ, ಖಾಜಾಸಾಬ ಕೋಲ್ಹಾರ, ಜಿ.ಎಸ್. ಇಂಗಳಗಿ ಸೇರಿದಂತ ಇನ್ನಿತರರು ಮುಖಂಡರು ಭಾಗವಹಿಸಿದರು.

ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಬಿ.ಎಂ.ಭಟ್, ಜಯರಾಮ ಮಯ್ಯ, ನೆಬಿಸಾ, ರೋಹಿಣಿ, ಶ್ಯಾಮರಾಜ್, ವಸಂತ ನಡ, ಜಯಾನಂದ ಎಂ.ಕೆ., ವಿಠಲ ಮಲೆಕುಡಿಯ, ಈಶ್ವರಿ ಪದ್ಮುಂಜ, ಬಾಬು ಯುಕೊಯ್ಯೂರು, ಇನ್ನಿತರ ಮುಖಂಡರು ಭಾಗವಹಿಸಿದರು.

ರಾಮನಗರ ಜಿಲ್ಲಾಧಿಕಾರಿ ಕಛೇರಿ ಬಳಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಬೆಂ.ದಕ್ಷಿಣ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಬಿಡದಿ ಕೈಗಾರಿಕಾ ಪ್ರದೇಶ ಕಾರ್ಮಿಕರ ಹೋರಾಟ ಸಮಿತಿ ಅಧ್ಯಕ್ಷರಾದ ಬಿ.ವಿ. ರಾಘವೇಂದ್ರ ಸೇರಿದಂತೆ ನೂರಾರು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೊಪ್ಪಳ ಜಿಲ್ಲೆಯ ಗಂಗಾವತಿ ಸೇರಿದಂತೆ ರಾಜ್ಯದ ವಿವಿಧ ಕಡೆ ನಡೆದ ಪ್ರತಿಭಟನೆಗಳು ನಡೆದ ಬಗ್ಗೆ ವರದಿಯಾಗಿದೆ.


ಗಂಗಾವತಿ

ಅತಿಥಿ ಉಪನ್ಯಾಸಕರ ಮುಂದುವರೆದ ಪ್ರತಿಭಟನೆ

ಅತಿಥಿ ಉಪನ್ಯಾಸಕರ ಬೇಡಿಕೆಗಳು ಈಡೇರದ ಪರಿಣಾಮವಾಗಿ ದಿನಾಂಕ ಜನವರಿ 12ರಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಧರಣಿ ಆರಂಭವಾಗಿದೆ. ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದಾಗಿ ಅತಿಥಿ ಉಪನ್ಯಾಸಕರು ಹೋರಾಟಕ್ಕೆ ಮುಂದಾಗಿದ್ದು ಸರ್ಕಾರ ಬೇಡಿಕೆಗಳ ಈಡೇರಿಕೆಗೆ ಯಾವುದೇ ಕ್ರಮವಹಿಸಿಲ್ಲ ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ.

ಮೆರಿಟ್ ಹಾಗೂ ರೋಸ್ಟರ್ ನಿಯಮದಂತೆಯೇ ತಮ್ಮನ್ನು ನೇಮಕ ಮಾಡಲಾಗಿದೆ. ಯುಜಿಸಿ ನಿಯಮಗಳಂತೆಯೇ ನೇಮಕಾತಿಯಾಗಿದ್ದು, ಹೀಗಿದ್ದರೂ ಸರ್ಕಾರ ನಮ್ಮನ್ನು ಖಾಯಂ ಮಾಡುತ್ತಿಲ್ಲ, ಭರವಸೆಗಳು ನೀಡಿದ್ದಾರೆ ವಿನಃ ಬೇಡಿಕೆಗಳನ್ನು ಈಡೇರಿಸುತ್ತಿಲ್ಲ. ವಯಸ್ಸು ಮೀರುತ್ತಿದ್ದು ವಯೋಮಿತಿ ಮೀರಿದ ಮೇಲೆ ನಮ್ಮನ್ನು ಕೈಬಿಟ್ಟರೆ ಹೇಗೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ.

ಕಲಬುರಗಿಯಲ್ಲಿ ಹೋರಾಟ ನಿರತ ಅತಿಥಿ ಉಪನ್ಯಾಸಕರು, ಸಾರ್ವಜನಿಕರ ಚಪ್ಪಲಿ, ಬೂಟ್ ಪಾಲೀಶ್ ಮಾಡುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಿದರು. ಯಾದಗಿರಿ ಜಿಲ್ಲೆಯಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಾಬುರಾವ ಚಿಂಚನಸೂರರವರಿಗೆ ಮನವಿ ಸಲ್ಲಿಸಿದ್ದಾರೆ. ಸಂಘದ ಜಿಲ್ಲಾಧ್ಯಕ್ಷತೆ ಡಾ॥ಶೈಲಜಾ ಬಾಗೇವಾಡಿ, ಸಿದ್ಧಪ್ಪ ಗೌಡ, ಅಂಬರೀಶ ನಾಯಕ, ಗುರುರಾಜ ಕುಲಕರ್ಣಿ, ಜಗದೀಶ್ ತಂಬಾಕೆ, ಉಮೇಶ ಮಸಿಮಠ ಇತರರು ಭಾಗವಹಿಸಿದ್ದರು.

ಹಾವೇರಿಯಲ್ಲಿ ನಡೆದ ಧರಣಿ ಸ್ಥಳಕ್ಕೆ ಜೆಡಿಎಸ್‌ನಿಂದ ಬಸವರಾಜ ಹೊರಟ್ಟಿ, ಬಿಜೆಪಿಯಿಂದ ಸಿ.ಎಂ.ಉದಾಸಿ ಮತ್ತಿತರರು ಭಾಗವಹಿಸಿದ್ದರು. ಧರಣಿ ನೇತೃತ್ವವನ್ನು ರಾಜ್ಯ ಉಪಾಧ್ಯಕ್ಷರಾದ ವಸಂತಗೌಡ ಪಾಟೀಲ, ಜಿಲ್ಲಾ ಅಧ್ಯಕ್ಷರಾದ ಜಿ.ಎಸ್.ಜ್ಯೋತಿ, ಜಿಲ್ಲಾ ಉಪಾಧ್ಯಕ್ಷರಾದ ಎಸ್.ವ್ಹಿ. ಗುಡಗೇರಿ, ಕಾರ್ಯದರ್ಶಿಗಳಾದ ಶಿದ್ದಪ್ಪನವರ, ಜಿಲ್ಲಾ ಮುಖಂಡರುಗಳಾದ ಶ್ರೀ ಸಿ. ಕೆ. ಪಾಟೀಲ, ಶ್ರೀ ಮಲ್ಲಿಕಾರ್ಜುನ ಕನ್ನೇಶ್ವರ, ಶ್ರೀಮತಿ ಭುವನೇಶ್ವರಿ, ಶ್ರೀಮತಿ ಸುಧಾ ಪಾಟೀಲ, ಜಗದೀಶ ಬಾರ್ಕಿ ಸೇರಿದಂತೆ ಜಿಲ್ಲೆಯ ಅತಿಥಿ ಉಪನ್ಯಾಸಕರು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಗೌರವ ಅಧ್ಯಕ್ಷರಾದ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರಮೂರ್ತಿ, ರಾಜ್ಯಾಧ್ಯಕ್ಷರಾದ ಶ್ರೀನಿವಾಸಚಾರ್ ಎನ್., ಪ್ರಧಾನ ಕಾರ್ಯದರ್ಶಿ ಡಾ॥ಮಲ್ಲಿಕಾರ್ಜುನ ಬಿ. ಮಾನ್ಪಡೆ, ಸೇರಿದಂತೆ ಹಲವು ಅತಿಥಿ ಉಪನ್ಯಾಸಕರು ಧರಣಿಯಲ್ಲಿ ಭಾಗವಹಿಸಿದ್ದರು. ರಾಮನಗರ ಸೇರಿದಂತೆ ಇನ್ನೂ ಹಲವು ಜಿಲ್ಲೆಗಳಲ್ಲಿ ಅತಿಥಿ ಉಪನ್ಯಾಸಕರ ಅನಿರ್ದಿಷ್ಟಾವಧಿ ಧರಣಿ ಮುಂದುವರೆಯುತ್ತಿದ್ದು, ಬೇಡಿಕೆ ಈಡೇರಲೇಬೇಕೆಂದು ಆಗ್ರಹಿಸಿದ್ದಾರೆ.

PEA½ZAAY

ಭಾಗ್ಯವನ್ನೇ ತಾರದ ಲಕ್ಷ್ಮಿಯರು!

45 ಸಾವಿರಕ್ಕೂ ಅಧಿಕ ಭಾಗ್ಯಲಕ್ಷ್ಮಿ ಯೋಜನೆಯ ಅರ್ಜಿಗಳನ್ನು ತಾಂತ್ರಿಕ ದೋಷದ ಕಾರಣದಿಂದಾಗಿ ಸರ್ಕಾರವು ಸಂಪೂರ್ಣವಾಗಿ ರದ್ದು ಮಾಡಿದೆ ಎಂಬ ಸುದ್ದಿ ಇತ್ತೀಚೆಗೆ ಪತ್ರಿಕೆಯ ಮೂಲೆಯೊಂದರಲ್ಲಿ ಬಂದು ಮಾಯವಾಯಿತು. .. ..

ತಾಂತ್ರಿಕ ದೋಷದಿಂದಾಗಿ 45,323 ಹೆಣ್ಣು ಮಕ್ಕಳ ಸರ್ಟಿಫಿಕೇಟ್ಗಳು ಬರುವುದು ತಡ ಆಗುತ್ತ ಆಗುತ್ತ ಕಡೆಗೆ ಇಲ್ಲವಾದವು. ಇಲ್ಲಿ ತಾಂತ್ರಿಕ ದೋಷವೆಂದರೆ ಏನು. ಸೂಪರ್ವೈಸರ್ ಒಬ್ಬರನ್ನು ವಿಚಾರಿಸಿದಾಗ ತಂದೆ ತಾಯಿ ಕೊಡಬೇಕಾದ ಮಾಹಿತಿಯನ್ನು ಸರಿಯಾಗಿ ಕೊಟ್ಟಿರಲಿಕ್ಕಿಲ್ಲ, ಅಂಗನವಾಡಿ ಕಾರ್ಯಕರ್ತೆಯರು ಸೂಕ್ತ ಕಾಲದಲ್ಲಿ ಎಲ್ಲ ಮಾಹಿತಿಯನ್ನೂ ತಾಲ್ಲೂಕ ಆಫೀಸಿಗೆ ಮುಟ್ಟಿಸಿರಲಿಕ್ಕಿಲ್ಲ, ಕಂಪ್ಯೂಟರಿನವರು ಸರಿಯಾಗಿ ಹೆಸರು ಮತ್ತಿತರ ಮಾಹಿತಿಗಳನ್ನು ತುಂಬಿರಲಿಕ್ಕಿಲ್ಲ. ಇವೇ ತಾನೇ ತಾಂತ್ರಿಕ ದೋಷಗಳು ಇದರಲ್ಲೆಲ್ಲಾದರೂ ಮಗು ಮಾಡಿದ ತಪ್ಪಿದೆಯೇ.

ಜನಪ್ರಿಯತೆಗಾಗಿ ಒಬ್ಬ ಪ್ರಧಾನಿ ಭಾಷಣ ಮಾಡಿರಬಹುದು. ಆದರೆ ಅವರ ಮೈಯಲ್ಲಿ ಹರಿಯುವ ರಕ್ತದಲ್ಲೂ ಹೆಣ್ಣೇತಕೆ ಎಂಬ ಭಾವನೆಯೇ ಇದ್ದಾಗ ಅವರ ಬಜೆಟ್ನಲ್ಲಿ ಆಹಾರ, ಆರೋಗ್ಯ, ಸುರಕ್ಷತೆಯಂಥ ಕಾರ್ಯಕ್ರಮಗಳು ಆದ್ಯತೆ ಕಳೆದುಕೊಳ್ಳುತ್ತವೆ. ಒಬ್ಬ ಮುಖ್ಯಮಂತ್ರಿಯ ಮನದಾಳದಲ್ಲೂ ಅದೇ ಭಾವನೆ ತುಂಬಿರುವಾಗ ಅವರಿಗೆ ಭಾಗ್ಯಲಕ್ಷ್ಮಿಯಂಥ ಕಾರ್ಯಕ್ರಮ ಮುಂದುವರಿಸಬೇಕಿಲ್ಲದ, ಹಿಂದಿದ್ದ ಸರ್ಕಾರದ ಕಾರ್ಯಕ್ರಮವಾಗಿ ಕಾಣುತ್ತದೆ.

– ಶಾರದಾ ಗೋಪಾಲ (ಪ್ರಜಾವಾಣಿ)

ಅಸಹಿಷ್ಣುತೆ ಮತ್ತು ರೋಹಿತ್ ವೇಮುಲ ದುರ್ಮರಣ



ಪ್ರೊ. ಟಿ. ಆರ್. ಚಂದ್ರಶೇಖರ

ನಮ್ಮ ವಿಶ್ವವಿದ್ಯಾಲಯಗಳಲ್ಲಿ ದಲಿತರು ತಮ್ಮ ಶಿಕ್ಷಣವನ್ನು ಮುಂದುವರಿಸುವುದು ಸಾಧ್ಯವಾಗದಂತಹ ಆತಂಕಕಾರಿ ವಾತಾವರಣವನ್ನು ಬಲಪಂಥೀಯ ಶಕ್ತಿಗಳು ಸೃಷ್ಟಿಸುತ್ತಿವೆ. ದಲಿತರ ಬಗೆಗಿನ ಅಸಹಿಷ್ಣುತೆಯ ಬಗ್ಗೆ ಮತ್ತಾವ ಪುರಾವೆ ಬೇಕು? ಸಾಮಾಜಿಕ ಅಸಮಾನತೆಯನ್ನು ಪೋಷಿಸುತ್ತಿರುವುದಕ್ಕೆ ಮತ್ತಾವ ಸಾಕ್ಷಿ ಬೇಕು?

ದೇಶದಲ್ಲಿ ಅಸಹಿಷ್ಣುತೆಯ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದೆ. ಅಸಹಿಷ್ಣುತೆಯ ವಿರುದ್ಧ ಪ್ರತಿಭಟನೆಗಳು ವಿವಿಧ ರೀತಿಗಳಲ್ಲಿ ನಡೆಯುತ್ತಿವೆ. ಅವೇನು ಮುಗಿಯುವ ಲಕ್ಷಣ ಕಾಣುತ್ತಿಲ್ಲ. ಅಸಹಿಷ್ಣುತೆಯಿಂದಾಗಿ ವಿಚಾರವಾದಿಗಳ ಹತ್ಯೆಗಳು ನಡೆಯುತ್ತಿವೆ. ದಲಿತ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಸಹಿಷ್ಣುತೆಯ ಬಗೆಗಿನ ಚರ್ಚೆಯ ಕಾರಣವಾಗಿ ಸಾಹಿತ್ಯ ಅಧಿವೇಶನಗಳು ವಿವಾದಗಳ ಕೇಂದ್ರಗಳಾಗುತ್ತಿವೆ. ನಮ್ಮ ವಿಶ್ವವಿದ್ಯಾಲಯಗಳ ಆವರಣಗಳು ರಣರಂಗಗಳಾಗುತ್ತಿವೆ. ನಮ್ಮ ದೇಶದಲ್ಲಿ ಅಸಹಿಷ್ಣುತೆ ಹೊಸದೇನಲ್ಲ ಎಂದು ಹೇಳಲಾಗುತ್ತಿದೆ. ಅಸಹಿಷ್ಣುತೆಯನ್ನು ವಿರೋಧಿಸಿ ದೇಶಾದ್ಯಂತ ಸಾಹಿತಿಗಳು, ಬರಹಗಾರರು, ವಿಜ್ಞಾನಿಗಳು, ಕಲಾವಿದರು ತಾವು ಪಡೆದ ವಿವಿಧ ಪ್ರಶಸ್ತಿಗಳನ್ನು ವಾಪಸ್ಸು ಮಾಡುತ್ತಿದ್ದಾರೆ. ಅದಿನ್ನು ನಿಂತಿಲ್ಲ.

ದಲಿತ ಸಂಶೋಧನಾ ವಿದ್ಯಾರ್ಥಿಯ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ಖ್ಯಾತ ಕವಿ ಅಶೋಕ್ ವಾಜಪೇಯಿ ಅವರು ಹೈದರಾಬಾದ್ ಕೇಂದ್ರಯ ವಿಶ್ವವಿದ್ಯಾಲಯವು ತಮಗೆ ಪ್ರದಾನ ಮಾಡಿದ್ದ ಡಿ. ಲಿಟ್ ಪದವಿಯನ್ನು ವಾಪಸ್ಸು ಮಾಡಿದ್ದಾರೆ. ಇದನ್ನು 'ಅವಾರ್ಡ್ ವಾಪಸ್ಸಿ ಚಳುವಳಿ' ಎಂದು ಕರೆಯಲಾಗಿದೆ. ಈ ಬಗೆಯ ಪ್ರತಿಭಟನೆಗೆ ವಿದೇಶಗಳಲ್ಲಿನ ಬರಹಗಾರರಿಂದ ಸಹಮತ ವ್ಯಕ್ತವಾಗುತ್ತಿದೆ. ಈ ಸಂಗತಿಯು ಅಂತಾರಾಷ್ಟ್ರೀಯ ಆಯಾಮ ಪಡೆದುಕೊಳ್ಳುತ್ತಿದೆ. ಪ್ರಶಸ್ತಿಗಳನ್ನು ಹಿಂತಿರುಗಿಸುತ್ತಿರುವ ಬರಹಗಾರನ್ನು ಅಸಹ್ಯಕರವಾಗಿ ಟೀಕಿಸಲಾಗುತ್ತಿದೆ. ಕನ್ನಡದ ಪ್ರಸಿದ್ಧ ಹಾಸ್ಯ ಬರಹಗಾರರೊಬ್ಬರು 'ಪ್ರಶಸ್ತಿಗಳನ್ನು ವಾಪಸ್ಸು ಮಾಡುತ್ತಿರುವ ಸಾಹಿತಿಗಳು ತಾವು ಪಡೆದ ನಿವೇಶನಗಳನ್ನು ಏಕೆ ವಾಪಸ್ಸು ಮಾಡುತ್ತಿಲ್ಲ' ಎಂದು ತಮ್ಮ ಅಸೂಯಾಪರ ಅಸಮಧಾನವನ್ನು ಹೊರ ಹಾಕಿದ್ದಾರೆ. ಸಾಹಿತಿಗಳು ತಾವು ಪಡೆದ ಪ್ರಶಸ್ತಿಗಳನ್ನು ವಾಪಸ್ಸು ಮಾಡುತ್ತಿರುವುದು ಅಸಹಿಷ್ಣುತೆಯ ವಿರುದ್ಧದ ಅವರ ನೈತಿಕ ಪ್ರತಿಭಟನೆಯ ಕ್ರಮವಾಗಿ ಎಂಬುದನ್ನು ಅವರು ತಿಳಿದುಕೊಳ್ಳುತ್ತಿಲ್ಲ.

ಈಗ ಪ್ರಶಸ್ತಿಗಳನ್ನು ವಾಪಸ್ಸು ಮಾಡುತ್ತಿರುವ ಸಾಹಿತಿಗಳು, ಕಲಾವಿದರು ಹಿಂದೆ 1984ರಲ್ಲಿ ದೆಹಲಿಯಲ್ಲಿ ಸಿಖ್ ಸಮುದಾಯದ ಮೇಲೆ ನಡೆದ ಹತ್ಯಾಕಾಂಡದ ಸಂದರ್ಭದಲ್ಲಿ ಏಕೆ ವಾಪಸ್ಸು ಮಾಡಲಿಲ್ಲ? ದೇಶದಲ್ಲಿ 1975ರಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ಯಾಕೆ ಇವರು ಪ್ರಶಸ್ತಿಯನ್ನು ವಾಪಸ್ಸು ಮಾಡಲಿಲ್ಲ ಎಂದು ಕೇಳುತ್ತಿದ್ದಾರೆ. ಇಂದು ಪ್ರಶಸ್ತಿಗಳನ್ನು ವಾಪಸ್ಸು ಮಾಡುತ್ತಿರುವವರಲ್ಲಿ ಕೆಲವರು 1975ರಲ್ಲಿ ಹುಟ್ಟಿರಲಿಲ್ಲ ಎಂಬ ಸಣ್ಣ ಸಂಗತಿಯನ್ನು ಗಮನಿಸದೆ ಸುಮ್ಮ ಸುಮ್ಮನೆ ಆರೋಪ ಮಾಡಲಾಗುತ್ತಿದೆ. ಆದರೆ ಹೀಗೆ ಅಸಹಿಷ್ಣುತೆಯನ್ನು ವಿರೋಧಿಸುತ್ತಿರುವವರ ಬಗ್ಗೆ ಪ್ರತಿಭಟನೆ ಮಾಡುತ್ತಿರುವವರು 1984ರ ಬಗ್ಗೆ ಮತ್ತು 1975ರ ಬಗ್ಗೆ ಮಾತನಾಡುತ್ತಿದ್ದಾರೆ ವಿನಾ 2002ರ ಗುಜರಾತ್ ಹತ್ಯಾಕಾಂಡದ ಬಗ್ಗೆ ಮಾತನಾಡುತ್ತಿಲ್ಲ. (ಶಂಬೂಕನನ್ನು ಶ್ರೀರಾಮ ಹತ್ಯೆ ಮಾಡಿದಾಗ ಇವರು ಏಕೆ ಪ್ರತಿಭಟನೆ ಮಾಡಲಿಲ್ಲ!! ಎಂದು ಕೇಳುತ್ತಿಲ್ಲ ಎಂಬುದು ಒಂದು ಸಮಾಧಾನ). ವಿಚಾರವಾದಿಗಳ ಹತ್ಯೆಗಳನ್ನು ಅಸಹಿಷ್ಣುತೆ ಹೆಸರಿನಲ್ಲಿ ಪ್ರತಿಭಟಿಸುವುದನ್ನು ವಿರೋಧಿಸಿ ಚಿತ್ರ ನಟರೊಬ್ಬರ ನೇತೃತ್ವದಲ್ಲಿ ದೆಹಲಿಯಲ್ಲಿ ಕೆಲವರು ಮೆರವಣಿಗೆ ನಡೆಸಿದರು (ಈ ಮೆರವಣಿಗೆಯನ್ನು ಅಪ್ರತ್ಯಕ್ಷವಾಗಿ ಡಾ. ಎಂ. ಎಂ. ಕಲಬುರ್ಗಿ, ಡಾ. ನರೇಂದ್ರ ದಾಬೋಲ್ಕರ್ ಮತ್ತು ಗೋವಿಂದ್ ಪಾನ್ಸರೆ, ಮಹಮದ್ ಅಖ್ಲಾಕ್, ದಲಿತ ಮಕ್ಕಳಾದ ವೈಭವ್, ದಿವ್ಯ ಅವರ ಹತ್ಯೆಗಳ ಪರವಾದುದು ಎಂದು ಭಾವಿಸಬಹುದೆ!).

ಬೌದ್ಧಿಕತೆಯ ಗುತ್ತಿಗೆದಾರ ವಿದ್ವಾಂಸನ ಪ್ರಲಾಪ

ಇತ್ತೀಚಿಗೆ ಪ್ರಸಿದ್ಧ ವಿದ್ವಾಂಸರೊಬ್ಬರು ಅಸಹಿಷ್ಣುತೆಯ ಬಗ್ಗೆ ಬರೆಯುತ್ತಾ ಡಾ. ಕಲಬುರ್ಗಿ ಅವರು ತಾವು ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಿದರು ಎಂಬ ಅರ್ಥ ಬರುವ ಮಾತನಾಡಿದ್ದಾರೆ (ಎಸ್. ಎನ್. ಬಾಲಗಂಗಾಧರ, 27.11.2015. ಡೈಲಿ ಓ(ಒಪನ್ ಟು ಒಪೀನಿಯನ್) ವೆಬ್ ಸೈಟ್)'. ಡಾ. ಕಲಬುರ್ಗಿ ಅವರ ಚಾರಿತ್ರ ಹರಣ ಮಾಡುವಂತಹ ಆಪಾದನೆಗಳನ್ನು ಬಾಲಗಂಗಾಧರ ಮಾಡಿದ್ದಾರೆ. ಕೊಲೆಯಾಗಬಹುದಾದ ಯಾವ ತಪ್ಪನ್ನು ಕುಲಬುರ್ಗಿ ಮಾಡಿದ್ದರು ಎಂಬುದನ್ನು ಮಾತ್ರ ಅವರು ವಿವರಿಸಿಲ್ಲ. ಡಾ. ಕಲಬುರ್ಗಿ ಅವರ ವೈಚಾರಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳನ್ನು ಚೋಟಾರಾಜನ್‌ನ ಕ್ರಿಮಿನಲ್ ಚಟುವಟಿಕೆಗಳಿಗೆ ಹೋಲಿಸಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರ ನೈತಿಕತೆಯನ್ನು ವೈಚಾರಿಕ ಸಮಗ್ರತೆಯನ್ನು ಇವರು ಪ್ರಶ್ನೆ ಮಾಡಿದ್ದಾರೆ.

ಅಸಹಿಷ್ಣುತೆಯನ್ನು ವಿರೋಧಿಸುತ್ತಿರುವವರ ಬಗ್ಗೆ ಇವರಿಗೆ ಎಷ್ಟು ಅಸಹಿಷ್ಣುತೆ ಇದೆಯೆಂದರೆ ಅವರು ತಮ್ಮ ಒಂದು ಭಾಷಣದಲ್ಲಿ ಭಾರತರತ್ನ ಬಾಬಾ ಸಾಹೇಬ್ ಬಿ. ಆರ್. ಅಂಬೇಡ್ಕರ್ ಅವರನ್ನು 'ಈಡಿಯಟ್' ಎಂದು ಕರೆದಿದ್ದಾರೆ. ಮುಂದುವರಿದು ಡಾ. ಬಿ. ಆರ್.ಅಂಬೇಡ್ಕರ್ ಅವರ ಬೌದ್ಧಿಕತೆಯನ್ನು ಸಿನಿಮಾ ನಟಿ ಆಲಿಯಾ ಭಟ್‌ಳ ಬೌದ್ಧಿಕತೆಗೆ ಹೋಲಿಸಿದ್ದಾರೆ. ಬೌದ್ಧಿಕತೆ ಅನ್ನುವುದು ತಮ್ಮ ಮತ್ತು ತಮ್ಮ ಸಮುದಾಯದ ಗುತ್ತಿಗೆ ಅನ್ನುವಂತಿದೆ ಅವರ ವಾದ!. ಅವರ ಲೇಖನದ ಹಿಂದಿರುವ ಸೈದ್ಧಾಂತಿಕ ಧೋರಣೆ, ಅವರ ಬರವಣಿಗೆಯ ಧ್ವನಿ ಮತ್ತು ಅದು ಬಹಿರಂಗವಾಗಿ ಹೇಳುತ್ತಿರುವುದಕ್ಕಿಂತ ಹೇಳದೆ ತಿಳಿಸುತ್ತಿರುವ ಸಂಗತಿಗಳು ಯಾವುದೆಂದರೆ ಅವರು ಮಾತ್ರ ಬೌದ್ಧಿಕತೆಯ ಮಾಲೀಕರು, ಗುತ್ತಿಗೆದಾರರು; ಉಳಿದವರೆಲ್ಲ, ಮುಖ್ಯವಾಗಿ ಶೂದ್ರರು ಮತ್ತು ದಲಿತರು ಬೌದ್ಧಿಕ ದರಿದ್ರರು ಎಂಬುದಾಗಿದೆ. ಡಾ.ಎಂ.ಎಂ. ಕಲಬುರ್ಗಿ ಅವರ ಹತ್ಯೆಗೆ ಅವರು ಮಾಡಿದ ತಪ್ಪೇ ಕಾರಣ ಎಂಬ ಬಾಲಗಂಗಾಧರ ಅವರ ಪ್ರಮೇಯವನ್ನು ಆಧರಿಸಿ ರೋಹಿತ್ ವೇಮುಲ ಸಾವಿಗೆ ಆತನೇ ಕಾರಣ ಎಂಬ ಮೀಮಾಂಸೆಯನ್ನು ಬಲಪಂಥೀಯರು ಮುಂದು ಮಾಡಿದರೆ ಅದರಲ್ಲಿ ಆಶ್ಚರ್ಯ ಪಡುವಂತಹದೇನಿಲ್ಲ!

ಆರ್ಥಿಕ ಹಿಂದುಳಿದಿರುವಿಕೆಗೆ ಮೀಸಲಾತಿ ಕಾರಣ!

ಭಾರತವು ಆರ್ಥಿಕವಾಗಿ ಹಿಂದುಳಿದಿದ್ದರೆ ಅದಕ್ಕೆ ಕಾರಣ ಮೀಸಲಾತಿ ಎಂಬುದು ಇವರ ಮತ್ತೊಂದು ಸಂಶೋಧನೆಯಾಗಿದೆ. ಏಕೆಂದರೆ ಮೀಸಲಾತಿ ಪಡೆಯುತ್ತಿರುವವರು ಬೌದ್ಧಿಕ ದರಿದ್ರರು ಎಂಬುದು ಅವರ ಗೃಹೀತವಾಗಿರುವಂತೆ ಕಾಣುತ್ತದೆ. ನಮ್ಮ ಸಮಾಜದ ಬಡವರ ಬಗ್ಗೆ, ಶೂದ್ರ ಸಮುದಾಯದ ಬಗ್ಗೆ, ಪರಿಶಿಷ್ಟರ ಬಗ್ಗೆ ಇವರಿಗೆ ಎಷ್ಟು ಅಸಹನೆ, ಅಸೂಯೆ, ಅಸಮಧಾನ, ಅಸಹಿಷ್ಣುತೆ ಇದೆ ಎಂಬುದು ಇದರಿಂದ ಮನದಟ್ಟಾಗುತ್ತದೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ದಲಿತರು ತಮ್ಮ ಶಿಕ್ಷಣವನ್ನು ಮುಂದುವರಿಸುವುದು ಸಾಧ್ಯವಾಗದಂತಹ ಆತಂಕಕಾರಿ ವಾತಾವರಣವನ್ನು ಬಲಪಂಥೀಯ ಶಕ್ತಿಗಳು ಸೃಷ್ಟಿಸುತ್ತಿವೆ. ಇದಕ್ಕೆ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನ ವಿದ್ಯಾರ್ಥಿ ರೋಹಿತ್ ವೇಮುಲ ಅವರ ಆತ್ಮಹತ್ಯೆಯನ್ನು ನೋಡಬಹುದು.

ಇಂದು ದೇಶಪ್ರೇಮದ ಬಗ್ಗೆ ಜನರು ಹೆಚ್ಚು ಹೆಚ್ಚು ಮಾತನಾಡುತ್ತಿದ್ದಾರೆ. ಅಸಹಿಷ್ಣುತೆಯ ಬಗೆಗಿನ ಚರ್ಚೆಯಿಂದ ದೇಶಕ್ಕೆ ಕೆಟ್ಟ ಹೆಸರು ಬರುತ್ತಿದೆ ಎಂದು ಅನೇಕರು ಗೋಳಾಡುತ್ತಿದ್ದಾರೆ. ರೋಹಿತ್ ವೇಮುಲ ಅವರು ಪ್ರತಿನಿಧಿಸುತ್ತಿದ್ದ ಆಂಬೇಡ್ಕರ್ ವಿದ್ಯಾರ್ಥಿ ಸಂಘಟನೆಗೆ ರಾಷ್ಟ್ರ ವಿರೋಧಿ ಎಂದು ಬಲಪಂಥಿಯ ಶಕ್ತಿಗಳು ಹಣೆಪಟ್ಟಿ ಹಚ್ಚಿದ್ದವು. ಅಸಹಿಷ್ಣುತೆಯು ಸಹಜವಾದುದೇನಲ್ಲ, ಅದು 'ಹುಟ್ಟು ಹಾಕಿರುವ ಪ್ರತಿಭಟನೆ' ಎಂದು ಆಳುವ ಪಕ್ಷದ ಹಿರಿಯ ಸಚಿವರೊಬ್ಬರು ಹೇಳುತ್ತಿದ್ದಾರೆ. 'ಇಂದು ಗೋಮಾಂಸ ಬಳಸುವುದರ ಬಗ್ಗೆ ನಿಷೇಧ ಹಾಕುತ್ತಿರುವ ನೀವು ಮುಂದೆ ಕುರಿ, ಕೋಳಿ, ಎಮ್ಮೆ, ಮೀನು ಮುಂತಾದವುಗಳ ಮಾಂಸದ ಬಳಕೆಯನ್ನು ನಿಷೇಧಿಸುವುದಿಲ್ಲ ಎಂಬುದರ ಬಗ್ಗೆ ಗ್ಯಾರಂಟಿಯೇನು' ಎಂಬ ಪ್ರಶ್ನೆಯನ್ನು ಮಹಾರಾಷ್ಟ್ರ ಸರ್ಕಾರದ ಅಧಿಕಾರಿಯೊಬ್ಬರಿಗೆ ಪತ್ರಕರ್ತರು ಕೇಳಿದಾಗ 'ಅದೂ ಕೂಡ ದೂರವಿಲ್ಲ' ಎಂಬ ನಿಜವನ್ನು ಹೇಳಿದ್ದಾರೆ.

ಅಸಹಿಷ್ಣುತೆಯ ಪ್ರಾಚೀನ ಇತಿಹಾಸ

ನಮ್ಮ ದೇಶದಲ್ಲಿ ಅಸಹಿಷ್ಣುತೆಗೆ ಪ್ರಾಚೀನ ಇತಿಹಾಸವಿದೆ. ಸಂಸ್ಕೃತ ಭಾಷೆಯನ್ನು ಕೇಳಿದ ಶೂದ್ರರ ಮತ್ತು ದಲಿತರ (ಕಲಿಯುವುದು ಇರಲಿ) ಕಿವಿಗೆ ಕಾದ ಸೀಸವನ್ನು ಸುರಿಯಬೇಕು, ಅದನ್ನು ಉಚ್ಚರಿಸಿದರೆ ಅವರ ನಾಲಿಗೆ ಸೀಳಬೇಕು ಎಂಬ ನಿಯಮವನ್ನು ಪಾಲಿಸುತ್ತಿದ್ದುದರ ಬಗ್ಗೆ ಇತಿಹಾಸದಲ್ಲಿ ದಾಖಲೆಗಳು ದೊರೆಯುತ್ತವೆ. ಅಕಸ್ಮಾತ್ ನೀರಿನಲ್ಲಿ ಮುಳುಗುತ್ತಿರುವವರು ಸಹಾಯಕ್ಕೆ ಕರೆ ಮಾಡಿದರೆ ಅವರ ಜಾತಿಯನ್ನು ಆಧರಿಸಿ ಸಹಾಯ ಮಾಡುವ ಪರಂಪರೆ ನಮ್ಮದು ಎಂಬುದನ್ನು ನಾವು ಮರೆಯಬಾರದು. ಪುರಾಣಗಳಲ್ಲಿ ಅಬ್ರಾಹ್ಮಣರಿಗೆ ಎಷ್ಟು ಅನ್ಯಾಯ ಮಾಡಲಾಯಿತು ಎಂಬುದಕ್ಕೆ ಅನೇಕ ನಿದರ್ಶನಗಳು ನಮಗೆ ದೊರೆಯುತ್ತವೆ (ಶಂಬೂಕ, ಏಕಲವ್ಯ, ಕರ್ಣ.. ..). ಕೇವಲ ಬುಡಕಟ್ಟು ಸಮುದಾಯಕ್ಕೆ ಸೇರಿದ್ದ ಅನ್ನುವ ಕಾರಣಕ್ಕೆ ಬ್ರಾಹ್ಮಣ ಗುರು ದ್ರೋಣಾಚಾರ್ಯರು ಏಕಲವ್ಯನ ಶಿಷ್ಯತ್ವವನ್ನು ತಿರಸ್ಕರಿಸಿದರು. ಪ್ರಾಚೀನ ಕಾಲದಿಂದಲೂ ಮುಂದುವರಿದುಕೊಂಡು ಬಂದಿರುವ ನಮ್ಮ ಪರಂಪರೆಯಲ್ಲಿನ 'ಶಾಪ' ನೀಡುವ ಪದ್ಧತಿಯು ಅಸಹಿಷ್ಣುತೆಗೆ ಶುದ್ಧ ನಿದರ್ಶನವಾಗಿದೆ. ಸಂಸ್ಕೃತ ಭಾಷೆಯನ್ನು ದ್ವಿಜ ಪುರುಷರಿಗೆ ಮಾತ್ರ ಎಂಬ ಕಟ್ಟುಪಾಡು ಮಾಡಿದ್ದು 'ಮೀಸಲಾತಿ'ಯಲ್ಲವೆ? ಗುರುಕುಲಕ್ಕೆ ಪ್ರವೇಶವನ್ನು ಕೆಲವು ಕೋಮುಗಳಿಗೆ ಮಾತ್ರ ಎಂಬ ನಿಯಮವು ಮೀಸಲಾತಿಗೆ ಸಂವಾದಿಯಾಗಿಲ್ಲವೆ? ಪ್ರಾಚೀನ ಗುರುಕುಲದಲ್ಲಿ ಶೂದ್ರರಿಗೆ, ದಲಿತರಿಗೆ ಮತ್ತು ಮಹಿಳೆಯರಿಗೆ ಪ್ರವೇಶವಿರಲಿಲ್ಲ. ಅಂದರೆ ಅಲ್ಲಿ ಮೀಸಲಾತಿ ನೀತಿಯನ್ನು ಪಾಲಿಸಲಾಗುತ್ತಿತ್ತು. ಆದರೆ ನಮ್ಮ ನಾಡಿನ ಅಖಿಲ ಭಾರತೀಯ ಸಂಸ್ಕೃತಿಯ ಬಗ್ಗೆ ಮಾತನಾಡುವ ಜನರಿಗೆ 'ಅಂಬೇಡ್ಕರ್ ಪ್ರಣೀತ ಮೀಸಲಾತಿ' ಬಗ್ಗೆ ಎಲ್ಲಿಲ್ಲದ ಅಸಮಧಾನ. ಇದೂ ಕೂಡ ಒಂದು ಬಗೆಯ ಅಸಹಿಷ್ಣುತೆಯಾಗಿದೆ.

ನಮ್ಮ ಸಮಾಜದಲ್ಲಿ ಮಹಿಳೆಯರ ಬಗ್ಗೆ ಇದ್ದ ಅಸಹಿಷ್ಣುತೆ ಬಗ್ಗೆ ಹೇಳಬೇಕಾದ ಅಗತ್ಯವಿಲ್ಲ. ಅವರ ಬಗೆಗಿನ ಅಸಹಿಷ್ಣುತೆ ಇಂದಿಗೂ ಮುಂದುವರಿದಿದೆ. ಮಾಸಿಕ ಋತುಚಕ್ರದ ಸಮಯದಲ್ಲಿ ಮಹಿಳೆಯರನ್ನು ಸೂತಕ, ಮೈಲಿಗೆ (ರಜಸ್ಸೂತಕ!)ಎಂದು ಪ್ರತ್ಯೇಕವಾಗಿರಿಸುವ ಕ್ರಮಗಳು ಇಂದಿಗೂ ಮುಂದುವರಿದಿವೆ ಮತ್ತು ಅದನ್ನು ಇಂದಿಗೂ ಬ್ರಹ್ಮಜ್ಞಾನಿಗಳು ಸಮರ್ಥಿಸುವುದನ್ನು ಕಾಣಬಹುದು. ಮಹಿಳೆಯರ ಬಗ್ಗೆ ಸಮಾಜದಲ್ಲಿ ಯಾವ ಬಗೆಯ ಅಸಹಿಷ್ಣುತೆ ಇತ್ತು ಎಂಬುದಕ್ಕೆ ಸತಿ ಪದ್ಧತಿಯು ಅಪ್ಪಟ ನಿದರ್ಶನವಾಗಿದೆ. ಸತಿಪದ್ಧತಿಯನ್ನು ನಿಷೇಧಿಸಲಾಗಿದೆ. ಆದರೆ ಅದನ್ನು ಸಮರ್ಥಿಸುವ ಮನಸ್ಸುಗಳು ಇಂದಿಗೂ ನಮ್ಮಲ್ಲಿ ಕ್ರಿಯಾಶೀಲವಾಗಿವೆ ಎಂಬುದು ಆತಂಕಕಾರಿಯಾದ ಸಂಗತಿಯಾಗಿದೆ. ದೇವಾಲಯ ಪ್ರವೇಶಿಸಲು ಮಹಿಳೆಯರು ಅರ್ಹರಾಗಿದ್ದಾರೋ ಅಥವಾ ಇಲ್ಲವೋ, ಅಂದರೆ ಮಡಿಯಾಗಿದ್ದಾರೋ ಇಲ್ಲವೋ ಎಂಬುದನ್ನು ತಿಳಿಯಲು 'ಯಂತ್ರ'ವೊಂದನ್ನು ಕಂಡು ಹಿಡಿಯಬೇಕು ಎಂದು ಬ್ರಹ್ಮಜ್ಞಾನಿಗಳು ಅಪ್ಪಣೆ ಕೊಡಿಸುತ್ತಿದ್ದಾರೆ. ದೇವರನ್ನು ಪೂಜಿಸುವ ಸ್ವಾತಂತ್ರ್ಯದಿಂದ ಮಹಿಳೆಯರನ್ನು ವಂಚಿಸಿದ ಸಂಸ್ಕೃತಿ ನಮ್ಮದು.

ಅಧಿಕಾರದ ಕೃಪಾಪೋಷಿತ ಅಸಹಿಷ್ಣುತೆ

'ಅಧಿಕಾರ', 'ಅಧಿಕಾರಶಾಹಿ' ಅನ್ನುವುದು ಸಮಾಜದಲ್ಲಿ ಯಾವ ಬಗೆಯ ಪರಿಣಾಮಗಳಿಗೆ ದಾರಿ ಮಾಡಿಕೊಡಬಹುದು ಎಂಬುದಕ್ಕೆ ಮಾನವ ಸಂಪನ್ಮೂಲ ಸಚಿವಾಲಯದ ಅಧಿಕಾರಿಗಳು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆಯ ಜೊತೆಯಲ್ಲಿ ಸಮೀಕರಿಸಿಕೊಂಡ ವಿದ್ಯಾರ್ಥಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ನಾಲ್ಕು ಪತ್ರಗಳನ್ನು ಮೇಲಿಂದ ಮೇಲೆ ಬರೆದಿರುವುದು ಸಾಕ್ಷಿಯಾಗಿದೆ ಮತ್ತು ಅದರ ಪರಿಣಾಮ ಯುವ ದಲಿತ ಸಂಶೋದನ ವಿದ್ಯಾರ್ಥಿಯ ಸಾವಿಗೆ ಕಾರಣವಾಗಿದೆ. ದಲಿತರ ಬಗೆಗಿನ ಅಸಹಿಷ್ಣುತೆಯ ಬಗ್ಗೆ ಮತ್ತಾವ ಪುರಾವೆ ಬೇಕು? ಸಾಮಾಜಿಕ ಅಸಮಾನತೆಯನ್ನು ಪೋಷಿಸುತ್ತಿರುವುದಕ್ಕೆ ಮತ್ತಾವ ಸಾಕ್ಷಿ ಬೇಕು?

ಇಂದು ಅಸಹಿಷ್ಣುತೆಯ ಬಗ್ಗೆ ಸರ್ಕಾರ ಮತ್ತು ಆಳುವ ಪಕ್ಷದ ನಡುವೆ ಶ್ರಮ ವಿಭಜನೆ ನಡೆದಂತೆ ಕಾಣುತ್ತದೆ. ಅಸಹಿಷ್ಣುತೆಯ ಬಗ್ಗೆ ಸರ್ಕಾರ ಮತ್ತು ಅದರ ವಕ್ತಾರರು ಖಾರವಾಗಿ ಮಾತನಾಡುತ್ತಿದ್ದಾರೆ. ಆದರೆ ಅದರ ಕೃಪಾಪೋಷಿತ ಸಂಘಟನೆಗಳು ಹಾಗೂ ಆಳುವ ಪಕ್ಷದ ಉಗ್ರವಾದಿಗಳು ಮಾತ್ರ ಅತ್ಯಂತ ಹಿಂಸಾತ್ಮಕ ಮತ್ತು ಪ್ರಚೋದನಾತ್ಮಕ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಈ ಎರಡು ಗುಂಪುಗಳು ತಮ್ಮ ಕೆಲಸಗಳನ್ನು ತಮ್ಮ ನಡುವೆ ಹಂಚಿಕೊಂಡಿರುವುದು ಸ್ಪಷ್ಟವಾಗಿದೆ. ಕೋಮುವಾದವನ್ನು ಸರ್ಕಾರ ಖಂಡಿಸುತ್ತಿದೆ. ಆದರೆ ಆಳುವ ಪಕ್ಷಕ್ಕೆ ಸಂಬಂಧಿಸಿದ ಸಂಘಟನೆಗಳು ಕೋಮುವಾದವನ್ನು ಪ್ರಚೋದಿಸುವ ರೀತಿಯಲ್ಲಿ ಮಾತನಾಡುತ್ತಿವೆ.

ಅಸಹಿಷ್ಣುತೆಯ ಮಹಾಪೂರ 2013ರ ನಂತರ ಯಾಕೆ ತೀವ್ರವಾಗಿದೆ? ಇದು ಸರ್ಕಾರ ಒಂದು ಕಡೆ ಮತ್ತು ಆಳುವ ಪಕ್ಷಗಳ ಕೃಪೆಯಲ್ಲಿನ ಸಂಘಟನೆಗಳು ಮತ್ತೊಂದು ಕಡೆ ತಮ್ಮ ತಮ್ಮ ಕೆಲಸಗಳನ್ನು ಹಂಚಿಕೊಂಡಿರುವುದರ ಪರಿಣಾಮವಾಗಿದೆ. ಇದು ಅತ್ಯಂತ ಅಪಾಯಕಾರಿ ಸಂಗತಿಯಾಗಿದೆ. ಈ ಕಾರಣಕ್ಕೆ ಸೂಕ್ಷ್ಮ ಸಂವೇದನೆಯ ಸಾಹಿತಿಗಳು, ಕವಿಗಳು, ಬರಹಗಾರರು, ಕಲಾವಿದರು ಆತಂಕಕ್ಕೆ ಒಳಗಾಗಿ ಪ್ರತಿಭಟನೆ ಮಾಡುತ್ತಿದ್ದಾರೆ ಮತ್ತು ತಾವು ತಮ್ಮ ಸಾಹಿತ್ಯ ಪ್ರತಿಭೆಗೆ ಪಡೆದುಕೊಂಡ ಪ್ರಶಸ್ತಿಗಳನ್ನು ಹಿಂತಿರುಗಿಸುತ್ತಿದ್ದಾರೆ. ಕೋಮು ಹಿಂಸೆಯಲ್ಲಿ ತೊಡಗಿದವರ ಪರವಾಗಿ ಅಧಿಕಾರ ಕೃಪಾಪೋಷಿತ ಸಂಘಟನೆಗಳು ನ್ಯಾಯಾಲಯಗಳಲ್ಲಿ ವಾದ ಮಾಡುತ್ತಿವೆ, ಜಾಮೀನು ನೀಡುತ್ತಿವೆ, ಹಿಂಸೆಯಲ್ಲಿ ತೊಡಗಿದವರಿಗೆ 'ನ್ಯಾಯ' ದೊರೆಯಬೇಕು ಎಂದು ಒತ್ತಾಯಿಸುತ್ತಿವೆ.

ಹಿಂದೆ ಅಸಹಿಷ್ಣುತೆ ನಡೆದಾಗ ಸಾಹಿತಿಗಳು ಅದರ ವಿರುದ್ಧ ಪ್ರತಿಭಟನೆ ನಡೆಸಲಿಲ್ಲ ಅನ್ನುವ ಕಾರಣಕ್ಕೆ ಇಂದು ಅದರ ಬಗ್ಗೆ ಅವರು ಪ್ರತಿಭಟನೆ ಮಾಡಬಾರದು ಎಂಬ ನಿಯಮ ಎಲ್ಲಿದೆ? ಹಿಂದೆಯೂ ಹಿಂಸೆ ನಡೆದಿದೆ, ಅಸಹಿಷ್ಣುತೆ ಇತ್ತು, ಹತ್ಯೆಗಳು ಸಂಭವಿಸಿವೆ ಅನ್ನುವ ಕಾರಣಕ್ಕೆ ಅವು ಮುಂದುವರಿಯಬೇಕು ಎಂಬುದು ಇಂದಿನ ಅಸಹಿಷ್ಣುತೆಯನ್ನು ತಳ್ಳಿ ಹಾಕುತ್ತಿರುವವರ ಅಭಿಮತವೆ? ಇಂದು ನಾವು ಏನು ಮಾಡುತ್ತೇವೆ, ಏನು ಮಾಡಬೇಕು, ಏನು ಮಾಡಬೇಕಾಗಿತ್ತು ಎಂಬುದಕ್ಕೆ ಹಿಂದೆ ನಾವು ಏನು ಮಾಡಲಿಲ್ಲ, ಏನು ಮಾಡಬೇಕಾಗಿತ್ತು, ಏನು ಮಾಡಿದ್ದೆವು ಎಂಬುದು ಮಾನದಂಡವಾಗಬೇಕೆ?. 'ಇತಿಹಾಸದಿಂದ ಪಾಠ ಕಲಿಯದೆ ಹೋದರೆ ಅದೇ ತಪ್ಪನ್ನು ಮತ್ತೆ ಮತ್ತೆ ನಾವು ಮಾಡುವ ಸಾಧ್ಯತೆಯಿರುತ್ತದೆ' ಎಂಬುದು ಚರಿತ್ರೆಯ ಪ್ರಾಥಮಿಕ ಪಾಠವಾಗಿದೆ. ಚರಿತ್ರೆಯಿಂದ ಪಾಠ ಕಲಿಯಲಿಲ್ಲ ಎಂಬುದಕ್ಕೆ ದಲಿತ ಸಂಶೋಧನ ವಿದ್ಯಾರ್ಥಿ ರೋಹಿತ್ ವೇಮುಲರ ಆತ್ಮಹತ್ಯೆಯೇ ಪುರಾವೆಯಾಗಿದೆ. ಅಸಹಿಷ್ಣುತೆಯನ್ನು ವಿರೋಧಿಸುವುದು ಇತಿಹಾಸವು ನಮಗೆ ನೀಡುತ್ತಿರುವ ಪಾಠವಾಗಿದೆ.

ನಮ್ಮ ಗಣತಂತ್ರ ಅಪಾಯದಲ್ಲಿದೆ



ಸಂವಿಧಾನವನ್ನು ಜಾರಿಗೊಳಿಸಿದ ಆರೂವರೆ ದಶಕಗಳಲ್ಲಿ ಪ್ರಭುತ್ವ ಅದು ನಿರೂಪಿಸಿದ ನಿರ್ದೇಶಕ ಸೂತ್ರಗಳನ್ನು ತ್ಯಜಿಸಿ ಬಿಟ್ಟಿದೆ. ಪ್ರಭುತ್ವದ ಮತ್ತು ಧೋರಣೆಗಳಲ್ಲಿನ ದಿಕ್ಕು ಸಂವಿಧಾನ ಮುಂದಿಟ್ಟ ಈ ಗುರಿಗಳಿಗೆ ವ್ಯತಿರಿಕ್ತವಾಗಿದೆ. ನಮ್ಮ ವ್ಯವಸ್ಥೆಯಲ್ಲಿನ ಬಹಳಷ್ಟು ಸಂಘರ್ಷಗಳು ಮತ್ತು ಬಿಕ್ಕಟ್ಟುಗಳು ಈ ವೈರುಧ್ಯದಿಂದಾಗಿಯೇ ಉಂಟಾಗಿವೆ. ಈಗಂತೂ ನವ-ಉದಾರವಾದ ಮತ್ತು ಪ್ರಭುತ್ವ-ಪ್ರಾಯೋಜಿತ ಕೋಮುವಾದ ಸರ್ವಾಧಿಕಾರಶಾಹಿಗೆ ದಾರಿ ಮಾಡಿಕೊಡುತ್ತಿದೆ. ನಮ್ಮ ಗಣತಂತ್ರ ಒಂದು ಸಂವಿಧಾನಿಕ ಸರ್ವಾಧಿಕಾರಶಾಹಿಯಾಗಿ ವಿರೂಪಗೊಳ್ಳುವ ಅಪಾಯ ಉಂಟಾಗಿದೆ. ನಮ್ಮ ಗಣತಂತ್ರದ ಪ್ರಜಾಸತ್ತಾತ್ಮಕ ಜಾತ್ಯಾತೀತ ಆಧಾರದ ಮೇಲೆ ಪ್ರತಿಯೊಂದು ದಾಳಿಯನ್ನು ಹಿಮ್ಮೆಟ್ಟಿಸಬೇಕಾಗಿದೆ. ಇದು ಈ ಗಣ-ತಂತ್ರ ದಿನದಂದು ನಾಗರಿಕರ ದೃಢನಿರ್ಧಾರ ಆಗಬೇಕಾಗಿದೆ.



ಪ್ರಕಾಶ ಕಾರಟ್

ಭಾರತ 66ನೇ ಗಣತಂತ್ರ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ನಮ್ಮ ದೇಶದ ಆಗು–ಹೋಗುಗಳ ಬಗ್ಗೆ ಒಂದು ಕಟ್ಟುನಿಟ್ಟಾದ ನೋಟ ಬೀರುವ ಅಗತ್ಯವಿದೆ. ಜನವರಿ 26, 1950ರಂದು ಗಣತಂತ್ರ ಸಂವಿಧಾನದ ಅಂಗೀಕಾರ ಸ್ವತಂತ್ರ ಭಾರತದ ಒಂದು ಪ್ರಧಾನ ಸಾಧನೆ. ಈ ಗಣತಂತ್ರ ಸಂವಿಧಾನದ ಅಡಿಯಲ್ಲಿಯೇ ಒಂದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸಿರುವುದು.

ಪ್ರಜಾಪ್ರಭುತ್ವ ವ್ಯವಸ್ಥೆ, ಭಾರತೀಯ ಪ್ರಭುತ್ವದ ಬಂಡವಾಳಶಾಹಿ–ಭೂಮಾಲಕ ಸ್ವರೂಪ ಹೇರಿರುವ ಅಡೆ–ತಡೆಗಳ ನಡುವೆಯೂ ಬದುಕುಳಿದಿದ್ದರೆ, ಅದು ಸಾಧ್ಯವಾಗಿರುವುದು ಮುಖ್ಯವಾಗಿ ಭಾರತೀಯ ಜನತೆಯ ಪ್ರಜಾಸತ್ತಾತ್ಮಕ ಬದ್ಧತೆ ಮತ್ತು ಜನತೆಯ ಹೋರಾಟಗಳು ಹಾಗೂ ಪ್ರಜಾಪ್ರಭುತ್ವವಾದಿ ಆಂದೋಲನ ಗಳಿಂದಾಗಿಯೇ.

ಭಾರತದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ನಿರ್ದೇಶಕ ಸೂತ್ರಗಳು "ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ರಾಷ್ಟ್ರೀಯ ಜೀವನದ ಎಲ್ಲ ಸಂಸ್ಥೆಗಳಲ್ಲಿ ವ್ಯಾಪಿಸಿರುವ ಒಂದು ಸಾಮಾಜಿಕ ವ್ಯವಸ್ಥೆ"ಯನ್ನು ಲಭ್ಯಗೊಳಿಸಿ ಜನತೆಯ ಕಲ್ಯಾಣವನ್ನು ಪ್ರೋತ್ಸಾಹಿಸಬೇಕು ಎಂದು ನಿರ್ದೇಶನ ನೀಡಿವೆ. "ಸಮುದಾಯದ ಭೌತಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಎಲ್ಲರ ಒಳಿತಿಗೆ ಸಲ್ಲುವಂತೆ ವಿತರಣೆಯಾಗುವಂತಹ ನಿಯಂತ್ರಣ" ಇರುವ ರೀತಿಯಲ್ಲಿ ಪ್ರಭುತ್ವ ನೋಡಿಕೊಳ್ಳಬೇಕು ಎಂದು ಅವು ಹೇಳಿವೆ. ಅಲ್ಲದೆ "ಆರ್ಥಿಕ ವ್ಯವಸ್ಥೆಯ ನಿರ್ವಹಣೆಯ ಫಲಿತಾಂಶವಾಗಿ ಎಲ್ಲರಿಗೆ ಕೆಡುಕುಂಟು ಮಾಡುವ ರೀತಿಯಲ್ಲಿ ಸಂಪತ್ತಿನ ಮತ್ತು ಉತ್ಪಾದನಾ ಸಾಧನಗಳ ಕೇಂದ್ರೀಕರಣ"ವಾಗದಂತೆಯೂ ನೋಡಿಕೊಳ್ಳಬೇಕು ಎಂದು ಹೇಳಿರುವ ಈ ಸೂತ್ರಗಳುಆದಾಯದಲ್ಲಿನ ಅಸಮಾನತೆಗಳನ್ನು ಕನಿಷ್ಟಗೊಳಿಸುವಂತೆ ಶ್ರಮಿಸಬೇಕು ಎಂದು ಪ್ರಭುತ್ವಕ್ಕೆ ಅದು ಕರೆ ನೀಡುತ್ತವೆ.

ರಾಜಕೀಯ ಪ್ರಜಾಪ್ರಭುತ್ವ–
ಆರ್ಥಿಕ ಅಸಮಾನತೆ

ವೈರುಧ್ಯ ಇರುವುದು ಇಲ್ಲಿಯೇ. ಸಂವಿಧಾನವನ್ನು ಜಾರಿಗೊಳಿಸಿದ ಆರೂವರೆ ದಶಕಗಳಲ್ಲಿ ಪ್ರಭುತ್ವ ಈ ನಿರ್ದೇಶಕ ಸೂತ್ರಗಳನ್ನು ತ್ಯಜಿಸಿ ಬಿಟ್ಟಿದೆ. ಪ್ರಭುತ್ವದ ಮತ್ತು ಧೋರಣೆಗಳಲ್ಲಿನ ದಿಕ್ಕು ಸಂವಿಧಾನ ಮುಂದಿಟ್ಟ ಈ ಗುರಿಗಳಿಗೆ ವ್ಯತಿರಿಕ್ತವಾಗಿದೆ. ನಮ್ಮ ವ್ಯವಸ್ಥೆಯಲ್ಲಿನ ಬಹಳಷ್ಟು ಸಂಘರ್ಷಗಳು ಮತ್ತು ಬಿಕ್ಕಟ್ಟುಗಳು ಈ ವೈರುಧ್ಯದಿಂದಾಗಿಯೇ– ಅಂದರೆ ಒಂದಡೆಯಲ್ಲಿ ರಾಜಕೀಯ ಪ್ರಜಾಪ್ರಭುತ್ವ, ಅದರ ಜತೆಜತೆಗೇ ಸಂಪತ್ತಿನ ಕೇಂದ್ರೀಕರಣ ಮತ್ತು ಅರ್ಥಿಕ ಅಸಮಾನತೆಗಳಿಂದಾಗಿಯೇ– ಉಂಟಾಗಿವೆ.

ನವ–ಉದಾರವಾದಿ ಬಂಡವಾಳಶಾಹಿಯ ಅಡಿಯಲ್ಲಿ ಅಸಮಾನತೆಗಳನ್ನು ಕನಿಷ್ಟಗೊಳಿಸುವ ಬದಲು ಅವನ್ನು ಪೋಷಿಸಲಾಗುತ್ತಿದೆ, ಉಲ್ಬಣಗೊಳಿಸಲಾಗುತ್ತಿದೆ. ಒಂದು ಶೆಕಡಾ ಅತ್ಯಂತ ಶ್ರೀಮಂತ ಭಾರತೀಯರು ಈಗ ದೇಶದ ಸಂಪತ್ತಿನ 53ಶೇ.ದ ಮೇಲೆ ಒಡೆತನ ಹೊಂದಿದ್ದಾರೆ. ಇನ್ನೊಂದೆಡೆಯಲ್ಲಿ ಜಗತ್ತಿನ ಒಟ್ಟು ಬಡವರಲ್ಲಿ ಐದನೇ ಒಂದು ಭಾಗದಷ್ಟು ಭಾರತದಲ್ಲಿ ವಾಸಿಸುತ್ತಿದ್ದಾರೆ. 2015ರಲ್ಲಿ ದೇಶದೆಲ್ಲೆಡೆಗಳಲ್ಲಿ ರೈತರ ಆತ್ಮಹತ್ಯೆಗಳು ಆತಂಕಕಾರಿ ರೀತಿಯಲ್ಲಿ ಹೆಚ್ಚಿದವು. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಒಡಿಶ, ಮತ್ತು ಇತರ ಸ್ಥಳಗಳಲ್ಲಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರವೊಂದರಲ್ಲೇ 2015ರಲ್ಲಿ 3228 ರೈತ ಆತ್ಮಹತ್ಯೆಗಳು ದಾಖಲಾಗಿವೆ. ವಾಸ್ತವ ಸಂಖ್ಯೆ ಇನ್ನೂ ಹೆಚ್ಚಿದೆ. ಕರ್ಷಕ ಸಂಕಟ ಗ್ರಾಮೀಣ ಬಡವರ ಸಂಖ್ಯೆಯನ್ನು ಹೆಚ್ಚಿಸುತ್ತಿದೆ.

ಭಾರತೀಯ ಸಂವಿಧಾನ ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟ ತತ್ವ ಈ ನಾಲ್ಕು ಬುನಾದಿ ಸೂತ್ರಗಳ ಮೇಲೆ ಸ್ಥಾಪಿಸಲ್ಪಟ್ಟಿದೆ. ನಿಜ, ಇದರೊಳಗೇ ಮಿತಿಗಳು ಅಡಕವಾಗಿವೆ ಎಂಬುದು ಬೇರೆ ಮಾತು. ಈ ನಾಲ್ಕೂ ಕಾಲು ಶತಮಾನದ ಉದಾರೀಕರಣ ಮತ್ತು ಖಾಸಗೀಕರಣದ ನಂತರ ಅಪಮೌಲ್ಯಗೊಂಡಿವೆ, ಅಂದಗೆಟ್ಟು ಕೂತಿವೆ. ಇಂದು ಅಧಿಕಾರದ ಚುಕ್ಕಾಣಿ ಹಿಡಿದವರು ಭಾರತೀಯ ಪ್ರಭುತ್ವದಲ್ಲಿ ಅಳಿದುಳಿದ ಜಾತ್ಯಾತೀತ ಸತ್ವವನ್ನೂ ಸವೆಸಿ ಬಿಡಲು ಶ್ರಮಿಸುತ್ತಿದ್ದಾರೆ. ಪ್ರಭುತ್ವದ ಮತ್ತು ಸಮಾಜದ ಜಾತ್ಯಾತೀತ ಸ್ವರೂಪವನ್ನು ಕಳಚಿ ಹಾಕುವ ಯೋಜನೆ ಈಗ ಬಿಜೆಪಿ–ಆರೆಸ್ಸೆಸ್ ಆಳ್ವಿಕೆಯ ಅಡಿಯಲ್ಲಿ ಜಾರಿಯಲ್ಲಿದೆ.

ಜಾತ್ಯಾತೀತೆಯಿಂದಲೇ ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವದ ಆಧಾರವೆಂದರೆ ಧರ್ಮ, ಲಿಂಗ, ಜಾತಿಯ ಬೇಧಭಾವವಿಲ್ಲದೆ ನಾಗರಿಕರಿಗೆ ಸಮಾನ ಹಕ್ಕುಗಳು ಇರುವುದು. ಇದನ್ನು ಒಂದು ಜಾತ್ಯಾತೀತ ಪ್ರಭುತ್ವ ಮಾತ್ರವೇ ಕೊಡಿಸಲು ಸಾಧ್ಯ. ದೇಶವನ್ನು ಈಗ ಆಳುತ್ತಿರುವವರು ಹಿಂದೂ ಅಂದರೆ ಮಾತ್ರವೇ ರಾಷ್ಟ್ರೀಯವಾದ ಮತ್ತು ಅಂತಿಮವಾಗಿ ನಾಗರಿಕತ್ವ ಎಂದು ಸಮೀಕರಿಸುವ ಒಂದು ಸಿದ್ಧಾಂತದಲ್ಲಿ ನಂಬಿಕೆಯಿರುವವರು. 'ಹಿಂದೂರಾಷ್ಟ್ರ'ದ ಪರಿಕಲ್ಪನೆ ಇತರ ಧರ್ಮಗಳಿಗೆ ಸೇರಿದ ಜನಗಳನ್ನು ಎರಡನೇ ದರ್ಜೆಯ ನಾಗರಿಕರ ಮಟ್ಟಕ್ಕೆ ಇಳಿಸುತ್ತದೆ. ಆರೆಸ್ಸೆಸ್‌ನ ವಕ್ತಾರರು ಬಹಿರಂಗವಾಗಿಯೇ ಸಂವಿಧಾನದಲ್ಲಿ ಜಾತ್ಯಾತೀತತೆಯ ಅಗತ್ಯವನ್ನು ಪ್ರಶ್ನಿಸಿದ್ದಾರೆ.

ನಮ್ಮ ಸಂವಿಧಾನದ ಒಂದು ವಿಶಿಷ್ಟ ಲಕ್ಷಣವೆಂದರೆ ಸಾಮಾಜಿಕ ತಾರತಮ್ಯ ಮತ್ತು ಅಸ್ಪೃಶ್ಯತೆಯಂತಹ ವಿಕಲತೆಗಳನ್ನು ನಿವಾರಿಸಲು ಸಮರ್ಥಕ ಕ್ರಿಯೆಗೆ ಅವಕಾಶ ಕಲ್ಪಿಸಿರುವುದು. ಇದೊಂದು ಸಾಮಾಜಿಕ ನ್ಯಾಯದ ಪರಿಕಲ್ಪನೆ, ಅಸಮತೆಯಿಂದ ಕೂಡಿದ ಜಾತಿವ್ಯವಸ್ಥೆಯನ್ನು ಸುಧಾರಣಾವಾದಿ ರೀತಿಯಲ್ಲಿ ಎದುರಿಸುವ ಒಂದು ಪ್ರಯತ್ನ. 65 ವರ್ಷಗಳ ನಂತರವೂ ಜಾತಿ ದಮನ, ಜತೆಗೆ ಅಸ್ಪೃಶ್ಯತೆಯೆಂಬ ದುಷ್ಟ ಪದ್ಧತಿ ಕೂಡ ವಿವಿಧ ರೂಪಗಳಲ್ಲಿ ಸಮಾಜವನ್ನು ಆವರಿಸಿಕೊಂಡಿವೆ. ಈ ವಿಷಯದಲ್ಲಿ 'ಹಿಂದುತ್ವ' ಹಿಂದೂಶಾಸ್ತ್ರಗಳನ್ನು ಎತ್ತಿ ಹಿಡಿಯಬೇಕು ಎನ್ನುತ್ತದೆ.

ಅತಿ ದೊಡ್ಡ ವಿಫಲತೆ

ಪ್ರಭುತ್ವದ ಅತಿ ದೊಡ್ಡ ವಿಫಲತೆಯೆಂದರೆ ಸಮಾಜದಲ್ಲಿ ಅತ್ಯಂತ ಹೆಚ್ಚು ದಮನಕ್ಕೆ ಒಳಗಾಗಿರುವ ದಲಿತರಿಗೆ ನ್ಯಾಯ ಒದಗಿಸಲಾಗದಿರುವುದು. ಬಲಪಂಥೀಯ ಹಿಂದು ಸಂಕುಚಿತವಾದಿಗಳ ಉದಯದಿಂದ ಈ ದಮನ ಇನ್ನಷ್ಟು ತೀವ್ರಗೊಂಡಿದೆ. ಫರೀದಾಬಾದ್‌ನಲ್ಲಿ ಇಬ್ಬರು ದಲಿತ ಮಕ್ಕಳನ್ನು ಸುಟ್ಟು ಹಾಕಿದ ಭೀಕರ ಘಟನೆ ಮತ್ತು ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಆತ್ಮಹತ್ಯೆಯತ್ತ ತಳ್ಳಲ್ಪಟ್ಟ ರೋಹಿತ್ ವೆಮುಲಾರ ದುರಂತಮಯ ಕೊನೆ ಈ ಜಾತಿ ಕಂದಾಚಾರ ಈಗಲೂ ಮುಂದುವರೆಯುತ್ತಿರುವುದರ ಕತೆ ಹೇಳುತ್ತವೆ.

ಗಣತಂತ್ರ ದಿನದ ಕೆಲವೇ ದಿನಗಳ ಮೊದಲು ಉಡುಪಿಯ ಪೇಜಾವರ ಮಠದ ಕೃಷ್ಣ ದೇವಸ್ಥಾನದಲ್ಲಿ ಒಂದು ದೊಡ್ಡ ಧಾರ್ಮಿಕ ಸಮಾರಂಭ ನಡೆದಿದೆ(ಎರಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯ ಉತ್ಸವ–ಸಂ.) ಅಲ್ಲಿ ಈಗಲೂ 'ಪಂಕ್ತಿಭೇದ'(ಬ್ರಾಹ್ಮಣರಿಗೆ, ಮತ್ತು ಶೂದ್ರರಿಗೆ ಪ್ರತ್ಯೇಕ ಊಟದ ಪಂಕ್ತಿಗಳು) ಮತ್ತು 'ಮಡೆಸ್ನಾನ'(ಬ್ರಾಹ್ಮಣರ ಊಟವಾದ ಮೇಲೆ ಅವರು ಬಿಟ್ಟ ಊಟದೆಲೆಗಳ ಮೇಲೆ ಹೊರಳಾಡುವುದು) ನಡೆಯುತ್ತಿದೆ. ಈ ಸಮಾರಂಭದಲ್ಲಿ ಬಿಜೆಪಿ ಕೇಂದ್ರ ಮಂತ್ರಿಗಳು, ಆಂಧ್ರಪ್ರದೇಶದ ಮುಖ್ಯಮಂತ್ರಿ, ಕರ್ನಾಟಕದ ಮಾಜೀ ಮುಖ್ಯಮಂತ್ರಿಗಳು ಮತ್ತು ಇತರ ಮಂತ್ರಿಗಳು ಮುಂತಾದವರೆಲಲ್ ಭಾಗವಹಿಸಿದ್ದರು. ಅಧರೆ ಯಾರೂ ಈ ನಗ್ನ ಜಾತಿ ತಾರತಮ್ಯದ ಆಚರಣೆಗಳ ವಿರುದ್ಧ ಸೊಲ್ಲೆತ್ತಲಿಲ್ಲ.

ಸಂವಿಧಾನ "ವೈಜ್ಞಾನಿಕ ಮನೋಭಾವ, ಮಾನವೀಯತೆ ಮತ್ತು ಶೋಧನೆಯ ಮತ್ತು ಸುಧಾರಣೆಯ ಭಾವವನ್ನು ಬೆಳೆಸಿಕೊಳ್ಳಬೇಕು" ಎಂದು ನಾಗರಿಕರಿಗೆ ಹೇಳಿದ್ದರೂ, ಪ್ರಭುತ್ವ ಸಾರ್ವಜನಿಕ ಕ್ಷೇತ್ರದಲ್ಲಿ ಧರ್ಮೀಯತೆಗೇ ಪೋಷಣೆ ನೀಡುತ್ತಿದೆ, ಪ್ರೋತ್ಸಾಹ ನೀಡುತ್ತಿದೆ. ವೈಜ್ಞಾನಿಕ ಮನೋಭಾವವನ್ನು ಪ್ರೋತ್ಸಾಹಿಸುವುದಿರಲಿ, ಪ್ರಧಾನ ಮಂತ್ರಿಗಳೇ ಪ್ರಾಚೀನ ವಿಜ್ಞಾನದ ಸಾಧನೆಗಳು ಎಂದು ಹೊಗಳುತ್ತ, ಗಣೇಶನ ಆನೆಯ ತಲೆ ಆಗಿನವರಿಗೆ ಪ್ಲಾಸ್ಟಿಕ್ ಸರ್ಜರಿಯ ಜ್ಞಾನವಿತ್ತು ಎಂದು ತೋರಿಸುತ್ತದೆ ಎಂದಿದ್ದರಲ್ಲ!

ಸಂವಿಧಾನದಲ್ಲಿ ಒಂದು ಸೀಮಿತ ಸ್ವರೂಪದಲ್ಲಾದರೂ ಇರುವ ಒಕ್ಕೂಟ ತತ್ವವನ್ನು ಕ್ರಮೇಣ ಸೊರಗಿಸಿಕೊಂಡು ಬಂದಿದ್ದು, ನವ–ಉದಾರವಾದಿ ಆಳ್ವಿಕೆಯಲ್ಲಿ ಅದರ ಬೇಗ ತೀವ್ರಗೊಂಡಿದೆ. ರಾಜ್ಯಗಳನ್ನು ಮಾರುಕಟ್ಟೆಗಳಲ್ಲಿ ಸಂಪನ್ಮೂಲಗಳು ಮತ್ತು ಬಂಡವಾಳಕ್ಕೆ ಪರಸ್ಪರ ಸ್ಪರ್ಧಿಸುವ ಮಟ್ಟಕ್ಕೆ ಇಳಿಸಲಾಗಿದೆ. ಅವುಗಳನ್ನು ಅಧಿಕಾರವಿಹೀನಗೊಳಿಸಿ, ಅವಕ್ಕೆ ಸಂಪನ್ಮೂಲಗಳು ದಕ್ಕದೆ ವಿಶೇಷ ವಿಧ ಎಂಬ ಸ್ಥಾನಮಾನನ ಕೊಡಿ ಎಂದೋ, ಅಥವ ಒಂದು ಅಖಿಲ ಭಾರತ ವೈದ್ಯಕೀಯ ಸಂಸ್ಥೆ ಅಥವ ಐಐಟಿಯನ್ನು ವರವಾಗಿ ದಯಪಾಲಿಸಿ ಎಂದೋ ಕೈಚಾಚಬೇಕಾದ ಮಟ್ಟಕ್ಕೆ ಅವನ್ನು ಇಳಿಸಲಾಗಿದೆ. ಯೋಜನಾ ಆಯೋಗದ ರದ್ದತಿ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಕಳಚಿ ಹಾಕಿ ರಾಜ್ಯಗಳನ್ನು ಇನ್ನಷ್ಟು ಕೇಂದ್ರದ ಮರ್ಜಿಗೆ ಒಳಪಡಿಸಲಾಗಿದೆ.

ನವ–ಉದಾರವಾದಿ ರಾಜಕೀಯ

ಸಂಸದೀಯ ಪ್ರಜಾಪ್ರಭುತ್ವದ ಜೀವಸತ್ವವನ್ನೇ ನವ–ಉದಾರವಾದಿ ರಾಜಕೀಯ ಹಿಂಡಿ ಹಾಕುತ್ತಿದೆ. ಹಣಬಲ ಮತ್ತು ಬಂಡವಾಳಶಾಹಿ–ರಾಜಕಾರಣಿ ದುಷ್ಟಕೂಟ ಬೂರ್ಜ್ವಾ ಪಕ್ಷಗಳಲ್ಲಿ ರಾರಾಜಿಸುತ್ತಿವೆ. ಈ ಮೂಲಕ ಯಾರೇ ಅಧಿಕಾರಕ್ಕೆ ಬಂದರೂ, ಸರಕಾರ ಬದಲಾಗಬಹುದಷ್ಟೇ, ಧೋರಣೆಗಳು ಮಾತ್ರ ಬದಲಾಗದೆ ಅವೇ ಉಳಿಯುವಂತೆ ನೋಡಿಕೊಳ್ಳಲಾಗುತ್ತಿದೆ. ಜನತೆಗೆ ಆಯ್ಕೆ ಮಾಡಿಕೊಳ್ಳಬಹುದಾದ ಅಧಿಕಾರವೇ ಇಲ್ಲದಂತೆ ಮಾಡಲಾಗುತ್ತಿದೆ. ಡಾ. ಅಂಬೇಡ್ಕರ್ ಎಚ್ಚರಿಸಿದ್ದ ರಾಜಕೀಯ ಸಮಾನತೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ನಡುವೆ ಸಂಬಂಧವೇ ಇಲ್ಲದಂತಹ ಸ್ಥಿತಿ ಏರ್ಪಟ್ಟಿದೆ.



ಪ್ರಜಾಪ್ರಭುತ್ವವನ್ನು ಕೃಶಗೊಳಿಸುವ ಕ್ರಿಯೆ ವಿವಿಧ ರೀತಿಗಳಲ್ಲಿ ಅಭಿವ್ಯಕ್ತಗೊಳ್ಳುತ್ತಿದೆ. ಕಾರ್ಮಿಕ ಸಂಘಗಳನ್ನು ಕಟ್ಟಿಕೊಳ್ಳುವುದು ಸಂವಿಧಾನ ಕೊಟ್ಟಿರುವ ಒಂದು ಮೂಲಭೂತ ಹಕ್ಕು. ಅದಕ್ಕೆ ಆವರಣ ಹಾಕಿ ಅದನ್ನು ಚಲಾಯಿಸುವುದೇ ಬಹಳ ಕಷ್ಟಕರವಾಗುವಂತೆ ಮಾಡಲಾಗಿದೆ. ಈ ಹಕ್ಕು ಕಾರ್ಮಿಕರಿಗೆ ದಕ್ಕದಂತೆ ವಂಚಿಸುವಲ್ಲಿ ಪ್ರಭುತ್ವವೂ ಶಾಮೀಲಾಗುತ್ತದೆ, ಎಸ್‌ಇಝೆಡ್(ವಿಶೇಷ ಆರ್ಥಿಕ ವಲಯ)ಗಳಲ್ಲಂತೂ ಈ ಹಕ್ಕನ್ನು ವಂಚಿಸುವುದನ್ನೇ ಕಾನೂನು ಬದ್ಧಗೊಳಿಸುತ್ತದೆ. ಮುನ್ನೆಚ್ಚರಿಕೆಯ ಸ್ಥಾನಬದ್ಧತೆ ಕುರಿತಂತೆ ಸಂವಿಧಾನದಲ್ಲಿ ಇರುವ ದೋಷವನ್ನು ಮನಬಂದಂತೆ ಬಳಸಿಕೊಂಡು ವೈಯಕ್ತಿಕ ಸ್ವಾತಂತ್ರ್ಯಗಳ ಮೇಲೆ ಮಿತಿ ಹೇರುವ ಕರಾಳ ಕಾನೂನುಗಳನ್ನು ತರಲಾಗುತ್ತಿದೆ. ಈಗಿನ ಆಡಳಿತವಂತೂ ಭಿನ್ನ ಅಭಿಪ್ರಾಯಗಳು ಮತ್ತು ಅಲ್ಪಸಂಖ್ಯಾತರ ಪ್ರತಿಭಟನೆಗಳಿಗೆ ರಾಷ್ಟ್ರ–ವಿರೋಧಿ ಎಂಬ ಹಣೆಪಟ್ಟಿ ಹಚ್ಚಿ ಅವುಗಳ ವಿರುದ್ಧ ಎಗ್ಗಿಲ್ಲದೆ ದೇಶದ್ರೋಹದ ಕಾನೂನುಗಳನ್ನು ಬಳಸುತ್ತಿದೆ. ನವ–ಉದಾರವಾದ ಮತ್ತು ಪ್ರಭುತ್ವ–ಪ್ರಾಯೋಜಿತ ಕೋಮುವಾದ ಸರ್ವಾಧಿಕಾರಶಾಹಿಗೆ ದಾರಿ ಮಾಡಿಕೊಡುತ್ತಿದೆ. ನಮ್ಮ ಗಣತಂತ್ರ ಒಂದು ಸಂವಿಧಾನಿಕ ಸರ್ವಾಧಿಕಾರಶಾಹಿಯಾಗಿ ವಿರೂಪಗೊಳ್ಳುವ ಅಪಾಯ ಉಂಟಾಗಿದೆ.

ಪ್ರಜಾಪ್ರಭುತ್ವವನ್ನು ಮತ್ತು ಜಾತ್ಯಾತೀತತೆಯನ್ನು ರಕ್ಷಿಸುವ ಹೋರಾಟ ನಡೆಸಲು ನವ–ಉದಾರವಾದ ಮತ್ತು ಕೋಮುವಾದದ ವಿರುದ್ಧ ಒಟ್ಟಾಗಿ, ಏಕಕಾಲದಲ್ಲಿ ನಡೆಸುವ ಹೋರಾಟ ಅಗತ್ಯವಾಗಿದೆ. ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟ ಹಿಂದುತ್ವ ಸರ್ವಾಧಿಕಾರಶಾಹಿ ಶಕ್ತಿಗಳ ವಿರುದ್ಧ ಹೋರಾಟದ ಒಂದು ಕೀಲಿಗೈ. ನಮ್ಮ ಗಣತಂತ್ರದ ಪ್ರಜಾಸತ್ತಾತ್ಮಕ ಜಾತ್ಯಾತೀತ ಆಧಾರದ ಮೇಲೆ ಪ್ರತಿಯೊಂದು ದಾಳಿಯನ್ನು ಹಿಮ್ಮೆಟ್ಟಿಸಬೇಕಾಗಿದೆ. ಇದು ಈ ಗಣತಂತ್ರ ದಿನದಂದು ನಾಗರಿಕರ ದೃಢನಿರ್ಧಾರ ಆಗಬೇಕಾಗಿದೆ.

ಇತ್ತೀಚೆಗೆ ನಡೆದ ಪ್ಯಾರೀಸ್ ಹವಾಮಾನ ಶೃಂಗಸಭೆಯಲ್ಲಿ ಆದ ಒಪ್ಪಂದದಿಂದ ಎಲ್ಲರೂ ಖುಶ್ ಆಗಿದ್ದಾರೆ. ಪ್ರಧಾನಿ ಮೋದಿಯಂತೂ 'ಯಾರೂ ಗೆದ್ದಿಲ್ಲ, ಯಾರೂ ಸೋತಿಲ್ಲ, ಹವಾಮಾನ ನ್ಯಾಯ ಗೆದ್ದಿತು' ಎಂದರು. ಅಧ್ಯಕ್ಷ ಒಬಾಮ ಮತ್ತು ಇತರ ಹಲವು ಜಾಗತಿಕ ನಾಯಕರೂ ಬಹಳ ಖುಶ್ ಆಗಿದ್ದರು. ಆದರೆ ವಿಜ್ಞಾನಿಗಳು, ಪರಿಸರವಾದಿಗಳು ಈ ಒಪ್ಪಂದ ನಾಲಾಯಕ್ ಎಂದರು. ಇದು ಯಾಕೆ ಹೀಗೆ? ಮುಂದೆ ಓದಿ.



ಪ್ಯಾರಿಸ್ ಹವಾಮಾನ ಶೃಂಗಸಭೆ ನಾಲಾಯಕ್ ಒಪ್ಪಂದ, ಆದರೂ ಎಲ್ಲರೂ ಖುಶ್!

ವಸಂತರಾಜ ಎನ್.ಕೆ.

ತಾಪಮಾನ ಏರಿಕೆ ತಡೆಯ ವಿಜ್ಞಾನ

ತಾಪಮಾನ ಏರಿಕೆಯನ್ನು 2 ಡಿಗ್ರಿ ಸೆಂಟಿಗ್ರೇಡ್ ಒಳಗೆ ಮಿತಿಗೊಳಿಸಲು ಕಾರ್ಬನ್ ಡೈ ಆಕ್ಸೈಡ್ ಮತ್ತು ಇತರ 'ಗ್ರೀನ್ ಹೌಸ್ ಪರಿಣಾಮ' ಉಂಟು ಮಾಡುವ ಅನಿಲಗಳ 'ಒಟ್ಟುಗೂಡಿದ' ಹೊರಸೂಸುವಿಕೆಯನ್ನು 3 ಸಾವಿರ ಶತಕೋಟಿ ಟನ್ನುಗಳಿಗೆ ಸೀಮಿತಗೊಳಿಸಬೇಕು ಎಂಬುದು ಭೂಮಿಯ ವಾತಾವರಣ ವ್ಯವಸ್ಥೆಯ ಕೂಲಂಕಷ ವೈಜ್ಞಾನಿಕ ಅಧ್ಯಯನದಿಂದ ತಿಳಿದು ಬಂದಿದೆ. ಇಲ್ಲಿ 'ಒಟ್ಟುಗೂಡಿದ' ಎಂದ–ರೆ ಕೈಗಾರಿಕಾ ಯುಗದ ಮೊದಲಿನಿಂದ 2100 ವರೆಗಿನ ಒಟ್ಟು ಹೊರಸೂಸುವ ಅನಿಲಗಳ ಮೊತ್ತ ಎಂದರ್ಥ. ಅಂದರೆ ಈವರೆಗಿನ ಚಾರಿತ್ರಿಕ ಮತ್ತು ಭವಿಷ್ಯದ ಹೊರಸೂಸುವ ಅನಿಲಗಳ ಮೊತ್ತಕ್ಕೆ ಗರಿಷ್ಠ ಮಿತಿ ಇದೆ ಎಂದರ್ಥ. 2012 ರವರೆಗೆ ಆಗಲೇ 2 ಸಾವಿರ ಶತಕೋಟಿ ಟನ್ನುಗಳ ಹೊರಸೂಸುವಿಕೆ ಆಗಿದೆ. 2100 ವರೆಗೆ ಅಂದರೆ ಮುಂದಿನ ಸುಮಾರು ಒಂಬತ್ತು ದಶಕಗಳ ಅವಧಿಗೆ ಸುಮಾರು 1 ಸಾವಿರ ಶತಕೋಟಿ ಟನ್ನುಗಳ 'ಬಜೆಟ್' ಮಾತ್ರ ಇದೆ. ಶೇ.66 ರಷ್ಟು ಖಾತ್ರಿಯಾಗಿ 2 ಡಿಗ್ರಿ ಸೆಂಟಿಗ್ರೇಡ್ ಮೀರದೆ ಇರಬೇಕಾದರೆ ಇಂದಿನಿಂದ ಒಟ್ಟು ಹೊರಸೂಸುವ ಅನಿಲಗಳ ಮೊತ್ತವನ್ನು 1 ಸಾವಿರ ಶತಕೋಟಿ ಟನ್ನುಗಳ ಒಳಗೆ ಮಿತಿಗೊಳಿಸಬೇಕು. ಶೇ.50 ರಷ್ಟು ಖಾತ್ರಿಯಾಗಿ 1.5 ಡಿಗ್ರಿ ಸೆಂಟಿಗ್ರೇಡ್ ಮೀರದೆ ಇರಬೇಕಾದರೆ ಇಂದಿನಿಂದ ಒಟ್ಟು ಹೊರಸೂಸುವ ಅನಿಲಗಳ ಮೊತ್ತವನ್ನು 550 ಸಾವಿರ ಶತಕೋಟಿ ಟನ್ನುಗಳ ಒಳಗೆ ಮಿತಿಗೊಳಿಸಬೇಕು. ಇದು ವೈಜ್ಞಾನಿಕ ಮಾಡೆಲುಗಳ ವಿಶ್ಲೇಷಣೆಯಿಂದ ಹೊರಡುವ ತೀರ್ಮಾನಗಳು. ಇದನ್ನು ಕೋಷ್ಟಕದಲ್ಲಿ ಸಂಗ್ರಹವಾಗಿ ಕೊಡಲಾಗಿದೆ.

ಸರಾಸರಿ ತಾಪಮಾನ ಏರಿಕೆ (ಕೈಗಾರಿಕಾ ಯುಗದ ಮೊದಲಿನಿಂದ 2100ವರೆಗೆ)	2 ಡಿಗ್ರಿ ಸೆಂಟಿಗ್ರೇಡ್ ಒಳಗೆ ಇರಬೇಕಾದರೆ		1.5 ಡಿಗ್ರಿ ಸೆಂಟಿಗ್ರೇಡ್ ಒಳಗೆ ಇರಬೇಕಾದರೆ	
	ಶೇ. 50 ಖಾತ್ರಿ	ಶೇ. 66 ಖಾತ್ರಿ	ಶೇ. 33 ಖಾತ್ರಿ	ಶೇ. 50 ಖಾತ್ರಿ
2012ರಿಂದ 2100ವರೆಗೆ ಲಭ್ಯವಿರುವ ಒಟ್ಟುಗೂಡಿದ ಕಾರ್ಬನ್ ಸೂಸುವಿಕೆ (ಶತಕೋಟಿ ಟನ್ನುಗಳಲ್ಲಿ)	1300	1000	850	550

ಒಪ್ಪಂದ ಯಾಕೆ ನಾಲಾಯಕ್?

- ಪ್ಯಾರೀಸ್ ಒಪ್ಪಂದ ಕೈಗಾರಿಕಾ ಯುಗದ ಮೊದಲಿನಿಂದ 2100 ವರೆಗಿನ ಸರಾಸರಿ ತಾಪಮಾನ ಏರಿಕೆಯನ್ನು 2 ಡಿಗ್ರಿ ಸೆಂಟಿಗ್ರೇಡ್‌ಗಿಂತ ಬಹಳ ಕಡಿಮೆಗೆ ಮಿತಿಗೊಳಿಸಬೇಕು ಮತ್ತು 1.5 ಡಿಗ್ರಿಸೆಂಟಿಗ್ರೇಡ್‌ಗಿಂತ ಕಡಿಮೆಯ ಮಟ್ಟ ಸಾಧಿಸಲು ಪ್ರಯತ್ನಿಸಬೇಕು ಎಂಬ ಘನ ಉದ್ದೇಶವನ್ನೇನೋ ಇಟ್ಟುಕೊಂಡಿದೆ.
- ಆದರೆ ಶೃಂಗಸಭೆಗೆ ಪ್ರತಿದೇಶ ಕೊಟ್ಟ ಅನಿಲಗಳ ಹೊರಸೂಸುವಿಕೆಯನ್ನು ಮಿತಿಗೊಳಿಸುವ ಕಾರ್ಬನ್ 'ಬಜೆಟ್'ಗಳ ಮೊತ್ತ 3 ಸೆಂಟಿಗ್ರೇಡ್ ತಾಪಮಾನ ಏರಿಕೆಯನ್ನು ದಾಟುತ್ತದೆ. ಈ ಮಿತಿಗಳ ಬಗ್ಗೆ ಬದ್ಧತೆ 'ಐಚ್ಛಿಕ'. ಆದ್ದರಿಂದ ಈ ಒಪ್ಪಂದದಿಂದ ತಾಪಮಾನ ಏರಿಕೆಯನ್ನು 1.5 ಡಿಗ್ರಿಗೆ ಮಿತಿಗೊಳಿಸುವುದು ಅಸಾಧ್ಯ, 2 ಡಿಗ್ರಿಗೆ ಮಿತಿಗೊಳಿಸುವುದು ಬಹಳ ಕಷ್ಟಸಾಧ್ಯ. ಆದ್ದರಿಂದ ಒಪ್ಪಂದದ ಘೋಷಣೆಗಳು ಬರಿಯ ಎಲ್ಲರನ್ನು 'ಖುಶ್' ಮಾಡುವ ಹಗಲು ಗನಸುಗಳು ಅಷ್ಟೇ.
- ಒಪ್ಪಂದ ತಾಪಮಾನ ಏರಿಕೆಯನ್ನು ಮಿತಿಗೊಳಿಸುವ ಒಟ್ಟುಗೂಡಿಸಿದ ಅನಿಲ ಹೊರಸೂಸುವಿಕೆಯನ್ನು ನಿರ್ಲಕ್ಷಿಸಿದೆ. ಬದಲಾಗಿ ವರ್ಷಕ್ಕೆ ಪ್ರತಿದೇಶ 'ಐಚ್ಛಿಕ'ವಾಗಿ ಕೊಟ್ಟ ಶೇಕಡಾವಾರು ಕಡಿತದ ಸುತ್ತ ಚೌಕಾಶಿ ಮೇಲೆ ಗಮನ ಕೇಂದ್ರೀಕರಿಸಿದೆ. ಆ ಮೂಲಕ ತಾಪಮಾನ ಏರಿಕೆಯ ವಿಜ್ಞಾನವನ್ನೇ ಕಡೆಗಣಿಸಿದೆ.
- ತಾಪಮಾನ ಏರಿಕೆಯ ಜವಾಬ್ದಾರಿಯನ್ನು ಅಭಿವೃದ್ಧಿಯ ಅಗತ್ಯಗಳಿಗಾಗಿ ಕಾರ್ಬನ್ ಬಜೆಟ್‌ನ ಗರಿಷ್ಠ ಬಿಂದುವನ್ನು ದಾಟಿರುವ 'ಕೈಗಾರೀಕೃತ ದೇಶ'ಗಳಿಂದ ಅತಿ ಹೆಚ್ಚು ಕಡಿತ, ಮತ್ತು ಅಭಿವೃದ್ಧಿಯ ಹಂತದಲ್ಲಿ ಬಹಳ ಹಿಂದೆ ಇರುವ ದೇಶಗಳಿಗೆ ಅದಕ್ಕೆ ತಕ್ಕ ಕಡಿಮೆ ಕಡಿತ ಹಂಚುವ ನ್ಯಾಯಬದ್ಧ ಮತ್ತು ಕಾರ್ಯಸಾಧ್ಯ ಯೋಜನೆ ಮಾಡಿಲ್ಲ.
- ಮಾತ್ರವಲ್ಲದೆ, ಚಾರಿತ್ರಿಕ ಒಟ್ಟುಗೂಡಿಸಿದ ಅನಿಲ ಹೊರಸೂಸುವಿಕೆಯನ್ನು ನಿರ್ಲಕ್ಷಿಸಿದೆ. ಆ ಮೂಲಕ 'ಸಮಾನ ಆದರೆ ವಿಭಿನ್ನ ಜವಾಬ್ದಾರಿ'ಯ ಮತ್ತು 'ಹೆಚ್ಚು ಮಲಿನಗೊಳಿಸಿದವರು ಅನಿಲ ಹೊರಸೂಸುವಿಕೆ ಕಡಿತದ ಹೆಚ್ಚಿನ ಜವಾಬ್ದಾರಿ ಹೊರಬೇಕು' ಎನ್ನುವ ಹಿಂದಿನ ನೀತಿಗೆ ತಿಲಾಂಜಲಿ ಇತ್ತಿದೆ. ಬದಲಾಗಿ ಈಗಿನ ವಾರ್ಷಿಕ ಅನಿಲ ಹೊರಸೂಸುವಿಕೆಯನ್ನು ಆಧಾರವಾಗಿರಿಸಿಕೊಂಡು ತಾಪಮಾನ ಏರಿಕೆಯ ಜವಾಬ್ದಾರಿಯನ್ನು ಭಾರತ, ಚೀನಾಗಳಂತಹ ದೊಡ್ಡ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹೆಗಲ ಮೇಲೆ ಹೇರಿದೆ. ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೂ ಅವು ಹೊರಲಾರದ ಹೊರೆ ಹೊರಸಿದೆ.
- ಈವರೆಗಿನ ಅನಿಲ ಹೊರಸೂಸುವಿಕೆಯ ಮುಕ್ಕಾಲು ಭಾಗಕ್ಕೆ ಕಾರಣರಾಗಿರುವ ಅಮೆರಿಕ, ಯುರೋ ಕೂಟ ಮೊದಲಾದ 'ಕೈಗಾರೀಕೃತ ದೇಶ'ಗಳು ಆ ಮಾಲಿನ್ಯಕ್ಕೆ ಪ್ರಾಯಶ್ಚಿತ್ತವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ದಂಡ–ಪರಿಹಾರವಾಗಿ ಪರಿಸರ–ಸ್ನೇಹಿ ಶಕ್ತಿ ಉತ್ಪಾದನಾ ತಂತ್ರಜ್ಞಾನ ಮತ್ತು ಅದರ ಜಾರಿಗೆ ಬೇಕಾದ ಬಂಡವಾಳ ಒದಗಿಸಬೇಕೆಂಬ ನೀತಿಯನ್ನೂ ಗಾಳಿಗೆ ತೂರಲಾಗಿದೆ. 2020ರ ನಂತರ ಅಂತಹ ನೆರವಿನ ಮೊತ್ತವನ್ನು 100 ಶತಕೋಟಿ ಡಾಲರುಗಳಿಗೆ ಮಿತಿಗೊಳಿಸಲಾಗಿದೆ. ಇದು ಖಾಸಗಿ ಅಥವಾ ಸರಕಾರಿ ಸಾಲವೇ ಸಹಾಯ ಧನವೇ ಎಂಬುದನ್ನೂ ನಿಗದಿಗೊಳಿಸಲಾಗಿಲ್ಲ.
- ಮಹತ್ವಾಕಾಂಕ್ಷೆಯ ಗುರಿ (1.5–2 ಡಿಗ್ರಿಗೆ ಏರಿಕೆ ಮಿತಿಗೊಳಿಸುವುದು) ಮತ್ತು ಅದರ ಹತ್ತಿರ ಸಹ ಮುಟ್ಟಲು ಸಾಧ್ಯವಾಗುವಂತಹ ಸುಸಂಬದ್ಧ ಯೋಜನೆ ಇಲ್ಲದೆ, ಅದರತ್ತ ಕಾರ್ಯಾಚರಣೆಯ ಗಂಭೀರ ಪ್ರಯತ್ನಗಳ ಮೇಲೆ ತಣ್ಣೀರೆರಚುವ ಸಾಧ್ಯತೆಯೇ ಹೆಚ್ಚು. ನಿರ್ಣಾಯಕ ಪರಿಣಾಮಕಾರಿ ಕಾರ್ಯಾಚರಣೆ ಆಗದಿರುವ ಸಾಧ್ಯತೆಯೇ ಹೆಚ್ಚು.
- ಹವಾಮಾನ ಬದಲಾವಣೆ ಅಣುಯುದ್ಧದಷ್ಟೇ ಮನುಕುಲಕ್ಕೆ ಅಪಾಯಕಾರಿ. ಆದರೆ ಅಣ್ವಸ್ತ್ರಗಳ ನಾಶ/ತಡೆಗಳ ಬಗ್ಗೆ ನಿಷ್ಕ್ರಿಯತೆಗಿಂತ ಹವಾಮಾನ ಬದಲಾವಣೆ ನಿಷ್ಕ್ರಿಯತೆ ಹೆಚ್ಚು ಅಪಾಯಕಾರಿ.

ತಾಪಮಾನ ಏರಿಕೆ ಏನು? ಏಕೆ?

ಮಾನವನ ಆರ್ಥಿಕ (ಮುಖ್ಯವಾಗಿ ಕೈಗಾರಿಕಾ) ಚಟುವಟಿಕೆಗಳಿಂದ ಹವಾಮಾನದಲ್ಲಿ ವೇಗವಾಗಿ ಬದಲಾವಣೆ ಆಗುತ್ತಿದೆ. ಪ್ರಮುಖವಾಗಿ ಕಾರ್ಬನ್ ಡೈ ಆಕ್ಸೈಡ್ ಮತ್ತು ಇತರ 'ಗ್ರೀನ್ ಹೌಸ್ ಪರಿಣಾಮ' (ಉಷ್ಣ ಹೊರಹೋಗಲು ಬಿಡದೆ ತಾಪಮಾನ ಏರಿಕೆ) ಉಂಟು ಮಾಡುವ ಅನಿಲಗಳ ಹೊರಸೂಸುವಿಕೆಯಿಂದ ಭೂಮಿ ಮೇಲ್ಮೈಯ ಸರಾಸರಿ ತಾಪಮಾನ ಸತತವಾಗಿ ಏರುತ್ತಿದೆ. ಇಂತಹ ಅನಿಲಗಳನ್ನು ಹೊರಸೂಸುವುದು ಮುಖ್ಯವಾಗಿ ತೈಲ, ಕಲ್ಲಿದ್ದಲು ಮುಂತಾದ ಕಾರ್ಬನ್ ಆಧಾರಿತ ಇಂಧನಗಳ ಸುಡುವಿಕೆ, ಏರ್ ಕಂಡಿಶನರುಗಳ ಶೈತ್ಯಾಗಾರಕ ಬಳಕೆಗಳಿಂದ. ಇದು ಈಗಾಗಲೇ ಕೈಗಾರಿಕಾ ಕ್ರಾಂತಿಯ ಹಿಂದಿನಿಂದ ಈ ವರೆಗಿನ ತಾಪಮಾನ ಏರಿಕೆಯ ವೈಜ್ಞಾನಿಕ ಅಧ್ಯಯನಗಳಿಂದ ಸಾಬೀತಾಗಿದೆ. ಇದೇ ರೀತಿ ಮುಂದುವರೆದರೆ ಮಾನವ ಸೇರಿದಂತೆ ಎಲ್ಲಾ ಜೀವಿಗಳ ಅಸ್ತಿತ್ವವನ್ನೇ ನಾಶ ಮಾಡಬಲ್ಲ ತೀವ್ರ ಹವಾಮಾನ ಬದಲಾವಣೆಗಳನ್ನು ತರಬಲ್ಲುದು. ಹಿಮಶಿಖರಗಳು ಕರಗುವುದು, ಸಾಗರದ ಮಟ್ಟ ತೀವ್ರವಾಗಿ ಏರಿ ಹಲವು ದ್ವೀಪಗಳು ಸಾಗರ ತೀರಗಳು ಮುಳುಗುವುದು, ಅಕಾಲಿಕ ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತಗಳು ಮುಂತಾದ ಇತರ ವೈಪರೀತ್ಯಗಳ ಹೆಚ್ಚಳ, ಈಗಿನ ಕೃಷಿ ಆ ಮೂಲಕ ಆಹಾರ ಉತ್ಪಾದನೆಯಲ್ಲಿ ತೀವ್ರ ಏರುಪೇರುಗಳೂ ಆಗಲಿವೆ ಎಂದು ವೈಜ್ಞಾನಿಕ ಮಾಡೆಲುಗಳ ಅಧ್ಯಯನದಿಂದ ತಿಳಿದು ಬಂದಿದೆ. ಕೈಗಾರಿಕಾ ಯುಗದ ಮೊದಲಿನಿಂದ 2100 ವರೆಗೆ ಒಟ್ಟು ಸರಾಸರಿ ತಾಪಮಾನ ಏರಿಕೆ 2 ಡಿಗ್ರಿ ಸೆಂಟಿಗ್ರೇಡ್ ಮೀರಿದರೆ ಈ ಅನಾಹುತಗಳು ಸಂಭವಿಸಲಿವೆ. ಆದ್ದರಿಂದ ಈ ಏರಿಕೆಯನ್ನು 2100ರ ಹೊತ್ತಿಗೆ 2 ಡಿಗ್ರಿ ಸೆಂಟಿಗ್ರೇಡ್ ಗೆ ಮಿತಿಗೊಳಿಸುವುದು ತುರ್ತಿನ ಅಗತ್ಯ. 1.5 ಡಿಗ್ರಿ ಸೆಂಟಿಗ್ರೇಡ್ ಗೆ ಮಿತಿಗೊಳಿಸುವುದು ಅತ್ಯಂತ ಅಪೇಕ್ಷಣೀಯ ಎಂದು ವಿಜ್ಞಾನ ಅಸಂದಿಗ್ಧವಾಗಿ ಹೇಳುತ್ತದೆ.

ಪ್ಯಾರೀಸಿನಲ್ಲಿ ಏನು ನಡೆಯಿತು?

- ಅಮೆರಿಕ ಕಾನೂನು ಬದ್ಧ ಬಾ ಧ್ಯತೆ ಇರುವ ಅಂತರ್‍ರಾಷ್ಟ್ರೀಯ ಒಪ್ಪಂದವನ್ನು ತನ್ನ ಪಾರ್ಲಿಮೆಂಟ್ ಒಪ್ಪುವುದಿಲ್ಲ ಎಂಬ ನೆಪವೊಡ್ಡಿ ಮೊದಲಿನಿಂದಲೂ ವಿರೋಧಿಸಿತ್ತು. ಕ್ಯೋ–ಟೊ ಒಪ್ಪಂದಕ್ಕೂ ಅದು ಸಹಿ ಮಾಡಿರಲಿಲ್ಲ. ಆದರೆ ಈಗಾಗಲೇ ಹವಾಮಾನ ಒಪ್ಪಂದಗಳ ಚೌಕಟ್ಟಿನಲ್ಲಿರುವ ಸಮಾನ ಆದ–ರೆ ವಿಭಿನ್ನ ಜವಾಬ್ದಾರಿ (ಅಥವಾ 'ಮಲಿನ ಮಾಡಿದವರು ತೊಳೆಯಬೇಕು') ನೀತಿಯಂತೆ, ಪ್ರತಿದೇಶದ ಚಾರಿತ್ರಿಕ ಒಟ್ಟುಗೂಡಿಸಿದ ಅನಿಲ ಹೊರಸೂಸುವಿಕೆಯ ಮತ್ತು ಅಭಿವೃದ್ಧಿಯ ಹಂತದ ಆಧಾರದ ಮೇಲೆ ಮುಂದಿನ ಕಾರ್ಬನ್ 'ಬಜೆಟ್' ನಿರ್ಧಾರವನ್ನು ಪೂರ್ಣ ಹೋಗಲಾಡಿಸಬೇಕು ಅಥವಾ ಅದನ್ನು ಅತಿಯಾಗಿ ತೆಳುಗೊಳಿಸಬೇಕು. ಅದೇ ಸಮಯದಲ್ಲಿ ಒಪ್ಪಂದ ಆಗದಿದ್ದರೆ ಅದರ ಆಪಾದನೆ ತನ್ನ ಮೇಲೆ ಬರಬಾರದು ಎಂಬುದು ಅದರ ವ್ಯೂಹಾತ್ಮಕ ಗುರಿಯಾಗಿತ್ತು.
- ಇದಕ್ಕಾಗಿ ಶೃಂಗಸಭೆಯ ಮೊದಲೇ ಅದು ಈಗಿನ ಅನಿಲ ಹೊರಸೂಸುವಿಕೆ ಆಧಾರದ ಮೇಲೆ ಚೀನಾ, ಭಾರತದಂತಹ ದೇಶಗಳು ಮುಖ್ಯ ಅತ್ಯಂತ ಹೆಚ್ಚಿನ ಕಡಿತ ಮಾಡಬೇಕು ಎಂದು

ಹೈದರಾಬಾದ್ ವಿವಿ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲ ಸಾವು

ಅದು ಆತ್ಮಹತ್ಯೆಯಲ್ಲ, ಜಾತಿವ್ಯವಸ್ಥೆ ಪಡೆದ ಬಲಿ



ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಅಧಿಕಾರಿಗಳು ಅಂಬೇಡ್ಕರ್ ವಿದ್ಯಾರ್ಥಿ ಸಂಘ(ಎಎಸ್ಎ) ಮತ್ತು ಎಬಿವಿಪಿ ನಡುವಿನ ವಿವಾದದ ನೆಪವೊಡ್ಡಿ ವಿವಿಯ ಹಾಸ್ಟೆಲುಗಳಿಂದ ಹೊರಹಾಕಿರುವ ಐವರು ದಲಿತ ಪಿಹೆಚ್‌ಡಿ ವಿದ್ಯಾರ್ಥಿಗಳಲ್ಲಿ ಒಬ್ಬರಾದ ರೋಹಿತ್ ವೆಮುಲ ಜನವರಿ 17ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬ ದಾರುಣ ಸುದ್ದಿ ವಿವಿಯ ಆವರಣದಲ್ಲಿ ಮಾತ್ರವಲ್ಲ ದೇಶಾದ್ಯಂತ ಶಿಕ್ಷಣ ರಂಗದಲ್ಲಿನ ಕೇಸರೀಕರಣದ ಈ ಕ್ರೂರ ವರ್ತನೆಯ ಬಗ್ಗೆ ಆಕ್ರೋಶ ಉಂಟು ಮಾಡಿದೆ.

ಈಗಾಗಲೇ 'ಜನಶಕ್ತಿ'ಯಲ್ಲಿ ಪ್ರಕಟಿಸಿರುವಂತೆ ರೋಹಿತ್, ಪ್ರಶಾಂತ್, ಶೇಷಯ್ಯ, ವಿಜಯ್ ಮತ್ತು ಸುಂಕಣ್ಣ ಈ ಐದು ದಲಿತ ಪಿಹೆಚ್‌ಡಿ ವಿದ್ಯಾರ್ಥಿಗಳನ್ನು ವಿವಿಯ ಅಧಿಕಾರಿಗಳು ತಕ್ಷಣವೇ ತಮ್ಮ ಹಾಸ್ಟೆಲ್ ಕೊಠಡಿಗಳನ್ನು ಖಾಲಿ ಮಾಡಬೇಕು ಎಂದು ಆದೇಶಿಸಿದ್ದರು. ಅವರನ್ನು ಖಾಲಿ ಮಾಡಿಸಿ ಆ ಕೊಠಡಿಗಳಿಗೆ ಬೀಗ ಹಾಕಿದ್ದರು. ಇದರಿಂದಾಗಿ ಅವರು ವಿವಿಯ ಆವರಣದಲ್ಲಿ ಹಾಕಿರುವ ಟಾರ್ಪಾಲೀನ್ ಸೂರಿನ ಅಡಿಯಲ್ಲಿ ತೀವ್ರ ಚಳಿಯನ್ನು ಸಹಿಸಿಕೊಂಡು ತಮ್ಮ ಹೋರಾಟವನ್ನು ಮುಂದುವರೆಸಿದ್ದರು.

ಆಂಧ್ರಪ್ರದೇಶದ ಗುಂಟೂರಿನ ನಿವಾಸಿಯಾದ 26ವರ್ಷದ ರೋಹಿತ್ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಸಮಾಜ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದರು, ಅವರಿಗೆ ಯುಜಿಸಿಯ ಜೂನಿಯರ್ ರಿಸರ್ಚ್ ಫೆಲೋಶಿಪ್ ಕೂಡ ಸಂಶೋಧನೆ ಮುಂದುವರೆಸಲು ಸಿಕ್ಕಿತ್ತು.

ಕಳೆದ ಕೆಲವು ವರ್ಷಗಳಿಂದ ಅಂಬೇಡ್ಕರ್ ವಿದ್ಯಾರ್ಥಿ ಸಂಘ(ಎಎಸ್ಎ)ದ ಸದಸ್ಯರಾಗಿದ್ದ ರೋಹಿತ್ ಭಾನುವಾರ (ಜನವರಿ 17) ಮಧ್ಯಾಹ್ನದ ವರೆಗೆ ವಿವಿಯ ಆಡಳಿತ ಕಟ್ಟಡದ ಬಳಿ ನಡೆಯುತ್ತಿದ್ದ ವಿದ್ಯಾರ್ಥಿಗಳ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಧ್ಯಾಹ್ನ ಸ್ವಲ್ಪ ಸಂಶೋಧನಾ ಕೆಲಸವನ್ನು ಮುಗಿಸಿಕೊಂಡು ಬರುತ್ತೇನೆಂದು ಗೆಳೆಯನೊಬ್ಬನ ಹಾಸ್ಟೆಲಿಗೆ ಹೋದ ರೋಹಿತ್ ಮತ್ತೆ ಕಾಣಿಸಲಿಲ್ಲ. ಈ ನಡುವೆ ಅವರ ತಾಯಿಯಿಂದ ಅವರ ಗೆಳೆಯನೊಬ್ಬನಿಗೆ ಫೋನ್ ಕರೆ ಬಂತು. ರೋಹಿತ್ ಫೋನ್ ಮಾಡಿದ್ದ, ಆತನ ದನಿಯಲ್ಲಿ ಬಹಳ ಹತಾಶೆ ಇದ್ದಂತಿತ್ತು, ಮತ್ತೆ ಫೋನ್ ಮಾಡಿದಾಗ ಉತ್ತರ ಸಿಕ್ಕಿಲ್ಲ ಎಂದು ತಾಯಿ ಆತಂಕದಿಂದ ಹೇಳಿದ್ದನ್ನು ಕೇಳಿ ಗೆಳೆಯರು ಆತನಿಗಾಗಿ ಹುಡುಕಾಡಿದರು. ಗೆಳೆಯನ ಹಾಸ್ಟೆಲ್ ಕೋಣೆ ಬಳಿ ಹೋದಾಗ ಅದು ಮುಚ್ಚಿತ್ತು. ಒಡೆದು ಒಳಹೋದಾಗ ರೋಹಿತ್ ನೇಣು ಹಾಕಿಕೊಂಡದ್ದು ಕಂಡು ಬಂತು. ಪಕ್ಕದಲ್ಲೇ ಸಿಕ್ಕ ಆರು ಪುಟಗಳ ಆತನ ಪತ್ರ ಆತ ಈ ದಿನಗಳಲ್ಲಿ ಅನುಭವಿಸಿದ ಮಾನಸಿಕ ಯಾತನೆಗಳ ಒಂದು ಚಿತ್ರವನ್ನು ಕೊಡುತ್ತವೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ರೋಹಿತ್ ಮತ್ತು ಗೆಳೆಯರ ಹೋರಾಟದ ಹಿನ್ನೆಲೆ

2013ರಲ್ಲಿ ಉತ್ತರಪ್ರದೇಶದ ಮುಝಫ್ಫರ್‌ನಗರದಲ್ಲಿ ನಡೆದ ಕೋಮು ಹಿಂಸಾಚಾರದ ವಿಶ್ಲೇಷಣೆ ಮಾಡುವ, ಹೇಗೆ ಅದು ಕೋಮುಧ್ರುವೀಕರಣದ ಯೋಜಿತ ಪ್ರಯತ್ನವಾಗಿತ್ತು, ಇಂತಹ ಪ್ರಯತ್ನಗಳಿಂದ 2014ರ ಲೋಕಸಭಾ ಚುನಾವಣೆಗಳಲ್ಲಿ ಕೋಮುವಾದಿಗಳು ಹೇಗೆ ಭಾರೀ ಗೆಲುವನ್ನು ಪಡೆಯಲು ಸಾಧ್ಯವಾಯಿತು ಎಂಬುದನ್ನು ಬಿಂಬಿಸುವ 'ಮುಝಫ್ಫರ್‌ಪುರ್ ಅಭೀ ಬಾಕಿ ಹೈ' ಡಾಕ್ಯುಮೆಂಟರಿ ಚಿತ್ರ ಪ್ರದರ್ಶನ ಸಹಜವಾಗಿಯೇ ಕೋಮುವಾದಿಗಳನ್ನು ಹತಾಶಗೊಳಿಸಿತ್ತು. ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಇದರ ಪ್ರದರ್ಶನಕ್ಕೆ ಸಂಘ ಪರಿವಾರದ ವಿದ್ಯಾರ್ಥಿ ಸಂಘಟನೆ ಎಬಿವಿಪಿ ಅಡ್ಡಿಪಡಿಸಿತು. ಇದರ ವಿರುದ್ಧ ದೇಶಾದ್ಯಂತ ವಿದ್ಯಾರ್ಥಿಗಳು ಮತ್ತು ಇತರ ಪ್ರಜಾಪ್ರಭುತ್ವವಾದಿಗಳು ಆಕ್ರೋಶ ವ್ಯಕ್ತಪಡಿಸಿದರು.

ಇದರ ಭಾಗವಾಗಿ ಹೈದರಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲೂ ಅಂಬೇಡ್ಕರ್ ವಿದ್ಯಾರ್ಥಿ ಸಂಘ ಪ್ರತಿಭಟನೆ ಏರ್ಪಡಿಸಿತ್ತು. ಈ ಬಗ್ಗೆ ಹೈದರಾಬಾದ್ ವಿಶ್ವವಿದ್ಯಾಲಯದ ಎಬಿವಿಪಿ ಘಟಕದ ಮುಖಂಡ ಸುಶೀಲ್ ಕುಮಾರ್ ಆಗಸ್ಟ್ 3ರಂದು ತನ್ನ ಫೇಸ್‌ಬುಕ್‌ನಲ್ಲಿ 'ಎಎಸ್ಎ ಗೂಂಡಾಗಳು ಗೂಂಡಾಗಿ-ರಿಯ ಬಗ್ಗೆ ಮಾತಾಡುತ್ತಾರೆ-ತಮಾಷೆಯಾಗಿದೆ' ಎಂದು ಬರೆದರು. ಇದರಿಂದ ಆಕ್ರೋಶಗೊಂಡ ರೋಹಿತ್ ಮತ್ತು ಅವರ ಗೆಳೆಯರು ಸುಶೀಲ್ ಕುಮಾರ್ ಬಳಿ ಹೋಗಿ ಆಕ್ಷೇಪ ವ್ಯಕ್ತಪಡಿಸಿದರು. ವಿಶ್ವವಿದ್ಯಾಲಯದ ಭದ್ರತಾ ಸಿಬ್ಬಂದಿಯೂ ಅಲ್ಲಿದ್ದರು. 'ನೀವು ಎಬಿವಿಪಿಯನ್ನು ಗೂಂಡಾಗಳೆಂದಿರಿ, ಅದಕ್ಕೆ ನಾನೂ ಹಾಗೇ ಬರೆದೆ' ಎಂದರಂತೆ. ಆದರೆ ಆತ ಉದಹರಿಸಿದ್ದ ಎಎಸ್ಎ ಪೋಸ್ಟರಿನಲ್ಲಿ ಅಂತಹ ಪದಪ್ರಯೋಗವೇನೂ ಇರಲಿಲ್ಲ. ಸುಶೀಲ್ ಕುಮಾರ್ ವಿಶ್ವವಿದ್ಯಾಲಯದ ಭದ್ರತಾ ಸಿಬ್ಬಂದಿಯ ಸಮ್ಮುಖವೇ 'ಕ್ಷಮಾಪಣೆ 'ಕೇಳಿದರು.

ಆದರೆ ಮರುದಿನವೇ ಆತ ತನ್ನನ್ನು ರೋಹಿತ್ ಮತ್ತು ಆತನ ಎಎಸ್ಎ ಮಂದಿ ಥಳಿಸಿ ಭಾರೀ ಗಾಯ ಉಂಟು ಮಾಡಿದ್ದಾರೆ ಎಂದು ಖಾಸಗಿ ಆಸ್ಪತ್ರೆಗೆ ದಾಖಲಾದ. ಬಿಜೆಪಿ ಎಂಎಲ್‌ಸಿ ರಾಮಚಂದ್ರರಾವ್ ಆಗ ವಿವಿಯ ಉಪಕುಲಪತಿಯಾಗಿದ್ದ ಪ್ರೊ. ಆರ್.ಪಿ.ಶರ್ಮ ಅವರನ್ನು ಭೇಟಿ ಮಾಡಿ ರೋಹಿತ್ ಮತ್ತು ಆತನ ಎಎಸ್ಎ ಗೆಳೆಯರನ್ನು 'ರಾಷ್ಟ್ರ-ವಿರೋಧಿ'ಗಳೆಂದು ಆಪಾದಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಉಪಕುಲಪತಿಗಳು ಪ್ರೊ. ಅಲೋಕ್ ಪಾಂಡೆ ಅಧ್ಯಕ್ಷತೆಯ ಒಂದು ತನಿಖಾ ಸಮಿತಿಯನ್ನು ನೇಮಿಸಿದರು. ಸುಶೀಲ್ ಕುಮಾರ್‌ಗೆ ಚಿಕಿತ್ಸೆ ನೀಡಿದ ವೈದ್ಯರು ಮತ್ತು ವಿಶ್ವವಿದ್ಯಾಲಯ ಡ್ಯೂಟಿ ಸೆಕ್ಯುರಿಟಿ ಆಫೀಸರ್ ಪ್ರಕಾರ ಯಾವುದೇ ದೈಹಿಕ ದಾಳಿ ನಡೆದ ಪುರಾವೆಗಳಿರಲಿಲ್ಲ. ಆದ್ದರಿಂದ ಈ ಸಮಿತಿ ಇಂತಹ ಘಟನೆ ನಡೆದ ಬಗ್ಗೆ ಗಟ್ಟಿ ಪುರಾವೆಗಳೇನೂ ಇಲ್ಲ ಎಂಬ ತೀರ್ಮಾನಕ್ಕೆ ಬಂದು ಸುಶೀಲ್ ಕುಮಾರ್ ಕ್ಷಮಾಪಣೆಯೊಂದಿಗೆ ಈ ಪ್ರಸಂಗವನ್ನು ಮುಕ್ತಾಯಗೊಳಿಸಬೇಕೆಂದಿತು. (ಆತನಿಗೆ ಆಗ ನಡೆದ ಶಸ್ತ್ರಚಿಕಿತ್ಸೆ ಅಪೆಂಡಿಸೈಟಿಸ್‌ಗಾಗಿ ಎಂಬ ಸಂಗತಿ ಈಗ ಹೊರಬಿದ್ದಿದೆ.)

ಆದರೆ ಇಂತಹ ಸಹಜ ಮುಕ್ತಾಯ ಶಿಕ್ಷಣ ರಂಗವನ್ನು ಕೇಸರೀಕರಿಸಬೇಕೆಂದಿದ್ದ ಸಂಘ ಪರಿವಾರದವರಿಗೆ ಬೇಕಿರಲಿಲ್ಲ. ತನಿಖಾ ಸಮಿತಿಯ ವರದಿಯನ್ನು ಬದಿಗೊತ್ತಿ ವಿವಿಯ 'ಪ್ರೊಕ್ಟೋರಲ್ ಬೋರ್ಡ್'(ಆಡಳಿತ ಮಂಡಳಿ) ಇಂತಹ ದಾಳಿ ನಡೆದಿದೆ ಎಂಬ ತೀರ್ಮಾನಕ್ಕೆ ಬಂದಿತು! ಆದರೆ ತನಿಖೆಯಲ್ಲಿ ಆರಂಬದಲ್ಲಿ ಕಂಡು ಬಂದಿದ್ದ ಸಂಗತಿ ಮತ್ತು ವಿದ್ಯಾರ್ಥಿಗಳ ಪ್ರತಿಭಟನೆಯ ಹಿನ್ನೆಲೆಯಲ್ಲಿ ಉಪಕುಲಪತಿಗಳು ಈ ತೀರ್ಮಾನವನ್ನು ರದ್ದು ಮಾಡಿ ಹೊಸದೊಂದು ತನಿಖಾ ಸಮಿತಿಯನ್ನು ನೇಮಿಸಿದರು.

ಈ ನಡುವೆ ಪ್ರೊ. ಪೊದಿಲೆ ಅಪ್ಪಾರಾವ್ ಅವರನ್ನು ವಿವಿಯ ಉಪಕುಲಪತಿಯಾಗಿ ನೇಮಿಸಲಾಯಿತು. ಈತ ಯಾವುದೇ ಹೊಸ ತನಿಖೆ ನಡೆಸಲಿಲ್ಲ. ಅತ್ತ ದಿಲ್ಲಿಯಲ್ಲಿ ಸಿಕಂದರಾಬಾದ್‌ನ ಸಂಸತ್ ಸದಸ್ಯರೂ ಆದ ಮತ್ತು ಮೋದಿ ಸಂಪುಟದಲ್ಲಿ ಮಂತ್ರಿಯಾಗಿರುವ ಬಂಡಾರು ದತ್ತಾತ್ರೇಯ ಹೈದರಾಬಾದ್ ವಿವಿಯ ಯಲ್ಲಿ 'ರಾಷ್ಟ್ರ-ವಿರೋಧಿ ಮತ್ತು ಜಾತಿವಾದಿ' ಚಟುವಟಿಕೆಗಳಲ್ಲಿ ತೊಡಗಿರುವ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮಾನವ ಸಂಪನ್ಮೂಲ ಮಂತ್ರಿಗಳಿಗೆ ಪತ್ರ ಬರೆದರು. ಅದನ್ನು ಈ ಮಂತ್ರಿಗಳು ವಿಶ್ವವಿದ್ಯಾಲಯಕ್ಕೆ ಕಳಿಸಿದರು 'ಸೂಕ್ತ ಕ್ರಮ'ಕ್ಕಾಗಿ. ನಂತರ ನಾಲ್ಕು ಬಾರಿ ಅದನ್ನು ನೆನಪಿಸುವ ಪತ್ರಗಳನ್ನೂ ಕಳಿಸಲಾಯಿತಂತೆ.

ಆ ಸೂಕ್ತ ಕ್ರಮ ಏನು ಎಂಬುದು ಹೊಸದಾಗಿ ನೇಮಕಗೊಂಡ ಉಪಕುಲಪತಿಗಳಿಗೆ ಗೊತ್ತಿತ್ತು. ಅವರು ಕಳೆದ ಡಿಸೆಂಬರ್ 16ರಂದು ಮೇಲೆ ಹೇಳಿದ

ಪುಟ 12 ಕ್ಕೆ



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ಒಂದು ರಾಜಕೀಯ ಪಿತೂರಿಗೆ ಬಲಿ-ಸೀತಾರಾಮ್ ಯೆಚೂರಿ



ರೋಹಿತ್ ವೆಮುಲ ಆತ್ಮಹತ್ಯೆಮಾಡಿಕೊಂಡಿಲ್ಲ, ಒಂದು ರಾಜಕೀಯ ಪಿತೂರಿಗೆ ಬಲಿಯಾಗಿದ್ದಾರೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಹೇಳಿದ್ದಾರೆ.

ಹೈದರಾಬಾದ್ ವಿಶ್ವವಿದ್ಯಾಲಯದ ಪ್ರತಿಭಟನಾನಿರತ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ ಅವರು ಇದೊಂದು ಅಸಹ್ಯಕರ ಘಟನೆ, ಇದನ್ನು ಒಪ್ಪಲು ಸಾಧ್ಯವೇ ಇಲ್ಲ ಎಂದರು. ರೋಹಿತ್ ವೆಮುಲಗೆ ಕಿರುಕುಳ ಕೊಟ್ಟ ರೀತಿ, ಅತನಿಗೆ ಸಲ್ಲಬೇಕಾಗಿದ್ದ ಫೆಲೊಶಿಪ್ ಹಣವನ್ನು ಕೊಡದೆ ಅಸಹನೀಯ ಆರ್ಥಿಕ ತೊಂದರೆಗೆ ನೂಕಿದ್ದು ಈ ದುರಂತ ಸಂಭವಿಸುವಂತೆ ಮಾಡಿದೆ. ಉಪಕುಲಪತಿಗಳ ಮೇಲೆ ಒತ್ತಡ ಹಾಕಿರುವ ಕೇಂದ್ರದ ಕಾರ್ಮಿಕ ಮತ್ತು ಮಾನವ ಸಂಪನ್ಮೂಲ ಮಂತ್ರಿಗಳು ಪ್ರಥಮತಃ ಇದಕ್ಕೆ ಹೊಣೆ. ಉಪಕುಲಪತಿಗಳು ವಿಧೇಯ ಸೇವಕನಂತೆ ಮಂತ್ರಿಗಳ ಆದೇಶವನ್ನು ಪಾಲಿಸಿದ್ದಾರೆ. ಈ ಎಲ್ಲರ ವಿರುದ್ಧ ಕ್ರಿಮಿನಲ್ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಅಭಿಪ್ರಾಯ ಪಟ್ಟರು.

ಈ ಘಟನೆಯಿಂದ ಅಧಿಕಾರದಲ್ಲಿರುವವರು ಸಾಮಾಜಿಕ ದಮನವನ್ನು ಶಾಶ್ವತಗೊಳಸಲು, ಜಾತಿ ಪೂರ್ವಾಗ್ರಹಗಳನ್ನು ಗಟ್ಟಿಗೊಳಿಸಲು, ಆಮೂಲಕ ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವ ದೃಢ ನಿರ್ಧಾರ ಮಾಡಿದ್ದಾರೆ ಎಂಬ ಭಾವನೆ ಗಟ್ಟಿಗೊಳ್ಳುವಂತಾಗಿದೆ.

ಸಂಸತ್ತು ಕಳೆದ ಅಧಿವೇಶನದಲ್ಲಿ ಹಲವು ಅಡೆತಡೆಗಳ ನಡುವೆಯೂ ಹೊಸದೊಂದು ಎಸ್‌ಸಿ/ಎಸ್‌ಟಿ ಅತ್ಯಾಚಾರಗಳ ತಡೆ ಕಾನೂನನ್ನು ಪಾಸು ಮಾಡಿದೆ. ಅದರ ಪ್ರಕಾರ ಜಾತಿ ಪೂರ್ವಾಗ್ರಹಗಳಿಗೆ ಕುಮ್ಮಕ್ಕು ನೀಡುವುದು ಕೂಡ ಶಿಕ್ಷಾರ್ಹ ಅಪರಾಧವಾಗುತ್ತದೆ. ಈ ಇಬ್ಬರೂ ಮಂತ್ರಿಗಳು ತಮ್ಮ ಸ್ಥಾನಗಳಿಂದ ಹೊರಹೋಗಬೇಕು, ಉಪಕುಲಪತಿಗಳನ್ನು ತೆಗೆದು ಹಾಕಬೇಕು ಮತ್ತು ಈ ಘಟನೆಯಲ್ಲಿ ಶಾಮೀಲಾದ ಎಲ್ಲರನ್ನೂ ಗುರುತಿಸಲು ಒಂದು ತನಿಖೆ ನಡೆಸಬೇಕು ಎಂದು ಅವರು ಆಗ್ರಹಿಸಿದರು.

ಈ ಸಂಶೋಧನಾ ವಿದ್ಯಾರ್ಥಿಯ ಆತ್ಮಹತ್ಯೆ ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳು, ಕೇಂದ್ರ ಕಾರ್ಮಿಕ ರಾಜ್ಯ ಮಂತ್ರಿಗಳು ಮತ್ತು ಹೈದರಾಬಾದ್ ವಿವಿಯ ಕುಲಪತಿಗಳು ಆರೆಸ್ಸೆಸ್ ಸಿದ್ಧಾಂತದ ಪ್ರಕಾರ ನಡೆಸಿದ ರಾಜಕೀಯ ಪಿತೂರಿಯ ಫಲಿತಾಂಶ ಎಂದು ಸೀತಾರಾಂ ಯೆಚೂರಿ ಖಾರವಾಗಿ ಹೇಳಿದರು. ಭಾರತೀಯ ಇತಿಹಾಸವನ್ನು ಹಿಂದೂ ಪುರಾಣಗಳನ್ನು ಎತ್ತಿ ಹಿಡಿಯುವ ಸಾಧನವಾಗಿ ಮಾಡಬಯುಸುವ ಆರೆಸ್ಸೆಸ್‌ನ ಸಿದ್ಧಾಂತಕ್ಕೆ ಅನುರೂಪವಾಗಿ ನಮ್ಮ ದೇಶದ ಶೈಕ್ಷಣಿಕ ರಂಗವನ್ನು ಬದಲಿಸುವ ರಾಜಕೀಯ ಪಿತೂರಿಯ ಭಾಗವಿದು ಎಂಬುದು ಸ್ಪಷ್ಟ ಎಂದು ಪತ್ರಕರ್ತರೊಡನೆ ಮಾತಾಡುತ್ತ ಅವರು ಹೇಳಿದರು.

ಪುಟ 12 ಕ್ಕೆ



ಬೆಂಗಳೂರು



ದಕ್ಷಿಣ ಕನ್ನಡ

ರೋಹಿತ್ ಕೊಲೆಗಡುಕರನ್ನು ಬಂಧಿಸಿ!

ರೋಹಿತ್ ಯೆಮುಲಾ ಆತ್ಮಹತ್ಯೆಗೆ ಕಾರಣವಾಗಿರುವ ಕೇಸರಿ ಪಡೆಗಳೊಂದಿಗೆ ಶಾಮೀಲಾಗಿರುವ ಹೈದರಾಬಾದ್ ಕೇಂದ್ರೀಯ ವಿವಿಯು ಬಿ.ಜೆ.ಪಿ, ಆರ್.ಎಸ್.ಎಸ್. ಮತ್ತು ಎ.ಬಿ.ವಿ.ಪಿ ಗೂಂಡಾಗಳನ್ನು ಬಂಧಿಸಬೇಕು, ವಿ.ವಿ. ಉಪಕುಲಪತಿಯನ್ನು ವಜಾ ಮಾಡಬೇಕು ಮತ್ತು ಕೇಂದ್ರ ಸಚಿವ ಬಂಡಾರು ದತ್ತಾತ್ರೇ ಯ ರಾಜಿನಾಮೆ ನೀಡಬೇಕು ಎಂದು ಆಗ್ರಹಿಸಿ ರಾಜ್ಯದ ವಿವಿಧೆಡೆಗಳಲ್ಲಿ ಜನವರಿ 19ರಂದು ವ್ಯಾಪಕ ಪ್ರತಿಭಟನೆಗಳು ನಡೆದಿವೆ.

ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ), ಜನವಾದಿ ಮಹಿಳಾ ಸಂಘಟನೆ(ಜೆಎಂಎಸ್), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ), ಸಮುದಾಯ, ಭಾರತ ಜ್ಞಾನ ವಿಜ್ಞಾನ ಸಮಿತಿ, ದಲಿತ ಹಕ್ಕುಗಳ ಸಮಿತಿ, ಸೇರಿದಂತೆ ಸಾಹಿತಿಗಳು, ಪ್ರತಿಗತಿಪರ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಲಾಗಿದೆ.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ಡಿವೈಎಫ್‌ಐನ ಲಿಂಗರಾಜು, ಸಮುದಾಯದ ಟಿ.ಸುರೇಂದ್ರರಾವ್, ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ಎನ್.ನಾಗರಾಜ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್, ಚಲನಚಿತ್ರ ನಿರ್ದೇಶಕರಾದ ಬಿ.ಸುರೇಶ್, ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.



ಶಿವಮೊಗ್ಗ

ಬೆಂಗಳೂರು ವಿ.ವಿ. ವಿದ್ಯಾರ್ಥಿಗಳ, ಎ.ಐ.ಡಿ.ಎಸ್.ಒ., ಬಹುಜನ ವಿದ್ಯಾರ್ಥಿ ಸಂಘಟನೆಗಳೂ ಪ್ರತ್ಯೇಕ ಪ್ರತಿಭಟನೆ ಸಂಘಟಿಸಿದ್ದವು.

ಹಾಸನದಲ್ಲಿ ಎಸ್‌ಎಫ್‌ಐ ಡಿವೈಎಫ್‌ಐ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಧರ್ಮೇಶ್, ಡಿವೈಎಫ್‌ಐ ಮುಖಂಡರಾದ ಪೃಥ್ವಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಉತ್ತರ ಕನ್ನಡದಲ್ಲಿ ಸಿಐಟಿಯು, ಎಸ್‌ಎಫ್‌ಐ, ಕೆಪಿಆರ್‌ಎಸ್, ದಲಿತ ಹಕ್ಕುಗಳ ಸಮಿತಿ ಸಂಘಟನೆಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯುನ ಯಮುನಾ ಗಾಂವ್ಕರ್, ದಲಿತ ಹಕ್ಕುಗಳ ಸಮಿತಿಯ ಶ್ಯಾಮಸುಂದರ ಗೋಕರ್ಣ, ಎಸ್‌ಎಫ್‌ಐನ ಎಲಿಶ ಎಲಕಪಾಟಿ, ದೀಪಕ ಕುಡಾಳಕರ್ ಸಿಐಟಿಯುನ ರಮೇಶಬಾಬು ಮೋಹಿನಿ ನಮ್ಸೇಕರ್ ಮಾಯಾ ಕಾಣೇಕರ್ ಎಸ್.ಎಫ್.ಐನ ಶರತ್ ವೆರ್ಣೇಕರ್, ಅಮೋಘ ಶೇಟ್, ಫಕೀರಪ್ಪ ಭಂಡಾರಿ, ಯಲ್ಲಪ್ಪಾ ನಾರಾಯಣ ವಡ್ಡರ್, ಜಯಶ್ರೀ ಗೌಡ ಶ್ಯಾಮ ನಾಯ್ಕ, ರಾಜೇಶ ಮರಾಠೆ ಮುಂತಾದವರು ಹಾಜರಿದ್ದರು. ಪ್ರತಿಭಟನೆಯ ನಂತರ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಖಂಡರಾದ ಜಿ.ನಾಗರಾಜ, ಜಿ.ಬಸವರಾಜ, ಹುಸೇನಪ್ಪ , ಮಂಜುನಾಥ ಡಗ್ಗಿ, ಮರಿನಾಗ, ಎಂ, ಬಸವರಾಜ, ಯು ನಾಗರಾಜ ಮುಂತಾದವರು ಭಾಗವಹಿಸಿದ್ದರು.

ಕೋಲಾರದ ಜಿಲ್ಲಾಧಿಕಾರಿ ಕಛೇರಿ ಎದುರು ನಡೆದ ಪ್ರತಿಭಟನೆಯಲ್ಲಿ ದಲಿತ ಹಕ್ಕುಗಳ ಸಮಿತಿಯ ಮುಖಂಡರಾದ ಬಿ.ವಿ.ಸಂಪಂಗಿ, ಎಂ.ವಿಜಯಕೃಷ್ಣ, ಹೆಚ್.ಎಂ.ಯಲ್ಲಪ್ಪ, ಮುನಿರಾಜಮ್ಮ, ವೆಂಕಟಾಚಲಪತಿ, ಆನಂದ್, ಕೆ.ಎಂ.ಸುಶೀಲ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ, ಜೆಎಂಎಸ್ ರಾಜ್ಯಾಧ್ಯಕ್ಷ ರಾದ ವಿ.ಗೀತಾ, ಕೆಪಿಆರ್‌ಎಸ್ ಮುಖಂಡರಾದ ಪಿ.ಆರ್.ನವೀನ್‌ಕುಮಾರ್, ಎನ್.ಎನ್.ಶ್ರೀರಾಮ್, ನಾರಾಯಣರೆಡ್ಡಿ ಮತ್ತಿತರರು ಭಾಗವಹಿಸಿದ್ದರು.


ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ನೂರಾರು ವಿದ್ಯಾರ್ಥಿಗಳು ಸೇರಿದಂತೆ ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್‌ನ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಭೂತ ದಹನ ನಡೆಸಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ತಿಮ್ಮೇಗೌಡ, ಜೆಎಂಎಸ್‌ನ ದೇವಿ, ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವರಿ 20ರಂದು ಮಂಗಳೂರಿನ ಜಿಲ್ಲಾಧಿಕಾರಿ ಕಛೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ, ದಲಿತ ಹಕ್ಕುಗಳ ಸಮಿತಿ, ಡಿಎಸ್‌ಎಸ್ ಸಂಘಟನೆ ಸೇರಿದಂತೆ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ

ಪುಟ 13 ಕ್ಕೆ


ಹಾಸನ


ಗುಲ್ಬರ್ಗಾ



ಕ್ಯಾಸ್ಟ್ರೋ ಕಥೆ

ಬಾಲ್ಯದ ದಿನಗಳು

ಫಿಡೆಲ್‌ಕ್ಯಾಸ್ಟ್ರೋ ಇಂದು ಬದುಕಿರುವ ಅತ್ಯಂತ ಎತ್ತರದ ಕಮ್ಯುನಿಸ್ಟ್ ಕ್ರಾಂತಿಕಾರಿ. ಮಾತ್ರವಲ್ಲ ಜೀವಂತ ದಂತಕತೆಯಾದವರು. ಅವರ ಜೀವನದ ಕತೆ ರೋಮಾಂಚಕಾರಿ. ಹಲವು ದಶಕಗಳ ಕಾಲ ಲ್ಯಾಟಿನ್ ಅಮೆರಿಕದ ಹಾಗೂ ಜಗತ್ತಿನ ದಿಕ್ಕು ಬದಲಾಯಿಸಿದ ಈ ಧೀಮಂತ ನಾಯಕನ ಜೀವನ ಕತೆಯನ್ನು ಅವರ ಬಾಯಿಂದಲೇ ಇಗ್ನೇಶಿಯೊ ರಾಮೊನೆ ಸಂಗ್ರಹಿಸಿ ಬರೆದಿದ್ದಾರೆ. ಅದನ್ನು ಕೆ.ಪ್ರಕಾಶ್ ಕನ್ನಡಕ್ಕೆ ಸಂಗ್ರಹಾನುವಾದ ಮಾಡಿದ್ದಾರೆ


ಕ್ಯಾಸ್ಟ್ರೋ ಜೀವನ ಕತೆ ಧಾರಾವಾಹಿಯಾಗಿ ಜನಶಕ್ತಿಯಲ್ಲಿ ಪ್ರಕಟವಾಗಲಿದೆ. ಕ್ಯಾಸ್ಟ್ರೋ ತಂದೆ ಮತ್ತು ಬಾಲ್ಯದ ದಿನಗಳ ಬಗ್ಗೆ ಹೇಳುವ ಮೊದಲ ಕಂತು ಇಲ್ಲಿದೆ.

ಮನುಷ್ಯ ಹುಟ್ಟಿನಿಂದಲೇ ಕ್ರಾಂತಿಕಾರಿಯಲ್ಲ. ಸಂದರ್ಭ, ಸಂಘರ್ಷ, ಸನ್ನಿವೇಶಗಳ ಕೂಸು. ಹೀಗಾಗಿ ಮನುಷ್ಯ ಪೂರ್ಣವಾಗಿ ತನ್ನ ಭವಿಷ್ಯದ ನಿರ್ಮಾತೃ ತಾನೇ ಆಗಿರುವುದಿಲ್ಲ. ಲೋಹದ ತುಂಡೊಂದನ್ನು ಶಿಲ್ಪಿಯೊಬ್ಬ ಕಡೆದು ಕೆತ್ತುವ ಹಾಗೆ ಪರಿಸ್ಥಿತಿಗಳು ಮನುಷ್ಯನನ್ನು ರೂಪಿಸುತ್ತವೆ.

ಕ್ಯಾಸ್ಟ್ರೋ ಶ್ರೀಮಂತ ಜಮೀನ್ದಾರಿ ಕುಟುಂಬದಲ್ಲಿ ಜನಿಸಿದರು. ಶ್ರೀಮಂತರಿಗಾಗಿ ಮೀಸಲಾಗಿದ್ದ ಧಾರ್ಮಿಕ ಶಾಲೆಗಳಲ್ಲಿ ಓದಿ ನಂತರ ಕಾನೂನು ಅಭ್ಯಾಸ ಮಾಡಿದರು. ಈ ರೀತಿಯ ಆರೈಕೆಯಲ್ಲಿ ಬೆಳೆದ ಕ್ಯಾಸ್ಟ್ರೋಗೆ ಪ್ರತಿಗಾಮಿ ನಾಯಕನಾಗುವ ಅವಕಾಶಗಳು ಹೆಚ್ಚಾಗಿದ್ದವು. ಆದರೆ ಹಾಗಾಗಲಿಲ್ಲ. ದೂರದ ಗ್ರಾಮೀಣ ಪ್ರದೇಶದ ಬೃಹತ್ ಎಸ್ಟೇಟಿನಲ್ಲಿ ಜನಿಸಿದಾಗಿನಿಂದ ಹಿಡಿದು, ಕ್ಯಾಸ್ಟ್ರೋ ಕ್ರಾಂತಿಕಾರಿಯಾಗಿ ರೂಪುಗೊಳ್ಳುವುದರಲ್ಲಿ ಹಲವಾರು ಅಂಶಗಳು ಕಾರಣವಾಗಿವೆ.

ಕ್ಯೂಬಾದ ಪೂರ್ವ ದಿಕ್ಕಿನ ಗ್ರಾಮೀಣ ಪ್ರದೇಶದ ಒಂದು ಪ್ರಾಂತ್ಯದ ಹೆಸರು ಓರಿಯಂಟೆ. ಇದು ನೈಪ್ ಕೊಲ್ಲಿಗೆ ಸಮೀಪದಲ್ಲಿದೆ. ಇದರ ಉತ್ತರ–ಮಧ್ಯ ದಿಕ್ಕಿನಲ್ಲಿರುವ ವಿಶಾಲವಾದ ಕಬ್ಬಿನ 'ಸೆಂಟ್ರಲ್'1 ಪ್ಲಾಂಟೇಷನ್‌ನಲ್ಲಿ ಕ್ಯಾಸ್ಟ್ರೋ ಜನಿಸಿದರು. ಅತ್ತ ಪಟ್ಟಣವೂ ಅಲ್ಲದ ಇತ್ತ ಹಳ್ಳಿಯೂ ಅಲ್ಲದ ಈ ಫಾರ್ಮ್‌ನ ಹೆಸರು ಬೈರನ್. ಕ್ಯಾಸ್ಟ್ರೋ ಕುಟುಂಬದ ಮನೆ ಈ ಪ್ರದೇಶದಲ್ಲಿಯೇ ಇತ್ತು. ಆಗಿನ ರಸ್ತೆಗಳು ಮಣ್ಣಿನ ದೊಡ್ಡ ದಾರಿಗಳು. ಕುದುರೆ ಮೇಲೆ ಅಥವಾ ಎತ್ತಿನ ಗಾಡಿಗಳಲ್ಲಿ ಜನರ ಓಡಾಟವಿತ್ತು. ಯಾಂತ್ರೀಕೃತ ವಾಹನಗಳಾಗಲೀ, ವಿದ್ಯುತ್ ದೀಪವಾಗಲೀ ಇರಲಿಲ್ಲ. ಮೇಣದ ಬತ್ತಿ ಮತ್ತು ಚಿಮಣಿಎಣ್ಣೆ ದೀಪಗಳನ್ನು ಮನೆಗಳಲ್ಲಿ ಬಳಸುತ್ತಿದ್ದ ಕಾಲವದು.

ಸ್ಪಾನಿಷ್ ಮೂಲದ ತಂದೆ ಏಂಜೆಲ್



ಕ್ಯಾಸ್ಟ್ರೋ ಮನೆ ಸ್ಪಾನಿಷ್ ಅಥವಾ ಗ್ಯಾಲಿಷಿಯನ್ ವಾಸ್ತು ಶೈಲಿಯಲ್ಲಿತ್ತು. ಇವರ ತಂದೆ ಮೂಲತಃ ಸ್ಪೈನ್ ದೇಶದ ಗ್ಯಾಲಿಷಿಯನ್. ಲುಗೋ ಪ್ರಾಂತ್ಯದ ಲಂಕಾರ ಎಂಬ ಹಳ್ಳಿಯ ಒಬ್ಬ ಬಡ ಕಂಪೆಸಿನೋ (ಕೃಷಿಕೂಲಿಕಾರ) ನ ಮಗ. ಈ ಭಾಗದ ಸಂಪ್ರದಾಯವೆಂದರೆ ಮನೆಗಳ ತಳಭಾಗದಲ್ಲಿ ಪ್ರಾಣಿಗಳಿಗೆ ವಸತಿ ವ್ಯವಸ್ಥೆ ಇರುತ್ತಿತ್ತು. ಸುಮಾರು ಆರು ಅಡಿಗಿಂತ ಎತ್ತರದ ಮರದ ಊರು ಗಂಭಗಳ ಆಧಾರದಲ್ಲಿ, ಗ್ಯಾಲಿಷಿಯನ್ ವಾಸ್ತುಶಿಲ್ಪದ ಪ್ರಭಾವದಲ್ಲಿ ಇವರ ಮನೆ ನಿರ್ಮಾಣವಾಗಿತ್ತು. ಹಸುಗಳನ್ನು ಮನೆಯ ತಳಭಾಗದಲ್ಲಿ ಕಟ್ಟುತ್ತಿದ್ದರು. ಹಾಲನ್ನು ಕರೆಯುತ್ತಿದ್ದರು. ಇದರ ಜೊತೆಗೆ ಹಂದಿ ಮತ್ತು ಕೋಳಿಗಳ ಕೊಟ್ಟಿಗೆಯೂ ಇತ್ತು. ಹಲವಾರು ಸಂದರ್ಭಗಳಲ್ಲಿ ಕಾಡುಕೋಳಿ, ಬಾತುಕೋಳಿ, ಗಿನಿಯಾ ಕೋಳಿ, ಟರ್ಕಿ ಮುಂತಾದವುಗಳನ್ನೂ ಸಾಕುತ್ತಿದ್ದರು.

ಮರದ ಮನೆಯಾದ್ದರಿಂದ ಬಹಳ ಗಟ್ಟಿಯಾದ ಕಗ್ವೇರನ್ ಜಾತಿಯ ಊರು ಗಂಭಗಳ ಮೇಲೆ ನೆಲಹಾಸನ್ನು ನಿರ್ಮಿಸಲಾಗಿತ್ತು. ಮೂಲತಃ ಚೌಕಾಕಾರದ ಮನೆಯ ಮೂಲೆಗೊಂದು ಕಛೇರಿ, ಸ್ನಾನದಕೋಣೆ, ಅಡುಗೆಕೋಣೆ, ಊಟದ ಸ್ಥಳ ಇತ್ಯಾದಿಗಳಿದ್ದವು. ಚೌಕಾಕೃತಿಯ ಮೇಲೆ ಸ್ವಲ್ಪ ಸಣ್ಣದಾದ ಎರಡನೇ ಅಂತಸ್ತು, ಇದನ್ನು 'ಮಿರಾಡರ್' ಎಂದು ಕರೆಯುತ್ತಿದ್ದರು. ಮನೆಯ ಸುತ್ತ ಮರಗಳು, ಕಬ್ಬಿನ ಗದ್ದೆಗಳು, ಪ್ರಾಣಿ ಪಕ್ಷಿಗಳು, ಕೀಟಗಳು... ಇಂತಹ ವಾತಾವರಣದಲ್ಲಿ ಮುಂಜಾನೆ ಎರಡು ಗಂಟೆಗೆ 1929 ಆಗಸ್ಟ್ 13 ರಂದು ಕ್ಯಾಸ್ಟ್ರೋ ಜನಿಸಿದರು.

ಫಿಡೆಲ್ ಕ್ಯಾಸ್ಟ್ರೋ ತಂದೆ ಏಂಜೆಲ್ ಕ್ಯಾಸ್ಟ್ರೋ. ಮಹಾನ್ ಇಚ್ಛಾಶಕ್ತಿ ಮತ್ತು ದೃಢ ಸಂಕಲ್ಪದ ವ್ಯಕ್ತಿ. ಓದು ಮತ್ತು ಬರೆಯುವುದನ್ನು ಸ್ವತಃ ಕಲಿತ ಇವರದು ತೀರ್ಮಾನ ಮಾಡಿದರೆ ಸಾಧಿಸಿಯೇ ತೀರಬೇಕೆನ್ನುವ ಮನೋಭಾವ. ಅತ್ಯಂತ ಬಡ ಹಿನ್ನೆಲೆಯಿಂದ ಬಂದವರು. ಜಮೀನು ಇರಲಿಲ್ಲ. ಫಿಡೆಲ್ ಹೇಳುವ ಹಾಗೆ, ಏಂಜೆಲ್ ವಾಸವಿದ್ದ ಮೂವತ್ತು ಅಡಿ ಉದ್ದ ಮತ್ತು ಹದಿನೆಂಟು ಅಥವಾ ಇಪ್ಪತ್ತು ಅಡಿ ಅಗಲದ ಮಣ್ಣಿನಿಂದ ನಿರ್ಮಿಸಿದ್ದ ತೀರಾ ಒರಟೊರಟಾದ ಮನೆಯಲ್ಲಿ – ಪ್ರಾಣಿಗಳ ರೀತಿಯಲ್ಲಿ ಇಡೀ ಕುಟುಂಬ ಜೀವನ ಸಾಗಿಸುತ್ತಿತ್ತು.

ಬಡ ಸ್ಪಾನಿಷ್ ಸೈನಿಕ

ಏಂಜೆಲ್ ಕ್ಯಾಸ್ಟ್ರೋ ಹದಿನೇಳು ಅಥವಾ ಹದಿನೆಂಟು ವಯಸ್ಸಿರುವಾಗ ಸ್ಪೈನ್ ಸೈನ್ಯಕ್ಕೆ ಸೇರಿದರು. ಇದೂ ಕೂಡಾ ಹೇಗೆಂದರೆ, ಗೆಲೀಷಿಯಾದ ಶ್ರೀಮಂತರಿಗೆ ಬದಲಿಯಾಗಿ ಅವರು ನೀಡುವ ಹಣ ಪಡೆದು ಸೇರ್ಪಡೆಯಾದದ್ದು. ಆ ಸಂದರ್ಭಕ್ಕೆ ಪಾಶ್ಚಿಮಾತ್ಯ ದೇಶಗಳಲ್ಲಿ ಈ ರೀತಿ ಶ್ರೀಮಂತರು ಮಿಲಿಟರಿ ಅಥವಾ ಯುದ್ಧದಲ್ಲಿ ತಮ್ಮ ಸೇವೆಯನ್ನು ಸಲ್ಲಿಸುವುದಕ್ಕೆ ಬದಲಿಯಾಗಿ ನಿಕೃಷ್ಟ ಜೀವನ ನಡೆಸುತ್ತಿದ್ದ ಬಡ ಯುವಕರಿಗೆ ಹಣ ನೀಡಿ ಅವರನ್ನು ತಮ್ಮ ಸ್ಥಾನಗಳಿಗೆ ನಿಯೋಜಿಸುತ್ತಿದ್ದರು. ತಮಗೆ ಇಪ್ಪತ್ತು ವರ್ಷ ದಾಟಿದ ಸುಮಾರಿಗೆ, 1895ರಲ್ಲಿ ಪ್ರಾರಂಭವಾದ ಎರಡನೇ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭಕ್ಕೆ ಏಂಜೆಲ್ ಸ್ಪ್ಯಾನಿಷ್ ಸೈನಿಕರಾಗಿ ಕ್ಯೂಬಾಕ್ಕೆ ಬಂದರು. ಕ್ಯೂಬಾದ ಮಧ್ಯಪೂರ್ವ ಭಾಗದ ಉತ್ತರಕ್ಕಿರುವ ಮೊರೆನ್ ಮತ್ತು ದಕ್ಷಿಣಕ್ಕೆ ಜುಕರೋ ನಡುವಿನ ವಿಶಾಲವಾದ ಬಯಲು ಪ್ರದೇಶದಲ್ಲಿ ಇವರ ಸೈನಿಕ ಕಾವಲು ಕೋಟೆಯಿತ್ತು. ಉತ್ತರ ದಕ್ಷಿಣಕ್ಕೆ ಸುಮಾರು 100 ಕಿ.ಮೀ. ಉದ್ದವಿದ್ದ ಈ ಸೈನಿಕ ಕೋಟೆ ಸಾಲಿನ ಒಂದು ಭಾಗದಲ್ಲಿ ಏಂಜೆಲ್ ನೆಲೆಸಿದ್ದರು. ಈ ಎಲ್ಲಾ ವಿವರಗಳ ಬಗ್ಗೆ ಫಿಡೆಲ್ ತಂದೆಯೊಂದಿಗೆ ಚರ್ಚಿಸಿ ತಿಳಿದುಕೊಂಡಿದ್ದು ಬಹಳ ಕಡಿಮೆ. ಫಿಡೆಲ್‌ಗೆ ಮನೆಯಿಂದ ಹೊರಗೆ ಇರುವುದೇ ಹೆಚ್ಚು ಇಷ್ಟವಾಗುತ್ತಿತ್ತು. ಮನೆಯೆಂಬುದು ಅಧಿಕಾರದ ಸಂಕೇತವಾಗಿತ್ತು. ಹಲವಾರು ಬಾರಿ ಇದರಿಂದಾಗಿ ಸಿಟ್ಟು ಹೆಚ್ಚಾಗುತ್ತಿತ್ತು ಮತ್ತು ಬಂಡಾಯದ ಪ್ರವೃತ್ತಿ ಮೊಳಕೆಯೊಡೆಯಲು ಪ್ರಾರಂಭಿಸಿತು.

ಬಹುತೇಕ ಗೆಲೀಷಿಯನ್ ವಲಸಿಗರ ರೀತಿಯಲ್ಲೇ ಏಂಜೆಲ್ ಕಷ್ಟಜೀವಿ ಮತ್ತು ವಿನಮ್ರ ಸ್ವಭಾವದ ಮನುಷ್ಯ. ಆದರ ಮತ್ತು ಉದಾರತೆಯ ಎಲ್ಲ ಲಕ್ಷಣಗಳೂ ಇದ್ದವು. ಇವೆಲ್ಲವುಗಳ ಜೊತೆಯಲ್ಲೇ ಅತೀವ ದೃಢತೆ. ಹಾಗಿಲ್ಲದಿದ್ದಿದ್ದರೆ ಲ್ಯಾಟಿಫಂಡಿಯೋ (ಅಪಾರ ಪ್ರಮಾಣದ ಜಮೀನ್ದಾರಿಕೆ) ಆಗಲೀ ಅಥವಾ ಬೃಹತ್ ಸಂಪತ್ತನ್ನಾಗಲೀ ಇವರು ಹೊಂದಲಾಗುತ್ತಿರಲಿಲ್ಲ ಎಂಬುದು ಫಿಡೆಲ್ ಅಭಿಪ್ರಾಯ. ಸುಗ್ಗಿ ಮುಗಿದು ಮುಂದಿನ ಉಳುಮೆ ನಡೆದು ಕಟಾವು ಬರುವ ನಡುವಿನ ಸಂದರ್ಭ ವಿಪರೀತ ಕಷ್ಟಕರ ಅವಧಿಯಾಗಿತ್ತು. ಕಬ್ಬು ಕಾರ್ಮಿಕರಿಗೆ ಮತ್ತು ಇತರೆ ಶ್ರಮಿಕರಿಗೆ ಇತರೆ ಯಾವುದೇ ಆದಾಯವಿರುತ್ತಿರಲಿಲ್ಲ. ಹಸಿವಿನಿಂದ ಕಂಗಾಲಾಗುತ್ತಿದ್ದರು ಮತ್ತು ಆಗ ಯಾವುದಾದರೂ ಕೆಲಸಕ್ಕೆ ಸಿದ್ಧರಾಗುತ್ತಿದ್ದರು. ಆ ಕಾಲಕ್ಕೆ 'ಅಜಸ್ಟೆ' (ajuste - adjustment) ಎನ್ನುವ ಪದ್ಧತಿಯಿತ್ತು. ಇದೊಂದು ರೀತಿಯ ಒಪ್ಪಂದ. ನಿರ್ದಿಷ್ಟ ಪ್ರದೇಶದ ವ್ಯಾಪ್ತಿಯಲ್ಲಿ ಕಬ್ಬಿನಗದ್ದೆ ಕಟಾವು ಮಾಡಲು ಒಂದು ಕುಟುಂಬ ಅಥವಾ ಒಬ್ಬ ಕಾರ್ಮಿಕನೊಂದಿಗೆ ಒಪ್ಪಂದ ಮಾಡಿಕೊಂಡು ಭೂ ಒಡೆಯರು ತಮ್ಮ ವೆಚ್ಚಗಳನ್ನು ಕಡಿಮೆ ಮಾಡಿಕೊಳ್ಳುವ ವಿಧಾನವಾಗಿ ಈ 'ಅಜಸ್ಟೆ' ಇತ್ತು. ಒಂದು 'ಕೆಬಲ್ಲೇರಿಯ' ಅಥವಾ ರೋಜಾ ಪ್ರದೇಶದಷ್ಟು ಕಟಾವು ಮಾಡಿದರೆ ಇಂತಿಷ್ಟು ಎಂದು ಒಪ್ಪಂದವಾಗುತ್ತಿತ್ತು. ಏಂಜೆಲ್ ಕ್ಯಾಸ್ಟ್ರೋಗೆ ವೈಯುಕ್ತಿಕವಾಗಿ ಲಾಭವಲ್ಲದಿದ್ದರೂ ನಿರುದ್ಯೋಗಿಗಳಿಗೆ ಕೆಲಸ ಒದಗಿಸುವ ದೃಷ್ಟಿಯಿಂದ ಕೆಲವು ಭೂಮಿಗಳನ್ನು ಕಟಾವು ಮಾಡಲು ಹುಡುಕುತ್ತಿದ್ದರು.

ಕ್ಯೂಬಾದಲ್ಲಿ ನೆಲೆ

1898 ರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಪರಿಸ್ಥಿತಿ ಕೊನೆಗೊಂಡಾಗ ಏಂಜೆಲ್‌ರವರು ಸ್ಪೈನ್‌ಗೆ ವಾಪಸಾದರು. ಆದರೆ ಇವರಿಗೆ ಕ್ಯೂಬಾ ತುಂಬಾ ಇಷ್ಟವಾಗಿತ್ತು. ಇತರ ಗೆಲೀಷಿಯನ್ ವಲಸಿಗರೊಂದಿಗೆ ಮುಂದಿನ ವರ್ಷ ಕ್ಯೂಬಾಕ್ಕೆ ವಾಪಸ್ ಬಂದರು. ಕೈಯಲ್ಲಿ ಕಾಸಿಲ್ಲದೆ, ಕುಟುಂಬವಿಲ್ಲದ ಏಕಾಂಗಿಯಾಗಿ ಹವಾನ ಬಂದರಿಗೆ ಬಂದಿಳಿದ ಏಂಜೆಲ್ ನಂತರ ಕೆಲಸ ಮಾಡುತ್ತಾ ಕ್ಯೂಬಾ ಪೂರ್ವ ಪ್ರಾಂತ್ಯಕ್ಕೆ ಬಂದು ನೆಲೆಸಿದರು. ಬೃಹತ್ ಮತ್ತು ಗಟ್ಟಿಯಾದ ಮರಗಳಿದ್ದ ಕಾಡುಗಳನ್ನು ಕಡಿಯುತ್ತಾ, ಆ ಮರಗಳನ್ನು ಸಕ್ಕರೆ ಸೆಂಟ್ರಲ್‌ಗಳಿಗೆ ಉರುವಲಾಗಿ ಬಳಸುತ್ತಾ, ಬೃಹತ್ ಅಮೇರಿಕನ್ ಪ್ಲಾಂಟೇಷನ್‌ಗಳು ವಿಸ್ತಾರವಾಗುತ್ತಿದ್ದ ಕಾಲವದು.

ಅಮೇರಿಕನ್ನರು ಮರಗಳನ್ನು ಕಡಿಯಲು ಮತ್ತು ಕಬ್ಬನ್ನು ಉಳಲು ಜನರನ್ನು ಬಾಡಿಗೆಗೆ ಪಡೆಯುತ್ತಿದ್ದರು. ಫಿಡೆಲ್‌ರ ತಂದೆ ಓರಿಯಂಟೆ ಪ್ರಾಂತ್ಯದ ಉತ್ತರ–ಮಧ್ಯ ಭಾಗದಲ್ಲಿ ಪ್ಲಾಂಟೇಷನ್‌ಗಳನ್ನು ಹೊಂದಿದ್ದ ಕುಖ್ಯಾತ ಯುನೈಟೆಡ್ ಫ್ರೂಟ್ ಕಂಪನಿಯಲ್ಲಿ ಸಾಮಾನ್ಯ ಕೆಲಸಗಾರನಾಗಿ ದುಡಿಮೆ ಪ್ರಾರಂಭಿಸಿದರು. ನಂತರ ಹಲವು ಕಾರ್ಮಿಕರನ್ನು ತಮ್ಮಅಡಿಯಲ್ಲಿ ಸಂಘಟಿಸಿಕೊಂಡು ಇದೇ ಕಂಪನಿಗೆ ತಮ್ಮನ್ನು ವೇತನಕ್ಕೆ ತೊಡಗಿಸಿಕೊಂಡರು. (ಈಗ ಭಾರತದಲ್ಲಿ ವ್ಯಾಪಕ ಸ್ವರೂಪ ಪಡೆದಿರುವ ಲೇಬರ್ ಕಾಂಟ್ರಾಕ್ಟ್ ಪದ್ಧತಿಯ ಸಮರೂಪವಿದು). ಒಂದು ಹಂತದಲ್ಲಿ ಏಂಜೆಲ್ ಬಳಿ 300 ಕಾರ್ಮಿಕರಿದ್ದರು. ಕ್ರಮೇಣ ಇವರೇ ಕಬ್ಬನ್ನು ನೆಡಲು ಕಾಡಿನ ಮರಗಳನ್ನು ಕಡಿಯುವುದು ಮತ್ತು ಸೆಂಟ್ರಲ್‌ಗಳಿಗೆ ಉರುವಲು ಒದಗಿಸುವ ಸಣ್ಣ ವ್ಯಾಪಾರವನ್ನು ಪ್ರಾರಂಭಿಸಿದರು. ಈ ಕಾರ್ಮಿಕರು ಬಹುತೇಕ ಸ್ಪೈನ್‌ನಿಂದ ಬಂದ ವಲಸಿಗರು ಮತ್ತು ಪಕ್ಕದ ಹೈತಿ ಮತ್ತು ಜಮೈಕಾ ದ್ವೀಪಗಳಿಂದ ಬಂದವರಾಗಿದ್ದರು. ಇದರಿಂದ ಹೆಚ್ಚುವರಿ ಲಾಭ ಪಡೆಯತೊಡಗಿದರು.

ಕಾಂಟ್ರಾಕ್ಟರ್ ನಿಂದ ಶ್ರೀಮಂತ ಜಮೀನುದಾರ

ಏಂಜೆಲ್ ಈ ಕೆಲಸಗಳಿಂದ ಬರುತ್ತಿದ್ದ ಲಾಭವನ್ನು ಬಳಸಿ ಭೂಮಿಯನ್ನು ಖರೀದಿಸಲು ಪ್ರಾರಂಭಿಸಿದರು. ಸರಿಸುಮಾರು 900 ಹೆಕ್ಟೇರ್ ಅಥವಾ 2000 ಎಕರೆಗೂ ಹೆಚ್ಚು ಭೂಮಿಯನ್ನು ಖರೀದಿಸಿದರು. ಜೊತೆಗೆ ಸ್ವಾತಂತ್ರ್ಯ ಯುದ್ಧದಲ್ಲಿ ಭಾಗವಹಿಸಿದ್ದ ಇಬ್ಬರು ಕ್ಯೂಬನ್ ಜನರಲ್‌ಗಳು ಹೊಂದಿದ್ದ ಸಾವಿರಾರು ಹೆಕ್ಟೇರ್ ಭೂಮಿಯನ್ನು ಭೋಗ್ಯಕ್ಕೆ ಪಡೆದರು. ಪರ್ವತಗಳು, ಕಣಿವೆಗಳು, ಸುಮಾರು 1800 ಅಡಿ ಎತ್ತರದ ಪ್ರಸ್ಥಭೂಮಿ ಎಲ್ಲವನ್ನೂ ಬಾಚಿತಬ್ಬಿಕೊಂಡ ನೈಸರ್ಗಿಕ ಪೈನ್ ಮರಗಳ ಸುಂದರ ಸಹಜಾರಣ್ಯ ಭೂಮಿಯದು. ಏಂಜೆಲ್‌ರವರು ಪೈನ್‌ಕಾಡನ್ನು ಕಡಿದು ಪ್ರತಿದಿನ ಹದಿನೇಳು ಟ್ರಕ್‌ಗಳಷ್ಟು ಮರಗಳನ್ನು ಸಾಗಿಸುತ್ತಿದ್ದರು. ಇದರಿಂದಲೂ ಅಪಾರ ಲಾಭವಾಯಿತು. ಕೊನೆಗೆ ಸುಮಾರು 10,000 ಹೆಕ್ಟೇರ್ ಅಥವಾ 25,000 ಎಕರೆ ಜಮೀನು ಇವರ ಆಸ್ತಿಯಾಗಿತ್ತು. ಬಡತನದಿಂದ ನರಳುತ್ತಿದ್ದ ಸಮಾಜದಲ್ಲಿ ಶ್ರೀಮಂತರ ಮಕ್ಕಳ ರೀತಿಯಲ್ಲಿ ತಮ್ಮನ್ನು ಕಾಣಲಾಗುತ್ತಿತ್ತು ಎಂದು ಫಿಡೆಲ್‌ರವರು ಹೆಮ್ಮೆಯಿಂದ ಅಲ್ಲದಿದ್ದರೂ, ಹೇಳಿಕೊಂಡಿದ್ದಾರೆ.

ಆ ಕಾಲಕ್ಕೆ ಈ ಪ್ರಮಾಣದ ಆಸ್ತಿ ಬಹಳ ದೊಡ್ಡದು. ಬೈರನ್‌ನಲ್ಲಿ ಮನೆ ಮಾತ್ರವಲ್ಲದೆ ಹಲವಾರು ಇತರೆ ಕಟ್ಟಡಗಳನ್ನು ನಿರ್ಮಿಸಿದರು. ಇದನ್ನು 'ಬ್ಯಾಟ'(batey) ಎನ್ನುತ್ತಿದ್ದರು. ಕೇಂದ್ರ ಸ್ಥಳದಲ್ಲಿ ಮನೆಯಿದ್ದು, ಹಲವು ಗಜಗಳ ಸುತ್ತಳತೆಯಲ್ಲಿ ಹಾಲಿನ ಡೈರಿ, ಕಮ್ಮಾರಿಕೆ, ಕಸಾಯಿಖಾನೆ, ಬೇಕರಿ, ಪ್ರಾಥಮಿಕ ಶಾಲೆ, ಅಂಗಡಿ ಇತ್ಯಾದಿಗಳೆಲ್ಲವೂ ಬಂದವು. ಇವಕ್ಕೆ ಒಂದಷ್ಟು ದೂರದಲ್ಲಿ ತೀರಾ ದುಃಸ್ಥಿತಿಯ ಬ್ಯಾರಕ್‌ಗಳ ರೀತಿಯಲ್ಲಿದ್ದ ಪಾಮ್ ಎಲೆಗಳ ಛಾವಣಿಯ ಗುಡಿಸಲುಗಳಿದ್ದವು. ಇವುಗಳಲ್ಲಿ ಕಬ್ಬು ಬೆಳೆ ಮತ್ತು ಕಟಾವಿನ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ಬಡ 'ಹೈಟಿ'ಯನ್ನರು ವಾಸಿಸುತ್ತಿದ್ದರು. ಮನೆಯ ಹತ್ತಿರದಲ್ಲಿ ಕಿತ್ತಳೆ ಮತ್ತು ಇತರೆ ಹಣ್ಣುಗಳನ್ನು ಸಾಕಷ್ಟು ಪ್ರದೇಶದಲ್ಲಿ ಬೆಳೆಯುತ್ತಿದ್ದರು. ಫಿಡೆಲ್ ತಮ್ಮ ಬಾಲ್ಯದಲ್ಲಿ ಕಿತ್ತಳೆ ತೋಟವನ್ನು ಎಷ್ಟೊಂದು ಹಚ್ಚಿಕೊಂಡಿದ್ದರೆಂದರೆ, ಅವರೇ ಹೇಳುವ ಹಾಗೆ ಕಣ್ಣಿಗೆ ಬಟ್ಟೆಕಟ್ಟಿಕೊಂಡು ತೋಟದ ಪ್ರತಿ ಸಾಲಿನಲ್ಲೂ ಓಡಾಡುವಷ್ಟು ಅದು ಪರಿಚಿತವಾಗಿತ್ತು. ಬಹುಶಃ ಇವರಷ್ಟು ಕಿತ್ತಳೆಯನ್ನು ಬೇರಾರೂ ತಿಂದಿರಲಾರರು.

ಮನೆಯಿಂದ ನೂರು ಗಜಗಳ ದೂರದಲ್ಲಿ ಕೋಳಿ ಕಾಳಗದ ಕಣವಿತ್ತು. ಇದು ಗ್ರಾಮೀಣ ಪ್ರದೇಶದ ಕ್ರೀಡೆಯಾಗಿತ್ತು. ಸುಗ್ಗಿ ಕಾಲದ ಪ್ರತಿ ಭಾನುವಾರ, ಕ್ರಿಸ್‌ಮಸ್, ಹೊಸವರ್ಷ, ಈಸ್ಟರ್ ಶನಿವಾರ ಮತ್ತು ಭಾನುವಾರದ ದಿನಗಳಂದು ಕೋಳಿ ಕಾಳಗ ನಡೆಯುತ್ತಿತ್ತು. ಮನರಂಜನೆ ಕಡಿಮೆ ಇದ್ದುದರಿಂದಾಗಿ ಡಾಮಿನೋಸ್ (ಚೌಕಾಕಾರದ ಚಿಕ್ಕ ಕಾಯಿಗಳಿಂದ ಮೇಜಿನ ಮೇಲೆ ಆಡುವ ಆಟ) ಕಾರ್ಡ್ಸ್ ಇತ್ಯಾದಿ ಆಡುತ್ತಿದ್ದರು. ಸರ್ಕಾರದ್ದು ಎನ್ನಬಹುದಾದ ಒಂದು ಸಣ್ಣ ಶಾಲೆ ಮತ್ತು ಅಂಚೆ ಕಛೇರಿಯನ್ನು ಹೊರತುಪಡಿಸಿ ಆ ಪ್ರದೇಶದಲ್ಲಿ ಇತರ ಎಲ್ಲವೂ ಫಿಡೆಲ್‌ನ ತಂದೆಗೆ ಸೇರಿದ್ದಾಗಿತ್ತು.

ಒಂದು ರಾಜಕೀಯ ಪಿತೂರಿ ..... ಪುಟ 09 ರಿಂದ

ಈ ವಿವಿಯು 'ಸಂದರ್ಶಕ'ರಾಗಿರುವ ರಾಷ್ಟ್ರಪತಿಗಳು ಇದನ್ನು 2015ರಲ್ಲಿ ದೇಶದ ಅತ್ಯುತ್ತಮ ವಿಶ್ವ ವಿದ್ಯಾಲಯ ಎಂದು ಪ್ರಶಸ್ತಿ ನೀಡಿರುವುದು ನಿಜಕ್ಕೂ ಅಪಹಾಸ್ಯ. ಕಳೆದ ಕೆಲವು ವರ್ಷಗಳಲ್ಲಿ 13ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಇದು ಭಾರತದ ವಿಶ್ವವಿದ್ಯಾಲಯಗಳ ಮತ್ತು ಉನ್ನತ ಅಧ್ಯಯನ ಕೇಂದ್ರಗಳ ಕತ್ತು ಹಿಸುಕುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ವಿಶ್ವ ವಿದ್ಯಾಲಯಗಳು ಮಾನವೀಯತೆಯ, ಸಹಿಷ್ಣುತೆಯ, ತಾರ್ಕಿಕ ವಿಶ್ಲೇಷಣೆಯ, ವೈಚಾರಿಕ ಸಾಹಸದ ಕೇಂದ್ರಗಳಾಗಬೇಕು ಎಂದು ಸ್ವಾತಂತ್ರ್ಯದ ಆರಂಭದಲ್ಲಿ ನೆಹರೂ ಸಾರಿದ್ದರು. ಆದರೆ ತದ್ವಿರುದ್ಧವಾದದ್ದು ನಡೆಯುತ್ತಿದೆ ಎಂದು ಯೆಚೂರಿ ಖೇದ ವ್ಯಕ್ತಪಡಿಸಿದರು.

ಈ ವಿಶ್ವವಿದ್ಯಾಲಯದ ಕೋರ್ಟ್‌ನ ಸದಸ್ಯರಾಗಿ ನೇಮಿಸಲ್ಪಟ್ಟಿರುವ ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾದ ಸೀಮಾ ಮುಸ್ತಫಾ ಕೂಡಲೇ ಈ ಕೋರ್ಟ್‌ನ ಸಭೆ ಕರೆದು ಅಪ್ಪಾರಾವ್ ಅವರನ್ನು ಉಪಕುಲಪತಿ ಸ್ಥಾನದಿಂದ ತೆಗೆದು ಹಾಕಬೇಕೆಂದು ಆಗ್ರಹಿಸಿ ರಾಷ್ಟ್ರಪತಿಗಳು ಮತ್ತು ಉಪರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದಾರೆ.

ಉಪಕುಲಪತಿಯದ್ದು ದುರುದ್ದೇಶಪೂರ್ಣ ನಿರ್ಣಯ: ಸಿಪಿಐ(ಎಂ) ಖಂಡನೆ

ರೋಹಿತ್ ವೇಮುಲೆ ಆತ್ಮಹತ್ಯೆಯ ಸುದ್ದಿ ತಿಳಿದ ಕೂಡಲೇ ಈ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ಪರಿತಾಪವನ್ನು ವ್ಯಕ್ತಪಡಿಸಿ ಹೇಳಿಕೆಯನ್ನು ನೀಡಿತ್ತು.

ವಿಶ್ವವಿದ್ಯಾಲಯಕ್ಕೆ ಹೊಸದಾಗಿ ನೇಮಕಗೊಂಡ ಉಪಕುಲಪತಿ ಐವರು ದಲಿತ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಹಾಸ್ಟೆಲ್‌ನಿಂದ ಹೊರಹಾಕಿದ್ದನ್ನು ಪ್ರತಿಭಟಿಸಿ ಅವರು ಅನಿರ್ದಿಷ್ಟ ಕಾಲದ ಉಪವಾಸ ಮುಷ್ಕರ ಕೈಗೊಂಡಿದ್ದರು.

ಈ ಮೊದಲು ಆರೆಸ್ಸೆಸ್‌ನ ವಿದ್ಯಾರ್ಥಿ ಅಂಗ, ಎಬಿವಿಪಿ ಮತ್ತು ಅಂಬೇಡ್ಕರ್ ವಿದ್ಯಾರ್ಥಿ ಅಸೋಸಿಯೇಶನ್‌ ನಡುವೆ ಜಗಳ ನಡೆದಿದೆಯೆಂಬ ಆಪಾದನೆಯ ಮೇಲೆ ಒಂದು ತನಿಖೆ ನಡೆಸಿ ಆ ಘಟನೆ ಅಲ್ಲಿಗೇ ಇತ್ಯರ್ಥಗೊಂಡಂತಿತ್ತು.

ಆದರೆ ಹೊಸದಾಗಿ ನೇಮಕಗೊಂಡ ಉಪಕುಲಪತಿ, ಕೇಂದ್ರ ಸಂಪುಟದಲ್ಲಿರುವ ಹೈದರಾಬಾದಿನ ಒಬ್ಬ ಮಂತ್ರಿಯ ಒತ್ತಡದಿಂದ, ಮತ್ತು ಅದರಿಂದಾಗಿ ಮಾನವ ಸಂಪನ್ಮೂಲ ಇಲಾಖೆಯ ನಿರ್ದೇಶನದಿಂದ ಈ ವಿದ್ಯಾರ್ಥಿಗಳನ್ನು ಹಾಸ್ಟೆಲಿನಿಂದ ಹೊರಹಾಕುವ ಈ ಕ್ರಮ ಕೈಗೊಂಡರು ಎನ್ನುವ ಆಪಾದನೆಯಿದೆ. ಉಪಕುಲಪತಿಯ ಈ ಕ್ರಮದ ವಿರುದ್ಧ ಉಪವಾಸ ಮುಷ್ಕರ ನಡೆ-ಯುತ್ತಿತ್ತು.

ಇಂತಹ ಸಂದರ್ಭದಲ್ಲಿ ಈ ಆತ್ಮಹತ್ಯೆಗೆ ಕಾರಣವಾದ ಉಪಕುಲಪತಿಯದ್ದು ದುರುದ್ದೇಶಪೂರ್ಣ ನಿರ್ಣಯ ಎಂದು ಪೊಲಿಟ್‌ಬ್ಯುರೊ ಖಂಡಿಸಿದೆ. ಆತನ ವಿರುದ್ಧ ಪರಿಶಿಷ್ಟ ಜಾತಿ ಅತ್ಯಾಚಾರ ತಡೆ ಕಾಯ್ದೆಯ ಅಡಿಯಲ್ಲಿ ತಕ್ಷಣವೇ ಕೇಸು ದಾಖಲಿಸಬೇಕು ಎಂದು ಅದು ಆಗ್ರಹಿಸಿದೆ.

ಈ ಪ್ರತಿಷ್ಠಿತ ಹೈದರಾಬಾದ್ ವಿಶ್ವವಿದ್ಯಾಲಯ ಭಾರತದ ಸಂಸತ್ತು ಪಾಸು ಮಾಡಿದ ಒಂದು ಕಾನೂನಿನ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು, ಕೇಂದ್ರ ಸರಕಾರ ಈ ಘಟನೆಯ ಬಗ್ಗೆ ಒಂದು ಆಮೂಲಾಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದೆ.

ಶಿಕ್ಷಣದ ಮೂಲಕ ದಲಿತ ವಿದ್ಯಾರ್ಥಿಗಳ ಮುನ್ನಡೆಯನ್ನು ತಡೆಯುವ ಪ್ರಯತ್ನ–ಡಿಎಸ್‌ಎಂಎಂ

ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ಕೂಡ ಇದೊಂದು ಅತ್ಯಂತ ಆಘಾತಕಾರಿ ಮತ್ತು ದುಃಖದ ಘಟನೆ ಎಂದು ಹೇಳಿದೆ. ವೇಮುಲ ರೋಹಿತ್‌ನ ಆತ್ಮಹತ್ಯೆಗೆ ಉಪಕುಲಪತಿ ಮತ್ತು ಬಿಜೆಪಿ ಕೇಂದ್ರ ಸರಕಾರ ಹೊಣೆ ಎಂದು ಹೇಳಿರುವ ಅದು ಉಪಕುಪತಿಯನ್ನು ಎಸ್‌ಸಿ/ಎಸ್‌ಟಿ ಅತ್ಯಾಚಾರಗಳ ತಡೆ ಕಾಯ್ದೆಯ ಅಡಿಯಲ್ಲಿ ತಕ್ಷಣವೇ ಬಂಧಿಸಬೇಕು ಎಂದು ಅಗ್ರಹಿಸಿದೆ.

ಶಿಕ್ಷಣದ ಮೂಲಕ ದಲಿತ ವಿದ್ಯಾರ್ಥಿಗಳ ಮುನ್ನಡೆಯನ್ನು ತಡೆಯಲು ಸರಕಾರ ಬೇಕೆಂದೇ ಒಂದು ಪ್ರಯತ್ನ ನಡೆಸಿದೆ ಎಂದು ಹೇಳಿರುವ ಡಿಎಸ್‌ಎಂಎಂ, ದಲಿತ ವಿದ್ಯಾರ್ಥಿಗಳನ್ನು ಬೇಕೆಂದೇ ಅಮಾನತು ಮಾಡಿರುವ, ವಿವಿ ಆವರಣದಲ್ಲಿ ಅವರ ಚಲನವಲನದ ಮೇಲೆ ಮಿತಿ ಹಾಕಿರುವ, ಹಾಸ್ಟೆಲುಗಳಿಗೆ ಪ್ರವೇಶಿಸದಂತೆ, ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ನಿಷೇಧ ಹಾಕಿರುವ ಪ್ರಯತ್ನಗಳೆಲ್ಲ ಇಂತಹ ಪ್ರಯತ್ನವನ್ನೇ ಸೂಚಿಸುತ್ತವೆ.ಎನ್ನುತ್ತ ಪ್ರತಿಭಟಿಸುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಸೌಹಾರ್ದ ವ್ಯಕ್ತಪಡಿಸಿದೆ.

ಯುವ ಸಂಶೋಧಕನ ಬಲಿ ತೆಗೆದುಕೊಂಡ ಜಘನ್ಯ ಅಪರಾಧ – ಎಸ್‌ಎಫ್‌ಐ ಖಂಡನೆ

ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ)ನ ಕೇಂದ್ರ ಕಾರ್ಯಕಾರಿ ಸಮಿತಿ ಈ ಆತ್ಮಹತ್ಯೆಯ ಬಗ್ಗೆ ಅತೀವ ಶೋಕ ವ್ಯಕ್ತಪಡಿಸುತ್ತ ಇದು ಎಬಿವಿಪಿ–ಆರೆಸ್ಸೆಸ್‌ನೊಂದಿಗೆ ಕೈಮಿಲಾಯಿಸಿದ ವಿವಿಯ ಆಡಳಿತಗಾರರ ಸತತ ಕಿರುಕುಳದ ಕ್ರೂರ ನಡವಳಿಕೆಯಿಂದಾಗಿ ಸಂಭವಿಸಿದೆ ಎಂದು ಖಂಡಿಸಿದೆ. ಎಬಿವಿಪಿಯ ಸುಳ್ಳು ಆಪಾದನೆಯ ಬಗ್ಗೆ ಸರಿಯಾದ ವಿಚಾರಣೆಯನ್ನೂ ಮಾಡದೆ ಈ ಐದು ದಲಿತ ವಿದ್ಯಾರ್ಥಿಗಳಿಗೆ ವಿವರಣೆ ಕೊಡಲೂ ಅವಕಾಶ ನೀಡದೆ ವಿವಿಯ ಆವರಣದಲ್ಲಿ ಮುಕ್ತವಾಗಿ ಸಂಚರಿಸದಂತೆ ಮಾಡಲಾಗಿತ್ತು. ಇದನ್ನು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ವಿದ್ಯಾರ್ಥಿ ಸಮುದಾಯ ಪ್ರತಿಭಟಿಸುತ್ತಿತ್ತು ಎಂದು ಹೇಳಿರುವ ಎಸ್‌ಎಫ್‌ಐ, ಕೇಸರಿ ಪಡೆಗಳ ಆದೇಶದಂತೆ ಅಮಾನುಷವಾಗಿ, ಅನ್ಯಾಯಯುತವಾಗಿ ವರ್ತಿಸುತ್ತಿರುವ ಹೈದರಾಬಾದ್ ವಿಶ್ವವಿದ್ಯಾಲಯದ ಸರ್ವಾಧಿಕಾರಶಾಹೀ ವರ್ತನೆಯ ವಿರುದ್ಧ ದೇಶಾದ್ಯಂತ ವಿದ್ಯಾರ್ಥಿ ಸಮುದಾಯ ಎದ್ದು ನಿಲ್ಲಬೇಕು ಎಂದು ಕರೆ ನೀಡಿದೆ.

ಎಸಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ದೇಶಾದ್ಯಂತ ಪ್ರತಿಭಟನೆ ನಡೆಸಬೇಕು ಎಂದು ಎಸ್‌ಎಫ್‌ಐ ತನ್ನ ಘಟಕಗಳಿಗೆ ಕರೆ ನೀಡಿದೆ.

ಆತ್ಮಹತ್ಯೆಯಲ್ಲ, ಅನ್ಯಾಯದ ವಿರುದ್ಧ ಪ್ರತಿಭಟನೆ –ಎಐಪಿಎಸ್‌ಎನ್

ರೋಹಿತ್ ವೇಮುಲರದ್ದು ಅತ್ಮಹತ್ಯೆಯಲ್ಲ, ಅದು ಅನ್ಯಾಯದ ವಿರುದ್ಧ ಪ್ರತಿಭಟನೆ ಎಂದು ಅಖಿಲ ಭಾರತ ಜನವಿಜ್ಞಾನ ಜಾಲ ಎಂದು ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ. ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ತಾರತಮ್ಯದ ಜಾತಿ ಆಚರಣೆಗಳು ನಡೆಯುತ್ತಿರುವುದು ನಾಚಿಕೇಗೇಡಿನ ಸಂಗತಿ ಎಂದು ಅದು ಹೇಳಿದೆ.

ಈ ಸಂಶೋಧಕನ ಆತ್ಮಹತ್ಯೆಯ ಪತ್ರದಲ್ಲಿ ಇದಕ್ಕೆ ಯಾರೂ ಹೊಣೆಯಲ್ಲ ಎಂದು ಹೇಳಿರುವುದು 'ಈ ವಿವಿಯಲ್ಲಿ ಅತ ಮತ್ತು ಆತನ ಸಹಪಾಠಿಗಳನ್ನು ಎಂತಹ ತಾರತಮ್ಯದ, ವೈಷಮ್ಯಪೂರ್ಣ ,ಬೆದರಿಕೆಯ ವಾತಾವರಣ ಆವರಿಸಿತ್ತು ಎಂಬುದನ್ನು ತೋರಿಸುತ್ತದಷ್ಟೇ , 'ಬದುಕಿರುವುದಕ್ಕಿಂತ ಸಾವೇ ಶ್ರೇಯಸ್ಕರ' ಎನ್ನುವಂತೆ ಮಾಡಿರುವುದನ್ನು ತೋರಿಸುತ್ತದೆ ಎಂದು ಎಐಪಿಎಸ್‌ಎನ್ ಹೇಳಿದೆ.

ಜಾತಿವ್ಯವಸ್ಥೆ ಪಡೆದ ಬಲಿ ..... ಪುಟ 09 ರಿಂದ

ಐದು ದಲಿತ ಸಂಶೋಧನಾ ವಿದ್ಯಾರ್ಥಿಗಳನ್ನು, "ಅವರು ತಂತಮ್ಮ ಕೋರ್ಸ್‌ಗಳನ್ನು/ಪ್ರೋಗ್ರಾಂಗಳನ್ನು ಮುಗಿಸುವ ವರೆಗೆ ಹಾಸ್ಟೆಲುಗಳಲ್ಲಿ ಇರಲು ಅವಕಾಶ ಕೊಡಬಾರದು" ಎಂಬ ಆದೇಶವನ್ನು ಹೊರಡಿಸಿದರು. ಅವರು ತಮ್ಮ ವಿಭಾಗಗಳಲ್ಲಿ, ಲೈಬ್ರರಿಗಳಲ್ಲಿ ಮತ್ತು ತಮ್ಮ ವಿಷಯಕ್ಕೆ ಸೀಮಿತವಾದ ಸೆಮಿನಾರ್, ವರ್ಕ್‌ಶಾಪ್ ಇತ್ಯಾದಿಗಳಲ್ಲಿ ಮಾತ್ರ ಕಾಣಿಸಿಕೊಳ್ಳಬೇಕು, ವಿವಿ ಆವರಣದ ಬೇರಾವ ಸಾರ್ವಜನಿಕ ಸ್ಥಳದಲ್ಲೂ ಕಾಣಿಸಿಕೊಳ್ಳಬಾರದು, ವಿವಿ ಚುನಾವಣೆಗಳಲ್ಲಿ ಸ್ಪರ್ಧಿಸಬಾರದೆಂದೂ ಆದೇಶದಲ್ಲಿ ಹೇಳಲಾಗಿದೆ. ಈ ಆದೇಶದ ಪ್ರಕಾರವೇ ಈ ಐದು ದಲಿತ ಸಂಶೋಧನಾ ವಿದ್ಯಾರ್ಥಿಗಳನ್ನು ಅವರ ಹಾಸ್ಟೆಲ್ ಕೊಠಡಿಗಳಿಂದ ಹೊರಹಾಕಲಾಯಿತು. ಅವರು ತಮ್ಮ ಸಾಮಾನು ಸರಂಜಾಮುಗಳನ್ನು , ಜತೆಗೆ ಅಂಬೇಡ್ಕರ್ ಅವರ ಒಂದು ಫೋಟೋವನ್ನು ಹಿಡಿದು ಹೊರಬಂದು ವಿವಿಯ ಅವರಣದಲ್ಲಿ ತಮ್ಮ ಹೋರಾಟ ಮುಂದುವರೆಸಿದ್ದಾರೆ.

ಈ ನಡುವೆ ಜನವರಿ 17ರಂದು ತಮ್ಮ ಒಬ್ಬ ಪ್ರಮುಖ ಸಂಗಾತಿಯನ್ನು ಕಳಕೊಂಡಿದ್ದಾರೆ.

ರಾಹುಲ್ ಸಾವಿನ ಸುದ್ದಿ ಪ್ರಕಟವಾಗುತ್ತಲೇ ವಿವಿ ಅಧಿಕಾರಿಗಳು ವಿವಿ ಆವರಣವನ್ನು ರಣರಂಗವಾಗಿ ಮಾಡಿಬಿಟ್ಟರು. ರಾಹುಲ್ ಅಂತ್ಯಕ್ರಿಯೆ ವಿದ್ಯಾರ್ಥಿಗಳ ಆಕ್ರೋಶದ ಅಭಿವ್ಯಕ್ತಿಯಾಗಬಹುದು ಎಂದು ಹೆದರಿ ಮರಣೋತ್ತರ ಪರೀಕ್ಷೆಯನ್ನು ಬೇಗನೇ ಮುಗಿಸಿ ಅಂತ್ಯಕ್ರಿಯೆಯನ್ನೂ ರಾಹುಲ್‌ನ ಸಂಬಂಧಿಗಳ ಇಚ್ಛೆಗೆ ವಿರುದ್ಧವಾಗಿ ಬೇಗನೇ ಮುಗಿಸುವಂತೆ ಮಾಡಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

'ರಾಷ್ಟ್ರಭಕ್ತ'ರುಗಳ ತಿಪ್ಪರಲಾಗಗಳು

ಕೇಂದ್ರ ಮಂತ್ರಿಗಳು ಮತ್ತು ವಿವಿ ಉಪಕುಲಪತಿ ಈಕ್ರಮಗಳನ್ನು ಕೈಗೊಂಡದ್ದು ರಾಷ್ಟ್ರ–ವಿರೋಧಿ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಎಂಬುದು ಬಿಜೆಪಿ ಮತ್ತು ಅವರ ಪರಿವಾರದ ಗೆಳೆಯರು ಹಾಕುತ್ತಾ ಬಂದಿರುವ ಈಗಲೂ ಹಾಕುತ್ತಿರುವ ರಾಗ. ಇದಕ್ಕಾಗಿ ಅನೇಕ ತಿಪ್ಪರಲಾಗಗಳನ್ನು ಹಾಕುತ್ತಿದ್ದಾರೆ.

ರಾಜೀನಾಮೆ ಕೊಡಬೇಕೆಂಬ ಒತ್ತಡಕ್ಕೆ ಒಳಗಾಗಿರುವ ಉಪಕುಲಪತಿಗಳು ಈ ಘಟನೆಯ ಬಗ್ಗೆ ಸುಶೀಲ್ ಕುಮಾರ್ ತಾಯಿಯವರು ಕೋರ್ಟ್ ಮೊರೆ ಹೋಗಿದ್ದು ಕೋರ್ಟಿಗೆ ಉತ್ತರ ಕೊಡಲಿಕ್ಕಾಗಿ ತಾನು ಈ ಕ್ರಮ ಕೈಗೊಳ್ಳಲೇ ಬೇಕಾಯಿತು ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಿ ವಿವಿ ಆವರಣದಲ್ಲಿ ಸಾಮಾನ್ಯ ಸ್ಥಿತಿ ತರಲು ಹೈದರಾಬಾದ್ ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘ(ಯುಹೆಚ್‌ಟಿಎ) ಮತ್ತು ಎಸ್‌ಸಿ/ಎಸ್‌ಟಿ ಟೀಚರ್ಸ್ ಫೋರಂ ತನ್ನ ಬಳಿ ಬಂದಿದ್ದಾರೆ ಎಂದು ಮನವಿ ಮಾಡಿಕೊಂಡರು ಎಂದಿದ್ದಾರೆ. ಆದರೆ ತಕ್ಷಣವೇ ಈ ಎರಡೂ ಸಂಘಟನೆಗಳವರು ತಾವೇನೂ ಕೇಳಿಕೊಂಡಿಲ್ಲ, ತಮಗೆ ಆ ಅಧಿಕಾರವೂ ಇಲ್ಲ ಎಂದು ಹೇಳಿ, ಹೋರಾಟನಿರತ ವಿದ್ಯಾರ್ಥಿಗಳ ಬೆಂಬಲಕ್ಕೆ ನಿಂತು ಉಪಕುಲಪತಿಗಳ ನಿಜಬಣ್ಣವನ್ನು ಬಯಲಿಗೆಳೆದರು.

ಅತ್ತ ಬಂಡಾರು ದತ್ತಾತ್ರೆಯ ತಾನೇನೂ ಒತ್ತಡ ಹಾಕಿಲ್ಲ ಎಂದರೆ, ಮೋದಿ ಸರಕಾರದ ಮಾನವ ಸಂಪನ್ಮೂಲ ಇಲಾಖೆ ತಾವು ಮಂತ್ರಿಗಳ 'ವಿಐಪಿ' ಪತ್ರದ ಮೇಲೆ ಕ್ರಮ ಕೈಗೊಳ್ಳಲೇ ಬೇಕಾಗಿತ್ತು, ಆದ್ದರಿಂದಲೇ ನಾಲ್ಕು ಬಾರಿ ನೆನಪಿಸಬೇಕಾಯಿತು, ಇದರಲ್ಲಿ ಒತ್ತಡವೇನೂ ಇರಲಿಲ್ಲ ಎಂದು ಜಾರಿಕೊಳ್ಳಲು ಪ್ರಯತ್ನಿಸಿದೆ.

ಈ ನಡುವೆ ಮಾನವ ಸಂಪನ್ಮೂಲ ಮಂತ್ರಿಗಳು ಇದನ್ನು ದಲಿತ–ವಿರೋಧಿ ಪ್ರಶ್ನೆಯಾಗಿ ಮಾಡಬೇಡಿ ಎಂದು ತಾಕೀತು ಮಾಡಿದರು. ಹಾಗೆ ಹೇಳುವಾಗ ವಿವಿಯ ಅತ್ಯಂತ ಹಿರಿಯ ದಲಿತ ಪ್ರಾಧ್ಯಾಪಕರಿದ್ದ ಉಪಸಮಿತಿಯೊಂದು ವಿವಿಯ ಆದೇಶವನ್ನು ಎತ್ತಿ ಹಿಡಿಯಿತು ಎಂದು ಸೇರಿಸಿದರು. ಅವರ ಈ ಹೇಳಿಕೆ ಅವರಿಗೇ ತಿರುಗುಬಾಣವಾಯಿತು. ಹೈದರಾಬಾದ್ ವಿವಿಯ ದಲಿತ ಸಮುದಾಯಕ್ಕೆ ಸೇರಿದ ಹತ್ತು ಪ್ರಾಧ್ಯಾಪಕರು ಸ್ಮೃತಿ ಇರಾನಿಯವರ ಹೇಳಿಕೆಯನ್ನು ಪ್ರತಿಭಟಿಸಿ ತಮ್ಮ ಆಡಳಿತಾತ್ಮಕ ಸ್ಥಾನಗಳಿಗೆ ರಾಜೀನಾಮೆ ನೀಡಿದರು. ಈ ಉಪಸಮಿತಿಯ ಮುಖ್ಯಸ್ಥರು ಒಬ್ಬ ಮೇಲ್ಜಾತಿಗೆ ಸೇರಿದ ಪ್ರಾಧ್ಯಾಪಕರು, ಉಪಸಮಿತಿಯಲ್ಲಿ ದಲಿತ ಸಮುದಾಯಕ್ಕೆ ಸೇರಿದವರಾರೂ ಇರಲಿಲ್ಲ, ಸ್ಟೂಡೆಂಟ್ ವೆಲ್‌ಫೇರ್ ಡೀನ್ ಅವರನ್ನು ಅವರ ಸ್ಥಾನದಿಂದಾಗಿಯಷ್ಟೇ ಈ ಸಮಿತಿಯಲ್ಲಿ ಸೇರಿಸಿಕೊಳ್ಳಲಾಗಿತ್ತು, ಆರಂಭದಿಂದಲೂ ಈ ಮಂಡಳಿಯಲ್ಲಿ ದಲಿತರ ಪ್ರಾತಿನಿಧ್ಯ ಇರಲೇ ಇಲ್ಲ ಎಂದು ಹೇಳಿಕೆ ನೀಡಿದರು.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಉಳಿದ ನಾಲ್ವರು ಸಂಶೋಧನಾ ವಿದ್ಯಾರ್ಥಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದಿದೆ. ಆದರೆ ವಿದ್ಯಾರ್ಥಿಗಳು ತಮ್ಮ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿದ್ದಾರೆ. ರೋಹಿತ್ ಬದುಕಿದ್ದರೆ ಇದಕ್ಕೆ ಅರ್ಥವಿರುತ್ತಿತ್ತು, ಈಗ ಅವನ ಬಲಿ ತೆಗೆದುಕೊಂಡವರ ವಿರುದ್ಧ ಕ್ರಮಗಳನ್ನು ಕೈಗೊಳ್ಳುವ ವರೆಗೆ ಹೋರಾಟ ಮುಂದುವರೆಯುತ್ತದೆ ಎಂದಿದ್ದಾರೆ.

ಮಾನವ ಸಂಪನ್ಮೂಲ ಇಲಾಖೆ ಕಳಿಸಿದ್ದ ಇಬ್ಬರು ಸದಸ್ಯರ ಸತ್ಯಶೋಧನಾ ಸಮಿತಿ ಕೂಡ ವಿವಿ ಅಧಿಕಾರಿಗಳು ಈ ಪ್ರಸಂಗವನ್ನು ಸರಿಯಾಗಿ ನಿರ್ವಹಿಸಿಲ್ಲ, ಉಪಕುಲಪತಿಗಳ ಬಗ್ಗೆ ಒಳ್ಳೆಯ ಅಭಿಪ್ರಾಯಗಳಿಲ್ಲ ಎಂದು ಗಮನಿಸಿರುವುದಾಗಿ ವರದಿಯಾಗಿದೆ.

ಆದರೂ ತೆಲಂಗಾಣದ ಬಿಜೆಪಿ ಮುಖಂಡರು ಈಗಲೂ ಅದೇ 'ರಾಷ್ಟ್ರ–ವಿರೋಧಿ' ಚಟುವಟಿಕೆಗಳ ರಾಗ ಹಾಕುವುದನ್ನು ಮುಂದುವರೆಸಿದ್ದಾರೆ!

ಒಂದು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿ. ನನ್ನ ಕುಟುಂಬಕ್ಕೆ ಕೊಡಿಸಿ

ರೋಹಿತ್ ಮರಣ ಪತ್ರದಿಂದ.....



ನಾನು ಸದಾ ಒಬ್ಬ ಲೇಖಕನಾಗಬೇಕೆಂದಿದ್ದೆ, ವಿಜ್ಞಾನದ ಲೇಖಕ, ಕಾರ್ಲ ಸಾಗನ್‌ನಂತೆ. ಕೊನೆಗೂ ಬರೆಯುತ್ತಿರುವುದು ಇದೊಂದು ಪತ್ರ ಮಾತ್ರ...............................

ನನಗೆ ವಿಜ್ಞಾನ, ನಕ್ಷತ್ರಗಳು, ಪ್ರಕೃತಿ ಎಂದರೆ ಪ್ರೀತಿ, ಆದರೆ ನಾನು ಜನರನ್ನೂ ಪ್ರೀತಿಸುತ್ತಿದ್ದೆ, ಅವರು ಪ್ರಕೃತಿಯಿಂದ ದೂರವಾಗಿ ಬಹಳ ಕಾಲವೇ ಆಗಿದೆ ಎಂದು ತಿಳಿಯದೆ.........................

ಒಬ್ಬ ಮನುಷ್ಯನ ಬೆಲೆಯನ್ನು ಅವನ ತಕ್ಷಣದ ಐಡೆಂಟಿಟಿಗೆ, ಅತೀ ನಿಕಟ ಸಾಧ್ಯತೆಗೆ ಇಳಿಸಲಾಗಿದೆ. ಒಂದು ವೋಟು, ಒಂದು ಸಂಖ್ಯೆಗೆ. ಒಂದು ವಸ್ತುವಾಗಿ. ಎಂದೂ ಮನುಷ್ಯನನ್ನು ಮನಸ್ಸು ಎಂದು ಕಂಡಿಲ್ಲ. ......ಪ್ರತಿಯೊಂದು ರಂಗದಲ್ಲೂ, ಅಧ್ಯಯನದಲ್ಲೂ, ರಸ್ತೆಗಳಲ್ಲೂ, ರಾಜಕೀಯದಲ್ಲೂ, ಮತ್ತು ಸಾವು, ಬದುಕಿನಲ್ಲೂ......

ನನ್ನ ಹುಟ್ಟು ಒಂದು ಮರಣಾಂತಿಕ ಅಪಘಾತ. ನಾನೆಂದೂ ನನ್ನ ಬಾಲ್ಯದ ಒಂಟಿತನದಿಂದ ಮೇಲೇಳಲಾರೆ..........

ನೀವು ಯಾರಾದರೂ ಈ ಪತ್ರವನ್ನು ಓದಿದರೆ, ನನಗೆ ಏನಾದರೂ ಮಾಡಬೇಕೆಂದಿದ್ದರೆ, ನನಗೆ ಏಳು ತಿಂಗಳ ಫೆಲೋಶಿಪ್ ಬರಬೇಕಾಗಿದೆ, ಒಂದು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿ. ಅದು ನನ್ನ ಕುಟುಂಬಕ್ಕೆ ಪಾವತಿಯಾಗುವಂತೆ ದಯವಿಟ್ಟು ಮಾಡಿ. ನಾನು ಸುಮಾರು 40 ಸಾವಿರ ರಾಮ್‌ಜಿ ಗೆ ಕೊಡಬೇಕಾಗಿದೆ. ಅವನೆಂದೂ ಅದನ್ನು ಹಿಂದೆ ಕೇಳಿಲ್ಲ. ಆದರೆ ದಯವಿಟ್ಟು ಅವನಿಗೆ ಅದನ್ನು ಕೊಡಿ.

ಬೆಲೆ ಏರಿಕೆ ಉದ್ದೇಶಪೂರ್ವಕವಲ್ಲವೇ?

- **ಬೇಳೆಕಾಳುಗಳ ಉತ್ಪಾದನೆ ಹೆಚ್ಚಿಸಲೆಂದು ರಾಷ್ಟ್ರೀಯ ಆಹಾರ ಸುಭದ್ರತಾ ಯೋಜನೆ ಈ ಮೊದಲೇ ಆರಂಭವಾಗಿತ್ತು. ಇದಕ್ಕೆ ಮೋದಿ ಸರ್ಕಾರ ತನ್ನ ಮೊದಲ(2014–15) ಬಜೆಟ್‌ನಲ್ಲಿ 1309.77 ಕೋಟಿ ರೂಗಳನ್ನು ನಿಗದಿಮಾಡಿತ್ತು. ಇದು ಹಿಂದಿನ ವರ್ಷಕ್ಕಿಂತ 300 ಕೋಟಿ ರೂ ಕಡಿಮೆ, ಬಿಡುಗಡೆಮಾಡಿದ್ದು ಕೇವಲ 818.66 ಕೋಟಿ ರೂ. ಅಂದರೆ, 500ಕೋಟಿ ರೂ ಖೋತಾ. 2015–16ರಲ್ಲಿ ಈ ಬಾಬ್ತು 815.97 ಕೋಟಿಗಿಳಿಯಿತು. ಇದರಲ್ಲಿ 2015 ನವೆಂಬರ್‌ವರೆಗೆ ಬಿಡುಗಡೆ ಮಾಡಿದ್ದು ಜುಜುಬಿ 14.60 ಕೋಟಿ ರೂ. "ಮೇಕ್ ಇನ್ ಇಂಡಿಯಾ" ಎಂದು ವಿಶ್ವದ ಎಲ್ಲರಿಗೂ ಕರೆ ಕೊಡುತ್ತಿರುವ ಮೋದಿ ಸರ್ಕಾರ, ಬೇಳೆಕಾಳುಗಳ ಉತ್ಪಾದನೆ ಹೆಚ್ಚಿಸಲು ಹೊರಟ ತನ್ನ ದೇಶದ ರೈತರಿಗೆ ಬೆಂಬಲಕೊಟ್ಟು, ಜನರನ್ನು ಕಾಳಸಂತೆಕೋರರ ಹಿಡಿತದಿಂದ ಬಚಾವ್ ಮಾಡಬಹುದಿತ್ತು. ಮಾಡುತ್ತಿಲ್ಲ, ಏಕೆ?**
- **ಫೆಬ್ರವರಿ 2015ರಿಂದ ತೊಗರಿ ಬೇಳೆ ಬೆಲೆ ಸತತವಾಗಿ ಏರುತ್ತಿತ್ತು. ಸಗಟುದಾರರು ಕೊಳ್ಳೆ ಹೊಡೆದರು. ಕಿಲೊಗೆ 125 ರೂ.ನಂತೆ ಸುಲಿಗೆಯಾಗಿದೆ. ತಾನೂ ತಿನ್ನುವುದಿಲ್ಲ, ಬೇರೆಯವರನ್ನೂ ತಿನ್ನಲು ಬಿಡುವುದಿಲ್ಲ ಎಂದ ಮೋದಿಯವರ ಸರಕಾರ ಕೊಳ್ಳೆ ಹೊಡೆದವರಿಗೆ ಅಕ್ಟೋಬರ್ ವರೆಗೂ ರಕ್ಷಣೆ ಕೊಟ್ಟಿದ್ದು ಏಕೆ?**

ಏರುತ್ತಿರುವ ಬೆಲೆಗಳನ್ನು ಇಳಿಸಲು ತುರ್ತು ಕ್ರಮ ಕೈಗೊಳ್ಳುವುದಾಗಿ ನರೇಂದ್ರ ಮೋದಿ ವೀರಾವೇಶದ ಭರವಸೆ ಕೊಟ್ಟಿದ್ದರು ಮತ್ತು ಅಕ್ರಮ ದಾಸ್ತಾನು ಹೊಂದಿರುವ ಕಾಳ ಸಂತೆ ಕೋರರನ್ನು ಶಿಕ್ಷಿಸಲು ವಿಶೇಷ ನ್ಯಾಯಾಲಯಗಳನ್ನು ಆರಂಭಿಸುವುದಾಗಿ 2014ರ ಲೋಕ ಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಬಿಜೆಪಿ ಹೇಳಿತ್ತು. ಹೇಳಿದ್ದು ಬೆಲೆ ಇಳಿಕೆ ಆದದ್ದು ಬೆಲೆ ಏರಿಕೆ. ಬೆಲೆ ಏರಿಕೆ ತಡೆಗಟ್ಟದಿರುವುದು ಹತ್ತೊಂಭತ್ತು ತಿಂಗಳ ಅವರ ಆಡಳಿತದ ಅತಿ ದೊಡ್ಡ ಸೋಲು.

ಜಾಗತಿಕವಾಗಿ, ಎಲ್ಲ ಸರಕುಗಳ ಬೆಲೆಗಳು ಇಳಿದಿವೆ. ಕಚ್ಚಾ ತೈಲ. ಉಕ್ಕು, ಕಲ್ಲಿದ್ದಲು, ಬಂಗಾರ ಮುಂತಾದ ವಸ್ತುಗಳ ಬೆಲೆ ಬೆಲೆ ಇಳಿಕೆ ಇನ್ನೂ ನಿಂತಿಲ್ಲ. ಆಹಾರ ಪದಾರ್ಥಗಳ ಬೆಲೆ ನಾಲ್ಕು ವರ್ಷಗಳಿಂದಲೂ ಇಳಿಯುತ್ತಿದ್ದು, 2015ರಲ್ಲಿ ಅವು ಶೇ.19ರಷ್ಟು ಇಳಿದಿವೆ ಎಂದು ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ವಿಭಾಗ ತಿಳಿಸಿದೆ. ಇಂತಹ ಪರಿಸ್ಥಿತಿಯಲ್ಲಿ, ಭಾರತದಲ್ಲಿ ಪೆಟ್ರೋಲ್–ಡೀಸೆಲ್ ಮೇಲಿ ಸುಂಕಗಳನ್ನು ಏರಿಸಿ ಅದರ ನಿಜಬೆಲೆಗಳು ಇಳಿಯದಂತೆ ಮಾಡಿದ್ದರೆ, ಆಹಾರ ಪದಾರ್ಥಗಳ ಬೆಲೆ ಏರುತ್ತಿವೆ. ಅಕ್ಕಿ, ತರಕಾರಿ, ಹಾಲು, ಬೇಳೆಕಾಳುಗಳ ಬೆಲೆ ಏರಿಕೆಯಾಗಿರುವುದು ಜನಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆದಂತಾಗಿದೆ. ಒಂದು ಕಿಲೊ ತೊಗರಿಬೇಳೆ ಬೆಲೆ ಇನ್ನೂರು ರೂ ದಾಟಿ, ಅನುಮಾನಕ್ಕೆ ಎಡೆಮಾಡಿತ್ತು. ಬೇಳೆ ಬೆಲೆ ಕೋಳಿ ಬೆಲೆಗಿಂತಲೂ ಅಧಿಕವಾಗಿತ್ತು. ಕಡಿಮೆ ಆದಾಯದ ಕೋಟ್ಯಾಂತರ ಮಂದಿಗೆ ಊಟದಲ್ಲಿ ಬೇಳೆಯೂ ಇಲ್ಲ, ಕೋಳಿಯೂ ಇಲ್ಲ. ಪ್ರೋಟಿನ್ ಇನ್ನೆಲ್ಲಿ? ಜನಸಾಮಾನ್ಯರು, ಉತ್ತರ ಭಾರತದಲ್ಲಿ ದಾಲ್–ರೋಟಿ, ದಕ್ಷಿಣ ಭಾರತದಲ್ಲಿ ಅನ್ನ–ಸಾಂಬಾರ್ ತಿನ್ನಲು ಹಿಂದೆ ಮುಂದೆ ನೋಡುವಂತಾಯಿತು. ಮೋದಿ ಸರ್ಕಾರ ಜನರಿಗೆ ಬೇಳೆ ಕೈಗೆಟುಕದಂಹ ಪರಿಸ್ಥಿತಿ ಉಂಟಾಗುವಂತೆ ಮಾಡಿದೆ. ಹೇಗೆ?

ತೊಗರಿಬೇಳೆ ಪ್ರಸಂಗ

ನಮ್ಮ ದೇಶ ಬೇಳೆ ಕಾಳುಗಳನ್ನು ಆಮದು ಮಾಡಿಕೊಳ್ಳುತ್ತದೆ. ಇದು ಹೊಸದೇನಲ್ಲ. 2014–15ರಲ್ಲಿ ಬೇಳೆಕಾಳುಗಳ ಉತ್ಪತ್ತಿಯಲ್ಲಿ ಶೇ.12ರಷ್ಟು ಕೊರತೆ ಇರುವುದು ಸರ್ಕಾರಕ್ಕೆ ಗೊತ್ತಿತ್ತು. ಹಾಗಾಗಿ, ಹೆಚ್ಚಿನ ಪ್ರಮಾಣದ ಬೇಳೆಕಾಳುಗಳನ್ನು ಸಕಾಲದಲ್ಲಿ ಆಮದುಮಾಡಿಕೊಳ್ಳುವ ಅವಶ್ಯಕತೆಯೂ ಗೊತ್ತಿತ್ತು. (ವಿವರಗಳಿಗೆ ಕೋಷ್ಟಕ ನೋಡಿ)

ಬೇಳೆ ಕಾಳುಗಳ ಆಮದು (ಲಕ್ಷ ಟನ್ನುಗಳಲ್ಲಿ)

ಉತ್ಪಾದನೆ	ವರ್ಷ	ಆಮದು
16.32	2012–13	40.13
19.25	2013–14	31.77
17.20	2014–15	45.84
–	2015–16 (ಅರ್ಧ ವರ್ಷ)	22.54

ಬೇಳೆ ಕಾಳುಗಳ ಆಮದಿನಲ್ಲಿ, ತೊಗರಿಬೇಳೆಯ ಪಾಲು–12.5% ಭಾಗ ಇದೆ. ತೊಗರಿ ಬೇಳೆಯ ಆಮದು ಪ್ರಮಾಣ ಕಡಿಮೆಮಾಡಿರುವುದೂ ಬೆಲೆ ಏರಿಕೆಗೆ ಕಾರಣ.

ತೊಗರಿಬೇಳೆ ಆಮದು (ಲಕ್ಷ ಟನ್ನುಗಳಲ್ಲಿ)

ವರ್ಷ	ಆಮದು
2012–13	5.0639 ಲಕ್ಷ ಟನ್
2013–14	4.6561 ಲಕ್ಷ ಟನ್
2014–15	4.4385 ಲಕ್ಷ ಟನ್

ಫೆಬ್ರವರಿ 2015ರಿಂದ ತೊಗರಿ ಬೇಳೆ ಬೆಲೆ ಸತತವಾಗಿ ಏರುತ್ತಿತ್ತು. ಸಗಟುದಾರರು ಕೊಳ್ಳೆ ಹೊಡೆದರು. ಎಷ್ಟರಮಟ್ಟಿಗೆ ಎಂದರೆ, ಕಡಿಮೆ ಎಂದರೂ ಕಿಲೊಗೆ 125 ರೂ ನಂತೆ ಸುಲಿಗೆಯಾಗಿದೆ. ತಾನೂ ತಿನ್ನುವುದಿಲ್ಲ, ಬೇರೆಯವರನ್ನೂ ತಿನ್ನಲು ಬಿಡುವುದಿಲ್ಲ ಎಂದ ಮೋದಿಯವರ ಸಂಕಲ್ಪ ಏನಾಯಿತು? ಆಮದು ಮಾಡಿಕೊಂಡ ಬೇಳೆಯ ಸ್ಟಾಕ್ ಹೇಗೆ ಮಂಗ ಮಾಯವಾಯಿತು? ಬೆಲೆ ಏರಿಸಿ ಸುಲಿಗೆ ಮಾಡಿದ ಹಣ ಎಷ್ಟು? ಕಾಳ ಸಂತೆ ಕೋರರನ್ನು ಶಿಕ್ಷಿಸುವ ವಿಶೇಷ ನ್ಯಾಯಾಲಯಗಳ ಕತೆ – ಕಣ್ಣು, ಕಿವಿ, ಬಾಯಿ ಮುಚ್ಚಿಕೊಂಡ ಮೂರು ಮಂಗಗಳ ಕತೆಯಾಯಿತೇ?

ತೊಗರಿಬೇಳೆ – ಸಗಟು ಬೆಲೆ

ಫೆಬ್ರವರಿ 2014	ರೂ 41.50 (ಕಿಲೊ)
ಜನವರಿ 2015	ರೂ 31.77 (ಕಿಲೊ)
ಫೆಬ್ರವರಿ 2015	ರೂ 60.35 (ಕಿಲೊ)
ಅಕ್ಟೋಬರ್2015	**ಕಿಲೊ 200 ರೂ (ಚಿಲ್ಲರೆ ಬೆಲೆ)**

ಕೇಂದ್ರ ಆಹಾರ ಸಚಿವರು ಜುಲೈನಲ್ಲಿ ರಾಜ್ಯಗಳ ಆಹಾರ ಸಚಿವರ ಸಭೆ ಕರೆದು, ಕಾಳಸಂತೆಕೋರರ ಮೇಲೆ ದಾಳಿ ನಡೆಸುವಂತೆ ಸಲಹೆ ಮಾಡಿದರು. ಬೇಳೆಕಾಳುಗಳನ್ನು ಸರ್ಕಾರವೇ ನೇರವಾಗಿ ಆಮದು ಮಾಡಿಕೊಳ್ಳುತ್ತಿಲ್ಲ. ಈ ವಹಿವಾಟನ್ನು ಖಾಸಗಿಯವರಿಗೆ ವಹಿಸಲಾಗಿದೆ. ಬೇಳೆಕಾಳುಗಳ ಸಗಟು ಆಮದು ಮತ್ತು ಪರಿಷ್ಕರಣೆಮಾಡುವ ಪ್ರಮುಖ ಕೇಂದ್ರಗಳು ಗುಜರಾತ್, ರಾಜಾಸ್ತಾನ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿವೆ. ಬಿಜೆಪಿ ಆಡಳಿತವಿರುವ ಈ ರಾಜ್ಯಗಳಲ್ಲಿ ಕಾಳಸಂತೆಕೋರರ ಮಳಿಗೆಗಳ ಮೇಲೆ ದಾಳಿ ನಡೆಸಲಿಲ್ಲ. ಸಕಾಲದಲ್ಲಿ ಸಾಕಷ್ಟು ಪ್ರಮಾಣದ ಬೇಳೆಕಾಳುಗಳನ್ನು ಆಮದು ಮಾಡಿಕೊಳ್ಳಲಿಲ್ಲ. ಹಿಂದಿನ ವರ್ಷ (2014–15ರಲ್ಲಿ) 45.84 ಲಕ್ಷ ಟನ್ ಬೇಳೆಕಾಳುಗಳ ಆಮದಾಗಿತ್ತು. ಈ ವರ್ಷದ ಮೊದಲ ಅರ್ಧದಲ್ಲಿ ಆಮದಿನ ಪ್ರಮಾಣ 22.54 ಲಕ್ಷ ಟನ್ ಇತ್ತು. ಇದು, ಕಾಳಸಂತೆಕೋರರು ಕೊಳ್ಳೆಹೊಡೆಯಲು ಪ್ರೋತ್ಸಾಹ ಒದಗಿಸಿತು. ಜನತೆಯ ಆಕ್ರೋಶ ಭುಗಿಲೆದ್ದಾಗ, ಬಿಹಾರದ ಅಸೆಂಬ್ಲಿ ಚುನಾವಣೆಯಲ್ಲಿ ಸೋಲಿನ ಭೀತಿ ಎದುರಾದಾಗ, ಶಾಸ್ತ್ರಕ್ಕೆ ಕೆಲವು ಕಾಳಸಂತೆಕೋರರ ಮಳಿಗೆಗಳ ಮೇಲೆ ಅಕ್ಟೋಬರ್ 19ರಿಂದ ಡಿಸೆಂಬರ್ 11ರವರೆಗೆ ದಾಳಿನಡೆದಿದೆ. ಅಂ–ದರೆ, ಕೊಳ್ಳೆ ಹೊಡೆದವರಿಗೆ ಅಕ್ಟೋಬರ್ ವರೆಗೂ ರಕ್ಷಣೆ ಕೊಟ್ಟಿರುವುದು ಸ್ಪಷ್ಟವಾಗಿದೆ.

ಮೇಕ್ ಇನ್ ಇಂಡಿಯಾ–ರೈತರಿಗಲ್ಲ

ಮೋದಿಯವರ ಘೋಷಣೆಗಳು ಆಕರ್ಷಕವಾಗಿವೆ. ಆಚರಣೆಗಳಲ್ಲಿ ಸೋಗಲಾಡಿತನವಿದೆ. ಬೇಳೆಕಾಳುಗಳ ಉತ್ಪಾದನೆ ಹೆಚ್ಚಿಸುವ ಸಲುವಾಗಿ, ಅಧಿಕ ಇಳುವರಿಯ ಬೀಜ ಮತ್ತು ಕೆಲವು ಪರಿಕರಗಳನ್ನು ಕೊಳ್ಳಲು ರೈತರಿಗೆ ನೆರವಾಗಲು ಯುಪಿಎ ಸರ್ಕಾರ ರಾಷ್ಟ್ರೀಯ ಆಹಾರ ಸುಭದ್ರತಾ ಯೋಜನೆ ಆರಂಭಿಸಿತ್ತು. ಮೋದಿ ಸರ್ಕಾರ ತನ್ನ ಮೊದಲ(2014–15) ಬಜೆಟ್‌ನಲ್ಲಿ 1309.77 ಕೋಟಿ ರೂಗಳನ್ನು ನಿಗದಿಮಾಡಿತ್ತು. ಇದು ಹಿಂದಿನ ವರ್ಷಕ್ಕಿಂತ 300 ಕೋಟಿ ರೂ ಕಡಿಮೆ ಇತ್ತು. ಅಷ್ಟಾಗಿಯೂ, ಬಿಡುಗಡೆಮಾಡಿದ್ದು ಕೇವಲ 818.66 ಕೋಟಿ ರೂ. ಅಂದರೆ, 500ಕೋಟಿ ರೂ ಖೋತಾ. 2015–16ರಲ್ಲಿ ಈ ಬಾಬ್ತು 815.97 ಕೋಟಿ ನಿಗದಿಪಡಿಸಿದೆ. ಅಂದರೆ, ಮತ್ತೆ 500 ಕೋಟಿ ರೂಗಳ ಖೋತಾ. ಗಾಯದ ಮೇಲೆ ಬರೆ ಎಳೆದಂತೆ, ಸರ್ಕಾರ 2015 ನವೆಂಬರ್‌ವರೆಗೆ ಬಿಡುಗಡೆಮಾಡಿರುವ ಹಣ ಜುಜುಬಿ 14.60 ಕೋಟಿ ರೂ. "ಮೇಕ್ ಇನ್ ಇಂಡಿಯಾ" ಎಂದು ವಿಶ್ವದ ಎಲ್ಲರಿಗೂ ಕರೆ ಕೊಡುತ್ತಿರುವ ಮೋದಿ ಸರ್ಕಾರ, ಬೇಳೆಕಾಳುಗಳ ಉತ್ಪಾದನೆ ಹೆಚ್ಚಿಸಲು ಹೊರಟ ತನ್ನ ದೇಶದ ರೈತರಿಗೆ ಬೆಂಬಲಕೊಟ್ಟು, ಜನರನ್ನು ಕಾಳಸಂತೆಕೋರರ ಹಿಡಿತದಿಂದ ಬಚಾವ್ ಮಾಡಬಹುದಿತ್ತು. ಸರ್ಕಾರಕ್ಕೆ ಅದು ಬೇಕಿಲ್ಲ. ಅದರ ಬಣ್ಣ ಬಯಲಾಗುತ್ತಿದೆ.



ಕೆ.ಎಂ.ನಾಗರಾಜ್

ಪೆಟ್ರೋಲ್/ಡೀಸೆಲ್ ಸುಂಕ ಹೆಚ್ಚಳ

ಹಣದುಬ್ಬರ ಇಳಿದಿದೆ ಎಂದು ಸರ್ಕಾರ ವಾದಿಸುತ್ತಿದೆ. ಅಂದರೆ, ಬೆಲೆಗಳು ಇಳಿದಿವೆ ಎಂದರ್ಥ. ಆದರೆ, ಬೆಲೆಗಳು ಇಳಿಯುವ ಬದಲು ಏರುತ್ತಲೇ ಇವೆ. ಪೆಟ್ರೋಲ್–ಡೀಸೆಲ್ ಬೆಲೆಗಳನ್ನು ಇಳಿಸದಿರುವುದೂ ಬೆಲೆ ಏರಿಕೆಗೆ ಕಾರಣ ಎಂಬ ಅಭಿಪ್ರಾಯವಿದೆ. ಶಾಸನಗಳ ಹೊರತಾಗಿ ವಿಧಿಸುವ ತೆರಿಗೆಗಳಿಗೆ ಹಣದುಬ್ಬರ ಎನ್ನುತ್ತಾರೆ. ಪೆಟ್ರೋಲ್–ಡೀಸೆಲ್‌ನ ಈಗಿನ ಬೆಲೆಗಳು ಈ ಅಭಿಪ್ರಾಯವನ್ನು ಸಮರ್ಥಿಸುತ್ತವೆ.

2014ರ ಅಕ್ಟೋಬರ್ ತಿಂಗಳಿನಿಂದ ಕಚ್ಚಾ ತೈಲದ ಬೆಲೆ ಇಳಿಯುತ್ತಿದೆ. ಆದರೂ, ಹದಿನೈದು ತಿಂಗಳ ಈ ಅವಧಿಯಲ್ಲಿ ಏಳು ಬಾರಿ ಕೇಂದ್ರ ಸರ್ಕಾರ ಪೆಟ್ರೋಲ್–ಡೀಸೆಲ್‌ನ ಮಾರಾಟದ ಮೇಲೆ ಎಕ್ಸೈಸ್ ಡ್ಯೂಟಿ(ಸುಂಕ) ಹೆಚ್ಚಿಸಿದೆ.

ಅಂತರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆಗಳ ಇಳಿಕೆಯ ಪ್ರಯೋಜನವನ್ನು ಎಲ್ಲಾ ದೇಶಗಳೂ ತಮ್ಮ ಜನರಿಗೆ ವರ್ಗಾಯಿಸಿವೆ ಆದರೆ, ಭಾರತದಲ್ಲಿ, ಸರ್ಕಾರ ಬೆಲೆ ಏರಿಕೆಮಾಡಿ ಅದರ ಭಾರವನ್ನು ಜನರ ಮೇಲೆ ಹೇರಿದೆ. ಒಂದು ಲೀಟರ್ ಕಚ್ಚಾ ತೈಲದ ಬೆಲೆ(ಸುಮಾರು 12.50 ರೂ) ಒಂದು ಲೀಟರ್ ಬಾಟಲ್ ನೀರಿನ ಬೆಲೆಗಿಂತ ಕಡಿಮೆಯಾಗಿದೆ. ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಸ್ವಲ್ಪವಾದರೂ ಪರಿಹಾರ ದೊರೆಯಬೇಕಾದರೆ, ಪ್ರತಿ ಲೀಟರ್ ಪೆಟ್ರೋಲ್/ಡೀಸೆಲ್‌ನ ಬೆಲೆಗಳನ್ನು, ಕೊನೆಯಪಕ್ಷ, 25 ರೂಪಾಯಿಗಳಷ್ಟಾದರೂ ಇಳಿಸಬೇಕಿತ್ತು.

ರೋಹಿತ್ ಕೊಲೆಗಡುಕರನ್ನು ಬಂಧಿಸಿ ..... ಪುಟ 10 ರಿಂದ

ನಾಯಕ್, ಪ್ರೊ.ಭೂಮಿಗೌಡ, ದಸಂಸ ಹಿರಿಯ ಮುಖಂಡ ಎಂ.ದೇವುದಾಸ್, ಪಿಯುಸಿಎಲ್ ಹಿರಿಯ ಮುಖಂಡ ಪಿ.ಬಿ.ಡೇಸಾ, ಡಿವೈಎಫ್‌ಐ ರಾಜ್ಯಾಧ್ಯ ಕ್ಷ ಮುನೀರ್ ಕಾಟಿಪಳ್ಳ, ಸಮುದಾಯದ ವಾಸುದೇವ ಉಚ್ಚಿಲ್, ದಲಿತ ಹಕ್ಕುಗಳ ಸಮಿತಿಯ ಲಿಂಗಪ್ಪ ನಂತೂರು ಮಾತನಾಡಿದರು. ಪ್ರಗತಿಪರ ಚಿಂತಕದ ವೇದಿಕೆಯ ಐ.ಎ.ಪ್ರಸನ್ನ, ಪ್ರೊ.ನರಸಿಂಹ ಮೂರ್ತಿ, ಮಕ್ಕಳ ಹಕ್ಕುಗಳ ಸಂಘಟಕ ರೆನ್ನಿಡಿಸೋಜ, ಕಿರುಚಿತ್ರ ನಿರ್ದೇಶಕ ನಟೇಶ್ ಉಳ್ಳಾಲ್, ಗಾಯಕ ಮಣಿ ನಾಲ್ಕೂರು, ಎಸ್‌ಎಫ್‌ಐ ದ.ಕ.ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್ ಕಾರ್ಯದರ್ಶಿ ಚರಣ್ ಪಂಜಿಮೊಗರು, ಡಿವೈಎಫ್‌ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಲಬುರಗಿ ಜಿಲ್ಲೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಜೆಎಂಎಸ್ ಮುಖಂಡರಾದ ಕೆ.ನೀಲಾ, ಸಮುದಾಯದ ರಾಜ್ಯ ಅಧ್ಯಕ್ಷರಾದ ಆರ್.ಕೆ.ಹುಡ್ಗಿ ಸೇರಿದಂತೆ, ಹಲವರು ಭಾಗವಹಿಸಿದ್ದರು ಮತ್ತು ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಿದರು.

ಶಿವಮೊಗ್ಗದ ಕುವೆಂಪು ವಿ.ವಿ,ಯ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು ಮತ್ತು ವಿ.ವಿ. ಕುಲಪತಿಗಳಿಗೆ ಮನವಿ ಸಲ್ಲಿಸಿದರು.

ಇದಲ್ಲದೆ ರಾಜ್ಯದ ವಿವಿದ ಕಡೆಗಳಲ್ಲಿ ವಿದ್ಯಾರ್ಥಿಗಳು, ಪ್ರಗತಿಪರರು, ಸಾಹಿತಿಗಳು, ಕಲಾವಿದರು ಸೇರಿದಂತೆ ಹಲವಾರು ಪ್ರತಿಭಟನೆಗಳನ್ನು ನಡೆಸಿದ್ದಾರೆ.



ರಾಜ್ಯಗಳ ಸುತ್ತ

ವಿಶ್ವಾಸ್

ಕೈಗಾರಿಕೆ ಮತ್ತು ಉದ್ಯೋಗಕ್ಕಾಗಿ ಪ.ಬಂಗಾಳದಲ್ಲಿ ಜಾಥಾ



"ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು ಮತ್ತು ಉದ್ಯೋಗಳನ್ನು ಸೃಷ್ಟಿಸಬೇಕು" ಎಂಬ ಪ್ರಮುಖ ಘೋಷಣೆಯೊಂದಿಗೆ ಪಶ್ಚಿಮ ಬಂಗಾಳದ ಸಿಂಗೂರ್‌ನಿಂದ ಸಾಲ್‌ಬೋನಿ ವರೆಗೆ ಒಂದು ವಾರದ ಜಾಥಾ ನಡೆಯಿತು. ಜನವರಿ 16ರಂದು ಸಿಂಗೂರ್‌ನಲ್ಲಿ ಆರಂಭವಾದ ಜಾಥಾ 22ರಂದು ಸಾಲ್‌ಬೋನಿಯಲ್ಲಿ ಮುಕ್ತಾಯವಾಯಿತು. ಬಂಗಾಳ ಸಾಮೂಹಿಕ ಸಂಘಟನೆಗಳ ವೇದಿಕೆ ಕರೆ ನೀಡಿದ್ದ ಜಾಥಾದಲ್ಲಿ ಸಾವಿರಾರು ಜನರು ಉತ್ಸಾಹದಿಂದ ಭಾಗವಹಿಸಿದ್ದರು. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎನ್ನುವಂತೆ ಮಧ್ಯದಲ್ಲಿ ಹಲವು ಜಾಥಾಗಳು ಸೇರಿಕೊಂಡು ಜನಸಾಗರವೇ ಭಾಗವಹಿಸಿತು. ಇದಕ್ಕೆ ಸಮಾನಾಂತರವಾಗಿ ಬಿಷ್ಣುಪುರ ಮತ್ತು ಹಾಲ್ದಿಯಾದಿಂದ ಆರಂಭವಾದ ಜಾಥಾಗಳೂ ಸಾಲ್‌ಬೋನಿ ಸೇರಿದವು. 414 ಕಿಲೋಮೀಟರ್ ಉದ್ದದ ಜಾಥಾ 15 ಅಂಶಗಳ ಹಕ್ಕೊತ್ತಾಯಗಳನ್ನು ಮುಂದಿಟ್ಟುಕೊಂಡಿದ್ದು, ಜಾಥಾದಲ್ಲಿ ಲಕ್ಷಾಂತರ ಜನ ಭಾಗವಹಿಸಿದರು. ಇದರ ಜತೆಗೆ 294 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಥಳೀಯ ಜಾಥಾಗಳು ನಡೆದವು. ಕೆಲವು ಕಡೆ ಜಾಥಾದ ಮೇಲೆ ತೃಣಮೂಲ ಗೂಂಡಾಗಳು ದಾಳಿಯನ್ನೂ ಮಾಡಿದರು. ಆದರೂ ಅವರ ದಾಳಿ ಹಿಮ್ಮೆಟ್ಟಿಸಿ ಜಾಥಾಗಳು ಮುಂದುವರೆದವು. ಎಡ ಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಹಲವು ನಾಯಕರು ವಿವಿದೆಡೆ ಜಾಥಾದಲ್ಲಿ ಭಾಗವಹಿಸಿದರು.

ಟಾಟಾ ಕಾರ್ ಫ್ಯಾಕ್ಟರಿ ಸ್ಥಾಪನೆ ವಿರುದ್ಧ ಅರಾಜಕ ಚಳವಳಿ ನಡೆದ ಸಿಂಗೂರ್ ಅನ್ನು ಜಾಥಾದ ಆರಂಭಿಕ ಸ್ಥಳವನ್ನಾಗಿ ಆಯ್ದುಕೊಳ್ಳಲಾಗಿತ್ತು. ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಐ (ಎಂ) ನಾಯಕ ಬುದ್ಧದೇವ್ ಭಟ್ಟಾಚಾರ್ಯ ಸಿಂಗೂರ್ ಜಾಥಾವನ್ನು ಉದ್ಘಾಟಿಸಿದರು. ಟಿಎಂಸಿ ಆಡಳಿತದಲ್ಲಿ ಹೇಳಿಕೊಳ್ಳುವಂಥ ಯಾವುದೇ ಹೊಸ ಕೈಗಾರಿಕೆಗಳು ಸ್ಥಾಪನೆ ಆಗದಿರುವುದರಿಂದ ಪಶ್ಚಿಮ ಬಂಗಾಳದಲ್ಲಿನ ಕೈಗಾರಿಕೆ ರಂಗಕ್ಕೆ ಕತ್ತಲು ಆವರಿಸಿದೆ. ಹೊಸ ಕೈಗಾರಿಕೆಗಳು ಬರುವ ಬದಲು ಅನೇಕ ಕೈಗಾರಿಕೆ ಘಟಕಗಳು ಮುಚ್ಚಿಹೋಗಿವೆ. ಅನೇಕ ಕೈಗಾರಿಕೆಗಳು ರಾಜ್ಯವನ್ನು ತೊರೆದು ಬೇರೆ ರಾಜ್ಯಗಳಿಗೆ ಹೋಗಿವೆ. ಚಹಾ ಮತ್ತು ಸೆಣಬಿನಂಥ ಸಾಂಪ್ರದಾಯಿಕ ಕೈಗಾರಿಕೆಗಳು ಆಳವಾದ ಬಿಕ್ಕಟ್ಟಿಗೆ ಸಿಲುಕಿವೆ. ಇದರಿಂದಾಗಿ ಉದ್ಯೋಗ ಸೃಷ್ಟಿಯಲ್ಲಿ ಗಂಭೀರ ಬಿಕ್ಕಟ್ಟು ಉಂಟಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಯುವಜನರ ಭವಿಷ್ಯ ಮಂಕಾಗಿದೆ. ಈ ಎಲ್ಲಾ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ ಜನಜಾಗೃತಿ ಮೂಡಿಸಲು ಜಾಥಾವನ್ನು ಆಯೋಜಿಸಲಾಗಿತ್ತು.

ಟಿಎಂಸಿಯ ಅರಾಜಕವಾದಿ ಚಳವಳಿ, ದಬ್ಬಾಳಿಕೆಯ ಎಂಟು ವರ್ಷಗಳ ನಂತರ ಇದೇ ಮೊದಲ ಬಾರಿಗೆ ಸಿಂಗೂರ್‌ಗೆ ಭೇಟಿ ಕೊಟ್ಟ ಕಾ. ಭಟ್ಟಾಚಾರ್ಯ, ತೃಣಮೂಲ ಕಾಂಗ್ರೆಸ್‌ನ ಜನವಿರೋಧಿ ರಾಜಕೀಯವನ್ನು ಬಯಲು ಮಾಡಿದರು.

"ಸಿಂಗೂರ್‌ಗೆ ಹೋಗಬೇಕೋ ಬೇಡವೋ ಎಂದು ತುಂಬಾ ಯೋಚನೆ ಮಾಡಿದೆ. ಆದರೆ ಈ ಕಾಲಘಟ್ಟದಲ್ಲಿ ಜನರಿಗೆ ಏನನ್ನಾದರೂ ಹೇಳಲೇಬೇಕು ಎಂದೆನಿಸಿತು. ಹಾಗಾಗಿ ಬಂದೆ" ಎಂದು ನುಡಿದರು.

"ಪ್ರತಿ ದಿನ ಒಂದಲ್ಲ ಒಂದು ಹಬ್ಬ ನಡೆಯುತ್ತದೆ. ನಿರುದ್ಯೋಗಿಗಳು ಅಲ್ಲಿ ಮುರಿ ಹಾಗೂ ತೇಲ್‌ಭಾಜ ಖಾದ್ಯಗಳನ್ನು ತಯಾರಿಸಬೇಕು" ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿರುವುದನ್ನು ಪ್ರಸ್ತಾಪಿಸಿದ ಭಟ್ಟಾಚಾರ್ಯ, "ನಿರುದ್ಯೋಗಿಗಳನ್ನು ನೀವು ಅಣಕಿಸುತ್ತಿದ್ದೀರಾ?" ಎಂದು ಪ್ರಶ್ನಿಸಿದರು. "ಇದು ಹೀಗೆಯೇ ಮುಂದುವರಿಯುವುದಿಲ್ಲ. ಕಾಲಚಕ್ರ ಉರುಳುತ್ತಿದೆ" ಎಂದು ಆಶಾವಾದದ ನುಡಿಗಳನ್ನಾಡಿದರು.

ಕೈಗಾರಿಕೀಕರಣದ ಮೂಲಕ ಮಾತ್ರವೇ ರಾಜ್ಯವನ್ನು ಪುನರುಜ್ಜೀವನಗೊಳಿಸಲು ಸಾಧ್ಯ ಎಂದು ಉದ್ಘಾಟನಾ ಭಾಷಣದಲ್ಲಿ ಭಟ್ಟಾಚಾರ್ಜಿ ಅಭಿಪ್ರಾಯಪಟ್ಟರು. ಕೃಷಿಯ ಅಭಿವೃದ್ಧಿಯೊಂದಿಗೆ ಕೈಗಾರಿಕೆಗಳು ಉದ್ಯೋಗಗಳನ್ನು ಸೃಷ್ಟಿಸಬಲ್ಲವು ಎಂದರು. ಅವನತಿಯನ್ನು ತಡೆದು ರಾಜ್ಯವನ್ನು ಮರುನಿರ್ಮಾಣ ಮಾಡಲು ಎಡಪಂಥೀಯರಿಗೆ ಮಾತ್ರವೇ ಸಾಧ್ಯ ಎಂದು ಅವರು ಘೋಷಿಸಿದರು.

"ನ್ಯಾನೋ ಕಾರ್ ಫ್ಯಾಕ್ಟರಿ ಇಲ್ಲಿ (ಸಿಂಗೂರ್) ಸ್ಥಾಪನೆ ಆಗಿದ್ದಿದ್ದರೆ ಸಿಂಗೂರ್‌ನ ಚಿತ್ರಣವೇ ಬದಲಾಗಿರುತ್ತಿತ್ತು. ಆದರೆ ಇಲ್ಲಿ ಈಗ ಕತ್ತಲೆ ಮಾತ್ರವೇ ಉಳಿದಿದೆ" ಎಂದು ಅವರು ಹೇಳಿದರು.

ಕೃಷಿಯೊಂದರಿಂದಲೇ ಅಭಿವೃದ್ಧಿ ಸಾಧ್ಯವಿಲ್ಲ. ಸಾವಿರಾರು ಯುವಜನರಿಗೆ ಉದ್ಯೋಗ ಸಿಗಬೇಕಾದರೆ ಕೈಗಾರಿಕೆಗಳ ಸ್ಥಾಪನೆ ಅಗತ್ಯ ಎಂದವರು ಪ್ರತಿಪಾದಿಸಿದರು.

ಟಿಎಂಸಿ ಸರಕಾರದ ಆಷಾಢಭೂತಿತನವನ್ನು ತರಾಟೆಗೆ ತೆಗೆದುಕೊಂಡ ಭಟ್ಟಾಚಾರ್ಯ, "ಈ ಮಾ-ಮಾಟಿ-ಮಾನುಷ್ (ತಾಯಿ-ಮಣ್ಣು-ಮನುಷ್ಯ) ನಾಟಕವನ್ನು ಇನ್ನಷ್ಟು ಹೆಚ್ಚು ಕಾಲ ಮುಂದುವರಿಯಲು ಬಿಡಲಾಗದು" ಎಂದವರು ನುಡಿದರು. "ನಾವು ಬಂಗಾಳವನ್ನು ರಕ್ಷಿಸುತ್ತೇವೆ" ಎಂದು ಘೋಷಿಸಿದರು.

ರಾಜ್ಯವು ನರಕದ ಕೂಪವಾಗಿ ಪರಿಣಮಿಸಿದೆ. ಅಭಿವೃದ್ಧಿಯಲ್ಲಿ ಭಾರಿ ಹಿಂದುಳಿದಿದೆ ಎಂದರು.

ಶ್ಯಾಮಲ್ ಚಕ್ರವರ್ತಿ ಮತ್ತಿತರ ಎಡರಂಗದ ಹಿರಿಯ ಮುಖಂಡರು ಮಾತನಾಡಿ ಟಿಎಂಸಿಯ ದುರಾಡಳಿತವನ್ನು ಕೊನೆಗಾಣಿಸಲು ಧೈರ್ಯದಿಂದ ಮುಂದೆ ಬನ್ನಿ ಎಂದು ರಾಜ್ಯದ ಜನರಿಗೆ ಕರೆ ನೀಡಿದರು.

ಸಾಲ್‌ಬೋನಿಯಲ್ಲಿ 35 ಸಾವಿರ ಕೋಟಿ ರೂಪಾಯಿ ಬಂಡವಾಳದೊಂದಿಗೆ ಉಕ್ಕು ಕಾರ್ಖಾನೆ ಸ್ಥಾಪಿಸುವುದಾಗಿ ಜೆಎಸ್‌ಡಬ್ಲ್ಯು ಗ್ರೂಪ್ ಆಶ್ವಾಸನೆ ನೀಡಿರುವ ಹಿನ್ನೆಲೆಯಲ್ಲಿ ಜಾಥಾದ ಸಮಾರೋಪಕ್ಕಾಗಿ ಆ ಜಾಗವನ್ನು ನಿಗದಿಪಡಿಸಲಾಗಿತ್ತು. ವಾಸ್ತವವಾಗಿ ರಾಜ್ಯ ಸರಕಾರ ಮನಸ್ಸು ಮಾಡಿದ್ದರೆ ಈ ಫ್ಯಾಕ್ಟರಿ ಅದಾಗಲೇ ಸ್ಥಾಪನೆ ಆಗಬೇಕಿತ್ತು. ಆದರೆ ಹೆಚ್ಚಿನ ಪ್ರಗತಿಯೇನೂ ಸಾಧನೆ ಆಗಿಲ್ಲ. ●

ಅಸ್ಸಾಂ ಸೆಣಬು ಬೆಳೆಗಾರರ ಐತಿಹಾಸಿಕ ಸಮಾವೇಶ

ಅಸ್ಸಾಂ ರಾಜ್ಯ ಕಿಸಾನ್ ಸಭಾದ ಉಪಕ್ರಮದ ಫಲವಾಗಿ ಸೆಣಬು ಬೆಳೆಯುವ ರೈತರ ರಾಜ್ಯಮಟ್ಟದ ಪ್ರಪ್ರಥಮ ಸಮಾವೇಶ ಬಾರಾಪೇಟಾದ ಕೊಲ್ಗಾಚಿಯಾದಲ್ಲಿ ಡಿಸೆಂಬರ್ 13 ಮತ್ತು 14ರಂದು ನಡೆಯಿತು. ಸಮಾವೇಶದ ಅಂಗವಾಗಿ 13ರಂದು ನಡೆದ ಬಹಿರಂಗ ಅಧಿವೇಶನದಲ್ಲಿ ಸಾವಿರಾರು ಸೆಣಬು ಬೆಳೆಗಾರರು ಸೇರಿದಂತೆ ಸುಮಾರು ಮೂರುಸಾವಿರ ಜನರು ಭಾಗವಹಿಸಿದ್ದರು.

ಗ್ರೇಟರ್ ಕೊಲ್ಗಾಚಿಯಾ ಪ್ರದೇಶ ಒಂದೊಮ್ಮೆ ಸೆಣಬು ಬೆಳೆಯ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿತ್ತು. ಅಲ್ಲಿನ ಮಣ್ಣು ಸೆಣಬು ಬೆಳೆಗೆ ಪ್ರಶಸ್ತವಾಗಿತ್ತು. ಆದರೆ, ಬೆಳೆಗಾರರು ತಮ್ಮ ಬೆಳೆಗೆ ನ್ಯಾಯಸಮ್ಮತ ಬೆಲೆ ಸಿಗದಿರುವುದರಿಂದ ಅವರಲ್ಲಿ ಬಹಳಷ್ಟು ಮಂದಿ ಬೇರೆ ಬೆಳೆಗಳನ್ನು ಬೆಳೆಯಲು ಮುಂದಾಗಿದ್ದರು. ಆದರೂ ಇನ್ನೂ ಕೆಲವು ಪ್ರದೇಶಗಳಲ್ಲಿನ ಮಣ್ಣಿನ ಗುಣ ಹೇಗಿದೆಯೆಂದರೆ ರೈತರು ಬಯಸಿದರೂ ಸೆಣಬು ಬಿಟ್ಟರೆ ಬೇರೆ ಬೆಳೆಯ ಕೃಷಿ ಮಾಡಲು ಸಾಧ್ಯವಿಲ್ಲವಾಗಿದೆ. ಹೀಗಾಗಿ ಭಾರೀ ನಷ್ಟ ಆಗುತ್ತಿದ್ದರೂ ಸಾಂಪ್ರದಾಯಿಕ ಸೆಣಬು ಬೆಳೆಯನ್ನೇ ಅವರು ಅವಲಂಬಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅಸ್ಸಾಂ ರಾಜ್ಯ ಕಿಸಾನ್ ಸಭಾ ಸೆಣಬು ರೈತರ ಜ್ವಲಂತ ಸಮಸ್ಯೆಗಳನ್ನು ಕೈಗೆತ್ತಿಕೊಂಡಿದ್ದು ಅವರ ದಯನೀಯ ಸ್ಥಿತಿಯತ್ತ ಅಧಿಕಾರಗಳ ಗಮನ ಸೆಳೆಯುವ ಸಲುವಾಗಿ ಪ್ರಥಮ ಬಾರಿಗೆ ರಾಜ್ಯ ಮಟ್ಟದ ಸಮಾವೇಶವನ್ನು ಆಯೋಜಿಸಿತ್ತು.

ತ್ರಿಪುರಾದ ಅಲ್ಪಸಂಖ್ಯಾತರ ಕಲ್ಯಾಣ ಖಾತೆ ಸಚಿವ ಶಹೀದ್ ಚೌಧರಿ ಸಮಾವೇಶವನ್ನು ಉದ್ಘಾಟಿಸಿದರು.

ಹಿಂದಿನ ಕಾಂಗ್ರೆಸ್ ನೇತೃತ್ವದ ಸರಕಾರ ಮತ್ತು ಈಗಿನ ಬಿಜೆಪಿ ನೇತೃತ್ವದ ಸರಕಾರಗಳು ಒಂದೇ ಎಂದು ಹೇಳಿದ ಕಾ. ಚೌಧರಿ, ಅವು ಭಾರತೀಯ ಬಂಡವಾಳಶಾಹಿ ವರ್ಗದ ಅವಳಿ ಮಕ್ಕಳು ಇದ್ದಂತೆ ಎಂದು ವರ್ಣಿಸಿದರು. ಎರಡೂ ಸರಕಾರಗಳು ನವ-ಉದಾರವಾದಿ ಆರ್ಥಿಕ ನೀತಿಗಳನ್ನು ಅನುಸರಿಸುತ್ತವೆ. ಅದು ದೇಶದ ಜನಸಂಖ್ಯೆಯ 80 ಶೇಕಡಾದಷ್ಟು ಜನರಿಗೆ ಆರ್ಥಿಕ ವಿಮೋಚನೆಯನ್ನು ತಂದುಕೊಡುವಲ್ಲಿ ವಿಫಲವಾಗಿವೆ ಎಂದರು.

ದೇಶದ ಜನರು ಯುಪಿಎ ಸರಕಾರದ ಭ್ರಷ್ಟಾಚಾರ, ಹಗರಣಗಳು ಮತ್ತು ದುರಾಡಳಿತದಿಂದ ಬೇಸತ್ತ ಜನರು ನರೇಂದ್ರ ಮೋದಿಯವರ ಜೇನಿನಂಥ ಮಾತಿನಲ್ಲಿ ಪರ್ಯಾಯವನ್ನು ಕಂಡರು ಎಂದು ಚೌಧರಿ ಹೇಳಿದರು. ಆದರೆ, ಕಳೆದ 19 ತಿಂಗಳಲ್ಲಿ ಮೋದಿ ಸರಕಾರ ಜನಸಾಮಾನ್ಯರಿಗೆ ಅನುಕೂಲವಾಗುವಂಥ ಯಾವುದೇ ಗಮನಾರ್ಹ ಕೊಡುಗೆ ನೀಡುವಲ್ಲಿ ವಿಫಲವಾಗಿದೆ. ಅದಕ್ಕೆ ತದ್ವಿರುದ್ಧವಾಗಿ, ಕಾರ್ಪೊರೇಟ್ ವಲಯ ಮತ್ತು ದೇಶದ ದೊಡ್ಡ ಬಂಡವಾಳಶಾಹಿಗಳ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಎಲ್ಲಾ ನೀತಿಗಳನ್ನು ರೂಪಿಸಲಾಗುತ್ತಿದೆ ಎಂದು ಕಾಮ್ರೇಡ್ ಚೌಧರಿ ವಿಶ್ಲೇಷಿಸಿದರು.

ತ್ರಿಪುರಾದಲ್ಲಿ ಇತ್ತೀಚಿಗಿನ ನಗರ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಎಡರಂಗದ ಜಯಭೇರಿಯನ್ನು ಪ್ರಸ್ತಾಪಿಸಿದ ಅವರು, ರಾಜ್ಯದಲ್ಲಿ ಎಡರಂಗ ಸರಕಾರ ಅನುಷ್ಠಾನಕ್ಕೆ ತಂದ ಹಲವು ಜನಕಲ್ಯಾಣ ಯೋಜನೆಗಳನ್ನು ವಿವರಿಸಿದರು. ವಿಶೇಷವಾಗಿ ಶಿಕ್ಷಣ, ಆರೋಗ್ಯ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಶಾಂತಿಯುತ ಸಹಬಾಳ್ವೆ, ಎಲ್ಲಾ ನಾಗರಿಕರಿಗೆ ಆಹಾರ ಭದ್ರತೆ, ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ವೃದ್ಧಾಪ್ಯ ವೇತನ ಮೊದಲಾದ ಕ್ಷೇತ್ರಗಳಲ್ಲಿನ ರಾಜ್ಯ ಸರಕಾರದ ಸಾಧನೆಗಳನ್ನು ವಿವರಿಸಿದರು.

ದೇಶದ ಆರ್ಥಿಕತೆಯ ಬೆನ್ನೆಲುಬು ಆದ ರೈತರ ದಯನೀಯ ಸ್ಥಿತಿಯನ್ನು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಕಿಸಾನ್ ಸಭಾ ರಾಜ್ಯ ಕಾರ್ಯದರ್ಶಿ ಹಾಗೂ ಮಾಜಿ ಸಂಸತ್‌ಸದಸ್ಯ ಉದ್ಧವ್ ಬರ್ಮನ್ ಎಳೆಎಳೆಯಾಗಿ ಬಿಚ್ಚಿಟ್ಟರು. ದೇಶ ಮುಂದುವರಿಯಬೇಕಾದರೆ ರೈತರ ಕಲ್ಯಾನ ಆಗುವುದು ಅತ್ಯಗತ್ಯ ಎಂದವರು ಪ್ರತಿಪಾದಿಸಿದರು. ಆದರೆ ನಮ್ಮ ದೇಶದಲ್ಲಿ ಆ ಕೆಲಸ ಆಗುತ್ತಿಲ್ಲ ಎಂದರು. ಈಗಾಗಲೇ ಬಸವಳಿದ ರೈತ ಸಮೂಹದ ಮೇಲೆ ಮೋದಿ ಸರಕಾರ ಇನ್ನಷ್ಟು ದಾಲಿಗಳನ್ನು ಆರಂಭಿಸಿದೆ ಎಂದರು. ರೈತರ ಆತ್ಮಹತ್ಯೆ ಪ್ರಮಾಣ ಇತ್ತೀಚೆಗೆ ಹೆಚ್ಚಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಹಿರಿಯ ರೈತ ನೇತಾರ ಮತ್ತು ಜನಪ್ರಿಯ ಪ್ರೌಢಶಾಲೆಯ ನಿವೃತ್ತ ಪ್ರಿನ್ಸಿಪಾಲ್ ಮೊಯ್ನುಲ್ ಹಕ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಪ್ರತಿನಿಧಿ ಅಧಿವೇಶನದಲ್ಲಿ ವಿವಿಧ ಜಿಲ್ಲೆಗಳ ಸುಮಾರು 200 ರೈತರು ಭಾಗವಹಿಸಿದ್ದರು. ಕಿಸಾನ್‌ಸಭಾದ ಸೆಣಬು ಬೆಳೆಗಾರರ ವಿಭಾಗದ ಸಂಚಾಲಕ ವಿಪ್ಲವ್ ಮಜುಂದಾರ್ ಧ್ವಜಾರೋಹಣ ಮಾಡಿದರು.

ಪ್ರತಿನಿಧಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ವಿಪ್ಲವ್ ಮಜುಂದಾರ್ ಇಡೀ ದೇಶದಲ್ಲಿನ ಸೆಣಬು ಕೃಷಿಯ ವಿವರ ನೀಡಿದರು. ಸೆಣಬು ಕೃಷಿ ಮತ್ತು ಸೆಣಬು-ಆಧರಿತ ಉತ್ಪನ್ನಗಳ ವಿಚಾರದಲ್ಲಿ ಭಾರತ ಜಗತ್ತಿನಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ಹೇಳಿದರು. ಸೆಣಬು ಕೃಷಿಯಲ್ಲಿ ಜಗತ್ತಿನಲ್ಲಿ ಭಾರತ್ ಪಾಲು ಶೇಕಡಾ 57, ಅದೇ ರೀತಿ ಸೆಣಬು ಆಧರಿತ ಉತ್ಪನ್ನಗಳಲ್ಲಿ ಭಾರತದ ಪಾಲು ಶೇಕಡಾ 66 ಎಂದು ವಿವರಿಸಿದರು. ಹಾಗಿದ್ದರೂ ಆಂರಿಕ ಬೇಡಿಕೆಯನ್ನು ಪೂರೈಸುವ ಉದ್ದೇಶದಿಂದ ಭಾರತ ಇನ್ನೂ ಸೆಣಬನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿ ಇದೆ ಎಂದರು. ಲಭ್ಯ ಅಂಕಿ ಅಂಶಗಳ ಪ್ರಕಾರ, ಸೆಣಬನ್ನು ಆಮದು ಮಾಡಿಕೊಳ್ಳುವಲ್ಲೂ ಭಾರತ ನಂಬರ್ ಒನ್ ಸ್ಥಾನದಲ್ಲಿದೆ. ಭಾರತದ ಕೃಷಿ ಮತ್ತು ಕೃಷಿ ಆಧರಿತ ಕೈಗಾರಿಕೆಗಳಲ್ಲಿ ಸೆಣಬು ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪಶ್ಚಿಮ ಬಂಗಾಳ, ಬಿಹಾರ ಮತ್ತು ಅಸ್ಸಾಂನ ಸುಮಾರು ಶೇಕಡಾ 40ರಷ್ಟು ಕುಟುಂಬಗಳು ಸೆಣಬು ಕೃಷಿಯನ್ನು ಅವಲಂಬಿಸಿವೆ. ಸೆಣಬು ಕೈಗಾರಿಕೆಗಳಲ್ಲಿ 2.4 ಲಕ್ಷಕ್ಕಿಂತ ಹೆಚ್ಚಿನ ಕಾರ್ಮಿಕರು ತೊಡಗಿಸಿಕೊಂಡಿದ್ದಾರೆ. ಸಂಶೋಧನೆ ಮತ್ತು ಅಭಿವೃದ್ಧಿ ಸಂಬಂಧಿತ ಚಟುವಟಿಕೆಗಳಲ್ಲಿ 1.5 ಲಕ್ಷಕ್ಕಿಂತ ಹೆಚ್ಚು ಜನರು ಪರೋಕ್ಷವಾಗಿ ಸೆಣಬು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.

ಅಸ್ಸಾಂ ರಾಜ್ಯ ಕಿಸಾನ್ ಸಭಾ ಕಾರ್ಯದರ್ಶಿ ಟೇಕೇನ್ ದಾಸ್ ಮುಖ್ಯ ಗೊತ್ತುವಳಿಯನ್ನು ಮಂಡಿಸಿದರು. ಸೆಣಬು ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕೆ ಏಳು ಬೇಡಿಕೆಗಳು ಅದರಲ್ಲಿ ಇದ್ದವು.

ಪ್ರಮುಖ ಬೇಡಿಕೆಗಳು ಸೆಣಬು ಕೃಸಿ ಪರಿಕರಗಳು, ರಸಗೊಬ್ಬರ, ಕ್ರಿಮಿನಾಶಕಗಳು ಮೊದಲಾದವುಗಳನ್ನು ಸಬ್ಸಿಡಿ ಬೆಲೆಯಲ್ಲಿ ಪೂರೈಸುವುದು, ಎಂಎಸ್ ಸ್ವಾಮಿನಾಥನ್ ಸಮಿತಿಯ ಶಿಫಾರಸಿನಂತೆ ಕ್ವಿಂಟಾಲ್ ಸೆಣಬಿಗೆ 4000 ರೂಪಾಯಿ ಘೋಷಿಸುವುದು, ಇವೇ ಮೊದಲಾದವು ಸಮಾವೇಶದಲ್ಲಿ ಮಂಡಿಸಲಾದ ಪ್ರಮುಖ ಬೇಡಿಕೆಗಳು. ●

ಪ್ಯಾರಿಸ್ ..... ಪುಟ 08 ರಿಂದ

ಪ್ರಚಾರ ಮಾಡಲಾರಂಭಿಸಿತು. ಮೊದಲು ಮತ್ತು ಶೃಂಗಸಭೆಯಲ್ಲೂ ಈ ಒತ್ತಡಕ್ಕೆ ಚೀನಾ, ಭಾರತಗಳು ಬೇರೆ ಬೇರೆ ರೀತಿಯಲ್ಲಿ ಮಣಿದವು. ಶೃಂಗಸಭೆ ವಿಫಲವಾದರೆ ಅದು ತಮ್ಮ ಮೇಲೆ ಬರಬಾರದು ಎಂದು ಹೆಚ್ಚಿನ ಕಡಿತಗಳನ್ನು ಘೋಷಿಸಿದವು. ಅಮೆರಿಕ ಮತ್ತು ಇತರ ಕೈಗಾರೀಕೃತ ದೇಶಗಳ ಮೇಲೆ ಒಟ್ಟು ಚಾರಿತ್ರಿಕ ಅನಿಲ ಹೊರಸೂಸುವಿಕೆಗೆ ಸಮನಾದ ಮತ್ತು ಅಭಿವೃದ್ಧ ಹಂತದ ಕಾರಣಕ್ಕಾಗಿ ಅತ್ಯಂತ ಹೆಚ್ಚಿನ ಕಡಿತ ಹೇರುವ, ಪರಿಹಾರ–ದಂಡವಾಗಿ ಪರಿಸರ–ಸ್ನೇಹಿ ತಂತ್ರಜ್ಞಾನ ಬಂಡವಾಳಗಳನ್ನು ಉಚಿತವಾಗಿ ಕೊಡುವಂತೆ ಒತ್ತಾಯಿಸುವ ಗೋಜಿಗೆ ಹೋಗಲಿಲ್ಲ. ಭಾರತವಂತೂ ಎಲ್ಲಾ ಅಂತರ್ರಾಷ್ಟ್ರೀಯ ಮಾತುಕತೆಗಳಂತೆ ಹವಾಮಾನ ಬದಲಾವಣೆ ಮಾತುಕತೆಯಲ್ಲೂ ಅಮೆರಿಕದ ಹಿಂಬಾಲಕನಾಗಿರುವ ಕಳೆದ ಒಂದು ದಶಕದ ನೀತಿಯನ್ನು ಮುಂದುವರೆಸಿದೆ.

- ಅತ್ಯಂತ ಸಿನಿಕತನ ಪ್ರದರ್ಶಿಸಿ ಅಮೆರಿಕ ಅತ್ಯಂತ ಕಡಿಮೆ ಅಭಿವೃದ್ಧಿ ಹೊಂದಿದ ಮತ್ತು ಅತ್ಯಂತ ಹೆಚ್ಚಿನ ಅಪಾಯ ಎದುರಿಸುತಿರುವ ದ್ವೀಪ ದೇಶಗಳ ಕೂಟ ರಚಿಸಿ ತೀರಾ ಅಸಾಧ್ಯವಾದ 1.5 ಏರಿಕೆ ಗುರಿಗೆ ಒತ್ತಡ ಹಾಕಿತು. ಅವನ್ನು ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಂದ ಬೇರ್ಪಡಿಸಿತು. ಇನ್ನೊಂದು ಕಡೆ ಭಾರತ, ಚೀನಾ ಅತ್ಯಂತ ಹೆಚ್ಚಿನ ಅನಿಲ ಹೊರಸೂಸುವ ದೇಶಗಳು ಹೆಚ್ಚಿನ ಕಡಿತ ಮಾಡಬೇಕು ಎಂದು ಇತರ ಜಿ–77 ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಐಕ್ಯತೆ ಒಡೆದು, ಆ ದೇಶಗಳಿಂದ ತನ್ನ ಮೇಲೆ ಬರಬಹುದಾದ ಐಕ್ಯ ಒತ್ತಡವನ್ನು ತಡೆಯಿತು. ಭಾರತ, ಚೀನಾಗಳು ಅಮೆರಿಕದ ಈ ಹುನ್ನಾರಕ್ಕೆ ಪ್ರತಿಯಾಗಿ ಸಭೆಯ ಮೊದಲಾಗಲಿ ಸಭೆಯಲ್ಲಾಗಲಿ ಪ್ರತಿತಂತ್ರ ರೂಪಿಸಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಐಕ್ಯ ಒತ್ತಡ ತರಲು ಪ್ರಯತ್ನಿಸಲೂ ಇಲ್ಲ.
- ಆದರೆ ಅಮೆರಿಕ ಸ್ವತಃ ಚಾರಿತ್ರಿಕವಾಗಿ ಅತಿ ಹೆಚ್ಚಿನ ಮತ್ತು ಈಗಲೂ ಎರಡನೇ ಅತಿದೊಡ್ಡ ಅನಿಲ ಹೊರಸೂಸುವಿಕೆ ಇದ್ದರೂ, ಅದು 1990ರ ಮಟ್ಟದಿಂದ 2030ಕ್ಕೆ ಬರಿಯ ಶೇ. 9 ಕಡಿತ ಪ್ರಸ್ತಾವಿಸಿದೆ. ಇದೇ ಅವಧಿಯ ಯುರೋಕೂಟದ ಶೇ. 40 ಕಡಿತಕ್ಕೆ ಹೋಲಿಸಿದರೆ ಇದು ಜುಜುಬಿ ಕಡಿತ. ಅತಿದೊಡ್ಡ ಆರ್ಥಿಕವಾಗಿರುವ ಅಮೆರಿಕ ಪ್ರಸ್ತಾವಿಸಿರುವ ಕಡಿತ ಯುರೋಕೂಟ, ಜಪಾನ್, ಕೆನಡಾ, ಆಸ್ಟ್ರೇಲಿಯಾ ಒಪ್ಪಿಕೊಂಡಿರುವ ಕಡಿತದ ಅರ್ಧದಷ್ಟೂ ಇಲ್ಲ.
- ಒಟ್ಟಾರೆಯಾಗಿ ಅಮೆರಿಕ ತನ್ನ ವ್ಯೂಹಾತ್ಮಕ ಗುರಿಯನ್ನು ಸಾಧಿಸಿದೆ. ●

ಎಲ್ಲರೂ ಖುಶ್ ಯಾಕೆ ?

ಯಾವುದೇ ಒಪ್ಪಂದ ಆಗದೇ ಶೃಂಗಸಭೆ ಪೂರ್ಣ ವಿಫಲವಾಗುವ ಭೀತಿ ಇದ್ದು ಏನೋ ಒಪ್ಪಂದ ಆಯಿತು. ಕನಿಷ್ಠ ಯಾವುದೇ ಕಾರಣಕ್ಕೆ ತಮ್ಮ ಮೇಲೆ ಆಪಾದನೆ ಬಂದಿಲ್ಲ ಎಂದೂ ಎಲ್ಲಾ ಸರಕಾರಗಳೂ ಖುಶ್ ಆಗಿವೆ. ಅಮೆರಿಕದ ಸರಕಾರ ಮತ್ತು ಆಳುವ ವರ್ಗಗಳು ತಮ್ಮ ಗುರಿ ಸಾಧಿಸಿದ್ದರಿಂದ ಸ್ವಾಭಾವಿಕವಾಗಿಯೇ ಖುಶ್ ಆಗಿವೆ. ಅಮೆರಿಕದ ಹಿಂಬಾಲಕವಾಗಿರುವ ಅವು ಅಮೆರಿಕ ಖುಶ್ ಆದರೆ ಅವೂ ಖುಶ್. ಭಾರತ ಮತ್ತು ಚೀನಾ ಸರಕಾರಗಳು ತಮ್ಮ ಮೇಲೆ ಯಾವುದೇ ಆಪಾದನೆ ಬರಲಿಲ್ಲ ಎಂದು ಖುಶ್ ಆಗಿವೆ. ಸಣ್ಣ ದ್ವೀಪ ದೇಶಗಳು ಹಾಗೂ ಅತ್ಯಂತ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳು 1.5 ಡಿಗ್ರಿ ತಾಪಮಾನ ಏರಿಕೆ ಗುರಿ ಅಂಗೀಕಾರವಾಯಿತು ಎಂದು ಖುಶ್ ಆಗಿವೆ. ಅಮೆರಿಕ ಮತ್ತು ಇತರ ಅಭಿವೃದ್ಧ ದೇಶಗಳದ್ದು ಬಿಟ್ಟರೆ ಉಳಿದವರದ್ದು ವಾಸ್ತವ ಖುಶಿ ಅಲ್ಲ. ಹುಸಿ ಖುಶಿ.

ಮನುಕುಲದ ಅಸ್ತಿತ್ವಕ್ಕೆ ತಾಪಮಾನ ಏರಿಕೆ ಒಡ್ಡುವ ಗಂಭೀರ ಅಪಾಯಗಳ ಬಗ್ಗೆ, ಹಾಗೂ ಅವುಗಳನ್ನು ತಡೆಯುವ ಕ್ರಮಗಳ ತುರ್ತು ಹಾಗೂ ಸಂಕೀರ್ಣತೆಯ ಬಗ್ಗೆ ಅರಿವು–ಕಾಳಜಿ ಇರುವ ಜಗತ್ತಿನ ವಿಜ್ಞಾನಿಗಳು, ಪರಿಸರವಾದಿಗಳು, ಜನ ಸಂಘಟನೆಗಳು, ಪ್ರಗತಿಪರ ವ್ಯಕ್ತಿಗಳು/ಸಂಘಟನೆಗಳು, ರಾಜಕೀಯ ಪಕ್ಷಗಳು ಮಾತ್ರ ಖುಶ್ ಆಗಿಲ್ಲ. ಅವು ಪರಿಸರ–ಸ್ನೇಹಿ ಮತ್ತು ನಮ್ಮ ಭೂಮಿ ಉಳಿಸಿಕೊಳ್ಳುವ ಅಭಿವೃದ್ಧಿಯ ಪಥದ ಅನ್ವೇಷಣೆಯ ಪ್ರಕ್ರಿಯೆಗೆ ಇದೊಂದು ಹಿನ್ನಡೆ, ಬಿಟ್ಟುಕೊಟ್ಟ ಅವಕಾಶ ಎಂದು ಭಾವಿಸುತ್ತವೆ. ●

ಭಾರತದ ನಿಲುವು–ಬದ್ಧತೆ

- ಭಾರತ ಅನಿಲ ಸೂಸುವಿಕೆಯ ಜಿಡಿಪಿ ತೀವ್ರತೆ (ಅನಿಲ ಸೂಸುವಿಕೆಯನ್ನು ಜಿಡಿಪಿಯಿಂದ ಭಾಗಿಸಿದರೆ ಬರುವ ಸಂಖ್ಯೆ)ಯನ್ನು 2005ರ ಮಟ್ಟದಿಂದ ಶೇ. 35ರಷ್ಟು ಕಡಿತಗೊಳಿಸುವುದಕ್ಕೆ ಬದ್ಧವಾಗಿದೆ ಎಂದು ಶೃಂಗಸಭೆಗೆ ತಿಳಿಸಿದೆ.
- 2030ರ ಹೊತ್ತಿಗೆ ಕಾರ್ಬನ್–ಆಧಾರಿತವಲ್ಲದ ವಿದ್ಯುತ್ ಉತ್ಪಾದನೆ (ಸೌರ, ಪವನ, ಇತ್ಯಾದಿ) ಯನ್ನು ಶೇ. 40 ಕ್ಕೆ ಏರಿಸಲಾಗುವುದು. ಸೌರ, ಪವನ ಮೂಲಗಳಿಂದ 1.75 ಲಕ್ಷ, ಜಲ ಮತ್ತು ಅಣುಶಕ್ತಿಗಳಿಂದ 63 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುವುದಕ್ಕೆ ಭಾರತ ಬದ್ಧವಾಗಿದೆ. ಇದರಲ್ಲಿ ಜಲ ಮತ್ತು ಅಣುಶಕ್ತಿಗಳ ಗುರಿ ಅವಕ್ಕಿರುವ ಸಾಮಾಜಿಕ–ಪರಿಸರ ಅಪಾಯ ಹಾಗೂ ವೆಚ್ಚಗಳ ದೃಷ್ಟಿಯಿಂದ ಕಾರ್ಯಸಾಧ್ಯ ಗುರಿ ಅಲ್ಲ ಎನ್ನಲಾಗಿದೆ.
- ಶೇ. 33 ಅರಣ್ಯ ವಿಸ್ತಾರದ ಗುರಿ ಸಹ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮುಂತಾದ ಪರಿಸರ–ನಾಶ ಮಾಡುವ ಚಟುವಟಿಕೆಗೆ ಅನುಮತಿ ಕೊಡಲು ಅರಣ್ಯ ಕಾನೂನುಗಳಿಗೆ ಮತ್ತು ಇತರ ನಿಯಮಗಳಿಗೆ ಮಾಡಲಾಗುತ್ತಿರುವ ತಿದ್ದುಪಡಿಗಳ ಹಿನ್ನೆಲೆಯಲ್ಲಿ ಈ ಗುರಿ ಸಹ ಕಾರ್ಯಸಾಧ್ಯ ಅಲ್ಲ ಎನ್ನಲಾಗಿದೆ.
- ಅಭಿವೃದ್ಧ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಶಕ್ತಿ ಲಭ್ಯತೆ/ಬಳಕೆ, ತಲಾ ಅನಿಲ ಸೂಸುವಿಕೆಯ ಪ್ರಮಾಣದಲ್ಲಿ ಇರುವ ಅಗಾಧ ಅಸಮಾನತೆ ಬಗ್ಗೆ (ಸಕಾರಣವಾಗಿಯೇ) ಟೀಕೆ ಮಾಡುವ ಭಾರತ ಸರಕಾರ, ದೇಶದೊಳಗೆ ಉಳ್ಳ ಶೆ.10 ಮತ್ತು ಇತರ ಶೇ.90ರ ನಡುವೆ ಅಂತಹುದೇ ಅಸಮಾನತೆಗಳ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ.
- ಇಂತಹ ಅಸಮಾನತೆಗಳನ್ನು ಹೋಗಲಾಡಿಸಲು ಬಸ್/ರೈಲು ಮುಂತಾದ ಸಾಮೂಹಿಕ ಸಾಗಾಣಿಕೆ ಮೇಲೆ ಹೂಡಿಕೆ, ಖಾಸಗಿ ವಾಹನಗಳಿಗೆ ನಿರುತ್ತೇಜನ; ಸರಕು ಸಾಗಾಣಿಕೆಯ ರೈಲುವೇಕರಣ ಮುಂತಾದವುಗಳ ಬಗ್ಗೆ ಮೌನವಾಗಿದೆ.
- ಸಾಮಾಜಿಕ ಸಮಾನತೆ, ಪರಿಸರ ತಾಳಿಕೊಳ್ಳುವ ಬೆಳವಣಿಗೆಯ ಬದಲಿ ವ್ಯವಸ್ಥೆಯ ಅನ್ವೇಷಣೆ ಇಲ್ಲದೆ ಈ ಗುರಿಗಳನ್ನು ಮುಟ್ಟುವುದು ಸಾಧ್ಯವೇ? ●

ನಾಳಿನ ಕಾರ್ಯಕ್ರಮಗಳು

ಎಸ್.ಎಫ್.ಐ. ಅಖಿಲ ಭಾರತ ಸಮ್ಮೇಳನ
ಜನವರಿ 22–25, ಸೀಕರ್, ರಾಜಸ್ಥಾನ

ರೊಹಿತ್ ವೇಮುಲಾ ಅಖಿಲ ಭಾರತ ಪ್ರತಿಭಟನೆ
ಜನವರಿ 24, ಅ.ಭಾ. ದಲಿತ ಸಂಘಟನೆಗಳ ಕರೆ

ಕೇಂದ್ರಕಾರ್ಮಿಕ ಸಂಘಟನೆಗಳ ಪ್ರತಿಭಟನೆ
ಫೆಬ್ರುವರಿ 6, ಜಿಲ್ಲಾ ಕೇಂದ್ರಗಳಲ್ಲಿ

ಸ್ಕೀಂ ಕಾರ್ಮಿಕರ 24/48 ಗಂಟೆ ಪ್ರತಿಭಟನಾ ಧರಣಿ
ಫೆಬ್ರುವರಿ 6–7, ಸಂಸತ್ ಸದಸ್ಯರ ಕಚೇರಿ ಮುಂದೆ

30 ದಿನಗಳ ನವ–ಕೇರಳ ಜಾಥಾ



ಕಾಸರಗೋಡು ಜಿಲ್ಲೆಯ ಪುಟ್ಟ ಕರಾವಳಿ ಊರು ಉಪ್ಪಳ ಏಳು ಭಾಷೆಗಳನ್ನಾಡುವ ಜನರ ಬೀಡು: ಮಲಯಾಳಂ, ಕನ್ನಡ, ತುಳು, ಕೊಂಕಣಿ, ಉರ್ದು, ಬ್ಯಾರಿ ಮತ್ತು ಮರಾಠಿ ಭಾಷಿಕರು ಇಲ್ಲಿದ್ದಾರೆ.

ಅಭಿವೃದ್ಧಿ ಹೊಂದಿದ, ಜಾತ್ಯತೀತ ಮತ್ತು ಭ್ರಷ್ಟಾಚಾರ ಮುಕ್ತ ಹೊಸ ಕೇರಳವನ್ನು ಕಟ್ಟುವ ಅತುಲ ಆತ್ಮವಿಶ್ವಾಸದೊಂದಿಗೆ ನವ–ಕೇರಳ ಜಾಥಾ ಜನವರಿ 16ರಂದು ಕಾಸರಗೋಡು ಜಿಲ್ಲೆಯ ಉಪ್ಪಳದಲ್ಲಿ ಆರಂಭವಾಯಿತು. ಪಾಲಿಟ್‌ಬ್ಯೂರೊ ಸದಸ್ಯ ಪ್ರಕಾಶ್ ಕಾರಟ್, ಇನ್ನೊಬ್ಬ ಪಿಬಿ ಸದಸ್ಯ ಪಿನರಾಯಿ ವಿಜಯನ್ ಅವರಿಗೆ ಕೆಂಬಾವುಟವನ್ನು ಹಸ್ತಾಂತರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು.

30 ದಿನಗಳ ಕಾಲ ಸಂಚರಿಸಲಿರುವ ಜಾಥಾದಲ್ಲಿ ಪಾಲ್ಗೊಳ್ಳುವ ನಾಯಕರು ಮತ್ತು ಕಾರ್ಯಕರ್ತರನ್ನು ಬರಮಾಡಿಕೊಳ್ಳಲು ಸಾವಿರಾರು ಜನರು ನೆರೆದಿದ್ದರು. ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕರು ಜಾಥಾದಲ್ಲಿ ಪಾಲ್ಗೊಳ್ಳುವ ಕಾರ್ಯಕರ್ತರನ್ನು ವೇದಿಕೆಗೆ ಕರೆದುಕೊಂಡು ಬಂದರು. ಜಾಥಾ 30 ದಿನಗಳ ಕಾಲ ಕೇರಳದಾದ್ಯಂತ 2 ಸಾವಿರ ಕಿ.ಮೀ.ಕ್ಕೂ ಹೆಚ್ಚು ಸಂಚರಿಸಿ 14 ಜಿಲ್ಲೆಗಳಲ್ಲಿ 117 ಸಭೆಗಳನ್ನು ನಡೆಸಿ ಫೆಬ್ರವರಿ 14ರಂದು ಸಮಾರೋಪಗೊಳ್ಳಲಿದೆ. ಎಲ್ಲೆಡೆ ಜಾಥಾಕ್ಕೆ ಉತ್ತಮ ಸ್ಪಂದನ ದೊರಕಿದ್ದು ಭಾರೀ ದೊಡ್ಡ ಸಭೆಗಳಲ್ಲಿ ಜನ ಸಂಭ್ರಮದಿಂದ ಭಾಗವಹಿಸುತ್ತಿದ್ದಾರೆ

"ಈ ಜಾಥಾ ಜಾತ್ಯತೀತ ಕೇರಳ ಮತ್ತು ಭ್ರಷ್ಟಾಚಾರಮುಕ್ತ ಆಡಳಿತದ ಸಂದೇಶವನ್ನು ಸಾರಲಿದೆ" ಎಂದು ಜಾಥಾ ಉದ್ಘಾಟಿಸಿದ ಪ್ರಕಾಶ್ ಕಾರಟ್ ಹೇಳಿದರು. ಕಳೆದ ಐದು ವರ್ಷಗಳಲ್ಲಿ ಯುಡಿಎಫ್ ನೇತೃತ್ವದ ಸರಕಾರದ ಆಳ್ವಿಕೆಯಲ್ಲಿ ರಾಜ್ಯವು ಹಿನ್ನಡೆ ಕಂಡಿದೆ ಎಂದರು. ತೆಂಗಿನ ನಾರು, ಗೋಡಂಬಿ ಮತ್ತು ಕೈಮಗ್ಗ ಸೇರಿದಂತೆ ಎಲ್ಲಾ ಸಾಂಪ್ರದಾಯಿಕ ಕೈಗಾರಿಕೆಗಳು ನಿರ್ಲಕ್ಷದಿಂದಾಗಿ ಬಿಕ್ಕಟ್ಟನ್ನು ಎದುರಿಸುತ್ತಿವೆ ಎಂದರು.

ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್, ಪ್ರತಿಪಕ್ಷ ನಾಯಕ ವಿ.ಎಸ್. ಅಚ್ಯುತಾನಂದನ್ ಮತ್ತು ನವಕೇರಳ ಜಾಥಾದ ನಾಯಕ ಪಿಣರಾಯಿ ವಿಜಯನ್ ಮಾತನಾಡಿದರು. ಕೇಂದ್ರ ಸಮಿತಿ ಸದಸ್ಯ ಪಿ. ಕರುಣಾಕರನ್ ಅಧ್ಯಕ್ಷತೆ ವಹಿಸಿದ್ದರು. ●

ಮುಖ್ಯಮಂತ್ರಿಯವರೇ, ...
ಇನ್ನೂ ಕಾಲ ಮಿಂಚಿಲ್ಲ. ಮೇಲ್ಪಂಕ್ತಿಗೆ ಹೊರಗಡೆ ಹುಡುಕಬೇಕಿಲ್ಲ. ಕನಿಷ್ಟ ಕೃಷ್ಣ ಮಾರ್ಗವನ್ನಾದರೂ ತುಳಿಯಿರಿ. ಇಲ್ಲವಾದರೆ, ಆ ನಿಮ್ಮ ಬೋಳುಮಂಡೆ ಸಲಹೆಗಾರನ ಮಾತು ಕೇಳಿ ಸಮಾಜಘಾತುಕ ಶಕ್ತಿಗಳನ್ನು ಬೆಳೆಸುವ ಇಲ್ಲ-ಸಲ್ಲದ ಜಾತಿ ರಾಜಕೀಯವನ್ನು ಮುಂದುವರಿಸಿದ್ದೇ ಆದರೆ 2014ರ ಲೋಕಸಭೆ ಚುನಾವಣೆ, ತದನಂತರದ ಬಿಬಿಎಂಪಿ ಚುನಾವಣೆಯಲ್ಲಾದಂತೆ ಮುಂದಿನ ತಾಲೂಕು ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲೂ ಜನ ನಿಮ್ಮ ಸರ್ಕಾರದ ತಲೆಗೆ ಮಟ್ಟುತ್ತಾರೆ, ಜೋಕೆ!
(ಪ್ರತಾಪ ಸಿಂಹ ಅಂಕಣ ವಿಶ್ವವಾಣಿ)
ಭಟ್ಟರ ವಿಶ್ವವಾಣಿ ಮೊದಲ ದಿನವೇ ಬಟಾಬಯಲಾಗಿದೆ. ಬಲಪಂಥದ, ಕೋಮುಕ್ರಿಮಿಗಳ ನಿರ್ಲಜ್ಜ ಕರಪತ್ರವಾಗುವ ಎಲ್ಲಾ ಲಕ್ಷಣಗಳು ಕಾಣಿಸಿಕೊಂಡಿದೆ. ಸುಳ್ಳು ಸಿಂಹನ ಅಂಕಣ ಬರಹದ ಮೊದಲ ಕಂತಲ್ಲೇ ಎಲ್ಲಾ ಕಳಚಿ ಬೆತ್ತಲೆ ನಿಂತಿದೆ. ಪತ್ರಿಕೋದ್ಯಮ ಅಂದರೆ ನಿರ್ಲಜ್ಜತೆಯಲ್ಲ.

– *ಮುನೀರ್ ಕಾಟಿಪಳ್ಳ*

JANASHAKTHI KANNADA VARA PATRIKE JAN 31, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283





ಪ್ಯಾಲೆಸ್ತೀನ್ "ಎಂದೆಂದೂ ಧೃಢವಾಗಿರು"

ಎಂ.ಜಿ. ವೆಂಕಟೇಶ್

ಜನವರಿ 13ರಿಂದ 16ರವರೆಗೆ ನಡೆದ ಪ್ಯಾಲೆಸ್ತೀನ್ ಫ್ರೀಡಂ ಜಾತಾದ ಬೆಂಗಳೂರು ಅಭಿಯಾನದ ಅನುಭವವನ್ನು ದಾಖಲಿಸಲು ತೊಡಗಿದೆ. ಇಡಿಯಾಗಿದ್ದ ದೇಶ ಹಿಡಿಯಾಗಿದೆ. ಪ್ಯಾಲೆಸ್ತೀನ್ ಜನರ ನೋವು, ದುಃಖ, ಆಕ್ರೋಶ, ಸಿಟ್ಟು, ಕೆಚ್ಚೆದೆ, ದೃಢತೆ ಎಲ್ಲ ರೀತಿಯ ಕಲಾ ಪ್ರಕಾರಗಳಲ್ಲಿಯೂ ಅಭಿವ್ಯಕ್ತವಾಗುತ್ತದೆ. ಜಗತ್ತಿನ ಎಲ್ಲ ಸ್ವಾತಂತ್ರ ಅಥವಾ ವಿಮೋಚನಾ ಸಮರಗಳು ಒಂದು ನಿರ್ದಿಷ್ಟ, ಭೌಗೋಳಿಕ ಪ್ರದೇಶದಲ್ಲಿ ಅಥವಾ ಪ್ರದೇಶಕ್ಕಾಗಿ ನಡೆಯುತ್ತದೆ. ಇಲ್ಲಿ ಭೌಗೋಳಿಕ ನೆಲೆಯನ್ನು ಹಂತ ಹಂತವಾಗಿ ಕಳೆದುಕೊಂಡು ತಮ್ಮ ನಾಡಿನ ಅಸ್ತಿತ್ವವನ್ನೇ ಕಳೆಯುತ್ತಿರುವ ಅಮೇರಿಕಾ-ಪೋಷಿತ ಇಸ್ರೇಲಿ ದೌರ್ಜನ್ಯ ನೋಡುಗರ ಮನ ಕಲಕುತ್ತದೆ.

ಪ್ಯಾಲೆಸ್ತೀನ್ ಫ್ರೀಡಂ ಜಾತಾದ ಬೆಂಗಳೂರು ಅಭಿಯಾನ ವೈವಿಧ್ಯಮಯ ಅನುಭವವನ್ನು ಕೊಡುವಂತಹದಾಗಿತ್ತು. ಜನವರಿ 13ರಂದು ಚಿತ್ರಕಲಾ ಪರಿಷತ್ತಿನಲ್ಲಿ ಪ್ರಸಿದ್ಧ ರಂಗಕರ್ಮಿ ಎಂ.ಎಸ್. ಸತ್ಯು ಅವರಿಂದ ಉದ್ಘಾಟನೆ, ಕಬೀರ್ ದೋಹೆ ಗಾಯನ, ಸಮುದಾಯ ರೆಪರ್ಟರಿಯಿಂದ 'ಗೋಡೆಗೆ ಹೇಳಿದ ಕತೆ' ಬೀದಿ ನಾಟಕ, 'ಹಮೇಶಾ ಸಮಿದಾ'(ಎಂದೆಂದೂ ದೃಢವಾಗಿರು) ಹಿಂದಿ-ಅರೆಬಿಕ್ ನಾಟಕಗಳು ಇದ್ದವು. ಜಾಥಾದ ಜತೆ ಬಂದ ಫೋಟೊ, ಕಲಾಕೃತಿ ಪ್ರದರ್ಶನ ಮತ್ತು ಚಿತ್ರಕಲಾ ಪರಿಷತ್ತಿನ ವಿದ್ಯಾರ್ಥಿಗಳು ತಯಾರಿಸಿದ ಕಲಾಕೃತಿಗಳು ಇದ್ದವು.

ಮುಂದಿನ ಎರಡು ದಿನ ಐ.ಐ.ಎಚ್.ಎಸ್., ಐ.ಎಫ್.ಎ., ಸೈಂಟ್ ಜೋಸೆಫ್ ಕಾಲೇಜು, ರಂಗಶಂಕರ, ಪೀಣ್ಯ ಅಲ್ಯುಮಿನಿ ತೆರೆದ ರಂಗಮಂದಿರದಲ್ಲಿ ಇವನ್ನು ಪುನರಾವರ್ತಿಸಲಾಯಿತು. ಆ ಮೂಲಕ ರಂಗಾಸಕ್ತರು, ಕಲಾಸಕ್ತರು, ಪ್ಯಾಲೆಸ್ತೀನ್ ಬೆಂಬಲಿಗರು, ವಿದ್ಯಾರ್ಥಿಗಳು, ಕಾರ್ಮಿಕರು, ಆಸಕ್ತ ನಾಗರಿಕರುಗಳನ್ನು ದೊಡ್ಡ ಸಂಖ್ಯೆಯಲ್ಲಿ ಮುಟ್ಟುವುದು ಸಾಧ್ಯವಾಯಿತು. ಕೊನೆಯ ದಿನ (ಜ.16) ತಂಡದ ಮುಖ್ಯಸ್ಥರೊಂದಿಗೆ ದೀರ್ಘ ಸಂವಾದ ಇತ್ತು. ಜಾತಾದ ಮೊದಲು ಪ್ಯಾಲೆಸ್ತೀನ್ ಬುಕ್ ರೀಡಿಂಗ್, ಕವಿಗೋಷ್ಠಿ, ಫಿಲಂ ಪ್ರದರ್ಶನಗಳೂ ಇದ್ದವು. ಕವಿಗೋಷ್ಠಿಯಲ್ಲಿ ಓದಲಾದ ಪ್ಯಾಲೆಸ್ತೀನ್ ಮೇಲಿನ ಕವನಗಳ ಸಂಗ್ರಹ 'ರೋಷದ ಬಣ್ಣಗಳು' ಮತ್ತು 'ಪ್ಯಾಲೆಸ್ತೀನ್ ಪ್ರಶ್ನೆ-ನಿಮಗೆ ತಿಳಿದಿರಲಿ' ಎಂಬ (ಚಿಂತನ ಪುಸ್ತಕ ಪ್ರಕಟಿಸಿದ) ಎರಡು ಪುಸ್ತಕಗಳನ್ನೂ ಬಿಡುಗಡೆ ಮಾಡಲಾಯಿತು.

ತಂಡದ ಇಡೀ ಕಲಾಭಿವ್ಯಕ್ತಿಯಲ್ಲಿ ಅಭಿವ್ಯಕ್ತವಾಗುವುದು ನಿರಂತರ ಹೋರಾಟಕ್ಕೆ



ಬೇಕಾದ ಮನೋಭೂಮಿಕೆಯನ್ನು ಸಿದ್ಧಪಡಿಸುವ ಪ್ರಯತ್ನ. ಇಲ್ಲಿನ ಫ್ರೀಡಂ ಅಂದರೆ ಸ್ವಾತಂತ್ರ ಅಥವಾ ಬಿಡುಗಡೆ ಮಂಕಾದ ಸಾಧಾರಣ ಪದಗಳ ವ್ಯಾಪ್ತಿಗೆ ಮೀರಿರುತ್ತದೆ. ಇವರು ನಿರ್ಮಿಸುವ ಕಲಾಕೃತಿ ನಾಟಕ, ಕವಿತೆ, ಚಲನಚಿತ್ರ ಯಾವುದೇ ಆಗಲಿ ನೈಜ ಕತೆಯನ್ನಾಧರಿಸಿರುತ್ತವೆ. ಸಹಜವಾಗಿ ಇಲ್ಲಿ ಯಾರೂ 'ಸಾವು' ಅಥವಾ ಸಾವಿಗೆ ಹೆದರುವುದಿಲ್ಲ. ಯಮ ಸ್ವರೂಪಿ ಯುದ್ಧ ಟ್ಯಾಂಕ್‌ಗಳಿಗೆ ಕಲ್ಲು ಎಸೆಯುತ್ತಲೇ ಇವರ ಜೀವನ ಸಾಗುತ್ತದೆ.


ಇಲ್ಲಿ ಕಣ್ಣೀರಿದೆ ಅಳು ಇಲ್ಲ (ಜಞ ಣಜಚಿಢಿ, ಛಣಾಣ ಟಿಂ ಛಿಡಿಥಿಟಿಂ). ಸಾವು ನೆತ್ತಿಯ ಮೇಲೆ ಒಡಲಲ್ಲಿ ಪಕ್ಕದಲ್ಲಿ ಎರಗುವ ಭೀತಿಯಿದ್ದರೂ ಅಂಜಿಕೆಯಿಲ್ಲ. ತಮ್ಮ ನಾಡಿನಲ್ಲೇ ಗೋಡೆಗಳ ಮಧ್ಯೆ ನಿರಾಶ್ರಿತರ ಕ್ಯಾಂಪ್ ಬೇಲಿಯೊಳಗೆ ಗ್ಯಾರಂಟಿ ಸ್ಥಾವರವಿಲ್ಲದ ಜಂಗಮ ಜೀವ ನಡೆಸುವ ಪರಿ ಮನ ಕಲಕುತ್ತದೆ. ಆ ಮರೆಯಲಾಗದ ದೃಶ್ಯಗಳು ನಿರಂತರವಾಗಿ ಕಾಡುತ್ತವೆ. ಪ್ಯಾಲೆಸ್ತೀನಿಯರ ಕಥೆ ಮುಸ್ಲಿಮ್‌ರದ್ದೇ ಎಂದೂ ಇಂಡಿಯಾದಲ್ಲಿ ಸಾಮಾನ್ಯ ಭಾವನೆ. ಇಲ್ಲಿ ಎಲ್ಲ ಧರ್ಮದವರು ಜನಾಂಗದವರೂ ಇದ್ದಾರೆ ಮತ್ತು ನಡೆಯುವ ಹೋರಾಟದ ಭಾಗವಾಗಿದ್ದಾರೆ.

ಫ್ರೀಡಂ ಥಿಯೇಟರ್‌ನ ಮುಖ್ಯಸ್ಥ ಫೈಸಲ್ ಮಾತನಾಡುತ್ತಿದ್ದರೆ ಭಾಷೆ, ಉಚ್ಚಾರಣೆ ತಿಳಿಯದಿದ್ದವರನ್ನು ತಟ್ಟುತ್ತಿತ್ತು. ಅದು ಹೃದಯದ ಭಾಷೆ, ಹೃದಯವನ್ನು ತಲುಪುತ್ತಿತ್ತು. ಆ ಭಾಷೆ, ಆ ಪದ ಪುಂಜ ಮತ್ತೆ ಆ ಸ್ಪಿರಿಟ್ ಭಾಷಾಂತರಿಸುವುದಾಗಲಿ ವರದಿಮಾಡುವುದಾಗಲಿ ಆಗದ ಕೆಲಸ. ಹೃದಯ ಮಾತಾಡಿದಾಗ ಕೇಳುಗರು ಮೌನವಾಗಿ ಕಂಬನಿ ಮಿಡಿಯುತ್ತಾರೆ, ದಾಖಲಿಸಲು ತೊಡಗಿಸಿಕೊಂಡ ಲೇಖನಿ ಸುಮ್ಮನಾಗುತ್ತದೆ. 5 ಬ್ರೋಕನ್ ಕ್ಯಾಮೆರಾಸ್(ಮುರಿದ ಕ್ಯಾಮರಗಳು) ಅಥವಾ ಅರ್ನ್ಯಾಸ್ ಚಿಲ್ಡ್ರನ್ (ಅರ್ನ್ಯಾಳ ಮಕ್ಕಳು) ಚಲನಚಿತ್ರ ನೋಡಿ ಹೊರಬಂದಾಗ ಯಾರಿಗೂ ಮಾತು ಹೊರಡುತ್ತಿರಲಿಲ್ಲ. ನಮ್ಮ ಜೀವನದ ಅನುಭವಗಳನ್ನು ಹೋಲಿಕೆ ಮಾಡಿಕೊಳ್ಳುವುದು ದೊಡ್ಡ ತಪ್ಪು ಎಂದೂ ಒಬ್ಬ ಪ್ರೇಕ್ಷಕ ಹೇಳಿಕೊಳ್ಳುತ್ತಿದ್ದರು.

ಕಳೆದ 67 ವರ್ಷಗಳಿಂದ ಪ್ಯಾಲೆಸ್ತೀನಿಯರು ಅನುಭವಿಸುತ್ತಿರುವ ವೇದನೆ ಆಕ್ರಮಣ, ಹಿಂಸೆಗಳಿಗೆ ಮುಖಾಮುಖಿಯಾಗಿಸುವ ಅದಮ್ಯ ಚೈತನ್ಯ ಪ್ರಬಲ ಪ್ರತಿರೋದಕ್ಕೆ ಹೆದರರದ ಕೆಚ್ಚೆದೆ, ದೃಢತೆ ಎಲ್ಲರನ್ನೂ ತಟ್ಟುತ್ತಿತ್ತು.

ಪ್ಯಾಲೆಸ್ತೀನಿ ಫ್ರೀಡಂ ಥಿಯೇಟರ್ ಮತ್ತು ಜನ ನಾಟ್ಯ ಮಂಚ್ ಜಂಟಿಯಾಗಿ ತಯಾರಿಸಿ ಪ್ರಸ್ತುತ ಪಡಿಸಿದ 'ಹಮೇಶಾ ಸಮಿದಾ' (ಎಂದೆಂದಿಗೂ ದೃಢವಾಗಿರು) ನಾಟಕದಲ್ಲಿ ಸಂದೂಕ, ಕೀಲಿಕೈ ಮತ್ತು ಒಲಿವ್ ಮರದ ಸಂಕೇತ ಮತ್ತು ಚಲನಚಿತ್ರದಲ್ಲಿ ತೋರಿಸುವ ಆಲಿವ್ ಸಸಿಯನ್ನು ಕಿತ್ತೆಯೆಸೆಯುವ ಮತ್ತೆ ಅದನ್ನು ನೆಡುವ ದೃಶ್ಯಗಳು ಚಿರಸ್ಥಾಯಿಯಾಗಿ ನಿಂತು ಭೀಕರ ಅಭದ್ರತೆಯಲ್ಲೂ ಇಟ್ಟುಕೊಂಡ ನಂಬಿಕೆಯ ದ್ಯೋತಕವಾಗಿದೆ. ಚಲನಚಿತ್ರಗಳಿಗೆ ಹೋಲಿಸಿದಾಗ ನಾಟಕಗಳ ಸಾಂದ್ರತೆ ಮತ್ತು ತೀವ್ರತೆ ಕಡಿಮೆಯೆನಿಸಿದರೂ ಮುಖವಾಡಗಳ ಬಳಕೆಯಿಂದ ಸಮಸ್ಯೆಯ ಮೂಲದ ಶೋಧವಿದೆ. ಆದರೆ ಅರ್ನ್ಯಾಳ ಮಕ್ಕಳು ಚಿತ್ರದ ಅರ್ನ್ಯಾ ಕ್ಯಾನ್ಸರ್‌ಪೀಡಿತ ಮಹಿಳೆ ಸಿಳ್ಳೆ ಹೊಡೆಯುತ್ತಾ ವಾಹನಗಳನ್ನು ಗಟ್ಟಿಯಾಗಿ ಹಾರ್ನ್ ಮಾಡುವಂತೆ ಪ್ರಚೋದಿಸುವ ದೃಶ್ಯ, ಮಕ್ಕಳ ನಾಟಕ, ಹಾಡುಗಳು ಆಕೆಯ ಬದುಕು ನೋಡುವಾಗ ಎಲ್ಲರ ಕಣ್ಣು ತೇವವಾಗುತ್ತದೆ.





JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**